
ಪ್ರಚೋದನೆ


ಲಂಕೇಶ್

17 ಸೆಪ್ಟೆಂಬರ್ 2014 ಪುಟ 20 ರೂ. 15/-




ಯುಆರ್‌ಎ ಒಂದು ರೂಪಕ

ಸಗಣಿ ಸ್ವಾಮಿಯ ಕಾಮ ಕಥಾ!










ಅಪ್ಪ ಗೋಮುಖ ಮಗ ಕಾಮುಕ

ಹೊಸ ಸರ್ಕಾರದ ಆರೋಗ್ಯ ನೀತಿ
ವೃದ್ಧಿಸಲಿರುವ ವಿಮಾ ಕಂಪೆನಿಗಳ ಆರೋ



ವೈದ್ಯರೇ ಆರೋಗ್ಯ ಸಚಿವರಾಗುವುದು ಹೊಸತೇನಲ್ಲ, ಈಗಿನ ಎನ್‌ಡಿಎ ಸರ್ಕಾರದಲ್ಲೂ ದೆಹಲಿಯ ಡಾ.ಹರ್ಷವರ್ಧನ್ ಕೇಂದ್ರ ಆರೋಗ್ಯ ಸಚಿವರಾಗಿದ್ದಾರೆ. ಆದರೆ ಅವರು ಮೇಲಿಂದ ಮೇಲೆ ಉದ್ಘಾಟಿಸುತ್ತಿರುವ ಯಾವ ಯೋಜನೆಯಲ್ಲೂ ದೇಶದ ಜನರ ಆರೋಗ್ಯ ಹೆಚ್ಚಿಸುವ ಪ್ರಯತ್ನ ಕಾಣುತ್ತಿಲ್ಲ, ಮೇಲ್ನೋಟಕ್ಕೆ ಮಾತ್ರ ಅವರ ಕಾರ್ಯಕ್ರಮಗಳು ಸಾಮಾನ್ಯ ಜನರ ಪರ ಎಂದು ಬಿಂಬಿತವಾಗುತ್ತವೆ. ಉದಾಹರಣೆಗೆ, ಕಳೆದ ವಾರ (ಆಗಸ್ಟ್ 29ರಂದು) ಡಾ.ಹರ್ಷವರ್ಧನ್ ಒಂದು ಯೋಜನೆಯನ್ನು ದೇಶದ ರಾಜಧಾನಿಯಲ್ಲಿ ಆರಂಭಿಸಿದರು. ಅದರ ಅನ್ವಯ ದೆಹಲಿಯ ಸಿ.ಜಿ.ಎಚ್.ಎಸ್ (ಕೇಂದ್ರ ಸರ್ಕಾರದ ಆರೋಗ್ಯ ಸೇವೆಯ) ಆಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗೆ ಮಧ್ಯಾಹ್ನ 1.30ರಿಂದ 3ರವರೆಗೆ ಉಚಿತವಾಗಿ 'ನೋಡುತ್ತಾರೆ'. ಗುಣಮಟ್ಟದ ದೃಷ್ಟಿಯಿಂದ ರಾಜ್ಯ ಸರ್ಕಾರೀ ಆಸ್ಪತ್ರೆಗಳಿಗಿಂತ ಉತ್ತಮವಾಗಿರುವ ಸದರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಎಂದರೆ ಎಲ್ಲರಿಗೂ ಖುಷಿಯೇ. ಆದರೆ, ಯೋಜನೆಯ ವಿವರಗಳನ್ನು ನೋಡಿದರೆ ಕೇವಲ ವೈದ್ಯರ ಜೊತೆ ಸಮಾಲೋಚನೆ ಮಾತ್ರ ಉಚಿತ. ಔಷಧಿಗಳನ್ನು ಉಚಿತವಾಗಿ ನೀಡುವುದಿಲ್ಲ (ಆ ಸೌಲಭ್ಯ ಕೇಂದ್ರ ಸರ್ಕಾರೀ ನೌಕರರಿಗೆ ಮಾತ್ರ ಲಭ್ಯ). ಎಲ್ಲಕ್ಕೂ ಹಣ ತೆರುವುದಾದರೆ, ಈ ಆಸ್ಪತ್ರೆಗೆ ಏಕೆ ಬರಬೇಕು?

ಇಂತಹ ಹಲವಾರು ಯೋಜನೆಗಳನ್ನು ನೋಡಬಹುದು. ಆದರಲ್ಲೂ 100 ಕೋಟಿ ಬಜೆಟ್‌ನ ಹತ್ತಾರು ಯೋಜನೆಗಳನ್ನು ಘೋಷಿಸಲಾದ ಕೇಂದ್ರ ಬಜೆಟ್‌ನಲ್ಲೂ ಇದಕ್ಕೆ ಹಲವು ನಿದರ್ಶನಗಳು ಕಾಣುತ್ತವೆ. ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್)ಯ ಮಾದರಿಯಲ್ಲಿ ದೇಶದ ನಾಲ್ಕು ಬೇರೆ ಬೇರೆ ಭಾಗಗಳಲ್ಲಿ ದೊಡ್ಡಾಸ್ಪತ್ರೆಗಳನ್ನು ತೆಗೆಯುವ ಯೋಜನೆಯಂತಹವು. ಅವೆಲ್ಲವೂ ಬಳಕೆದಾರರ ಶುಲ್ಕವನ್ನು ಹೊಂದಿರುವ 'ಉನ್ನತ' ಮತ್ತು 'ಸ್ವಾಯತ್ತ' ಆಸ್ಪತ್ರೆಗಳಾಗಿರುತ್ತವೆ. ಪ್ರಾಥಮಿಕ ಆರೋಗ್ಯ ಸೇವೆ ನೀಡುವ ವ್ಯವಸ್ಥೆಯನ್ನು ಬಲಪಡಿಸುವ ಯಾವುದೇ ಯೋಜನೆಗಳು ಬಜೆಟ್‌ನಲ್ಲಿ ಇರಲಿಲ್ಲ.

ಯುಪಿಎ ಸರ್ಕಾರ ಇದ್ದಾಗಿನಿಂದ ಮಾತನಾಡುತ್ತಾ ಬರಲಾಗಿರುವ ಸಾರ್ವತ್ರಿಕ ಆರೋಗ್ಯ ಕವರೇಜ್ ಎಂಬ ಹುನ್ನಾರವನ್ನು ಎನ್‌ಡಿಎ ಸರ್ಕಾರವು ಯಶಸ್ವಿಯಾಗಿ ಜಾರಿ ಮಾಡಲು ಹೊರಟಿದೆ. ಎಲ್ಲರಿಗೂ ಆರೋಗ್ಯ ಎನ್ನುವುದನ್ನು ಎಲ್ಲರಿಗೂ ಆರೋಗ್ಯ ಕವರೇಜ್ ಎಂದು ಬದಲಾಯಿಸಿರುವುದರಲ್ಲೇ ಹುನ್ನಾರ ಅಡಗಿದೆ. ಕರ್ನಾಟಕದ್ದೇ ಒಂದು ಉದಾಹರಣೆಯ ಮೂಲಕ ವಿವರಿಸುವುದಾದರೆ, ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ನಾರಾಯಣ ಹೃದಯಾಲಯದ ದೇವಿ ಪ್ರಸಾದ್ ಶೆಟ್ಟಿ ಎಂಬ ಕಾರ್ಪೋರೇಟ್ ವೈದ್ಯನ ಸಲಹೆಯ ಮೇರೆಗೆ 'ಯಶಸ್ವಿನಿ' ಎಂಬ ಯೋಜನೆಯನ್ನು ಆರಂಭಿಸಲಾಯಿತು. ಗ್ರಾಮೀಣ ಭಾಗದ ಸಹಕಾರೀ ಸಂಘಗಳ ಸದಸ್ಯರಾಗಿರುವವರು ತಮ್ಮ ಕುಟುಂಬಕ್ಕೆ ವಾರ್ಷಿಕ ಸಣ್ಣ ಮೊತ್ತದ ಹಣ ಪಾವತಿಸುವುದರ ಮೂಲಕ ಹೃದಯ ಹಾಗೂ ಇನ್ನಿತರ ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಪಡೆದುಕೊಳ್ಳಬಹುದು. ಮೊದಲಿಗೆ ಕೆಲವೇ ಆಸ್ಪತ್ರೆಗಳ, ಕೆಲವೇ ಶಸ್ತ್ರ ಚಿಕಿತ್ಸೆಗಳಿಗೆ ಸೀಮಿತವಾಗಿದ್ದ ಈ ಯೋಜನೆಯು ಈಗ ನೂರಾರು ಖಾಸಗಿ ಆಸ್ಪತ್ರೆಗಳಲ್ಲಿ ನೂರಾರು ಶಸ್ತ್ರಚಿಕಿತ್ಸೆಗಳಿಗೆ ವಿಸ್ತರಿತವಾಗಿದೆ. ಈ ಯೋಜನೆಯಡಿ, ಸರ್ಕಾರೀ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಪಡೆದುಕೊಳ್ಳಬಹುದಾದರೂ, ಸರ್ಕಾರೀ ಆಸ್ಪತ್ರೆಗಳ ಸಮಸ್ಯೆಯನ್ನು ಅನುಭವಿಸಿರುವವರೆಲ್ಲರೂ ಖಾಸಗಿ ಆಸ್ಪತ್ರೆಗಳಿಗೇ ಹೋಗುತ್ತಾರೆ.

ಸಹಕಾರೀ ಇಲಾಖೆಯ ಮೂಲಕ ವಿಮಾ ಕಂಪೆನಿಗೆ, ಅದರಿಂದ ಖಾಸಗಿ ಆಸ್ಪತ್ರೆಗಳಿಗೆ ಕೋಟ್ಯಾಂತರ ಹಣ ಹರಿದುಹೋಗುತ್ತಿದೆ. ಯಾವ ಖಾಸಗಿ ಆಸ್ಪತ್ರೆಗೂ ಕಡಿಮೆಯಿಲ್ಲದಂತೆ, ಹಾಗೆ ನೋಡಿದರೆ ಖಾಸಗಿ ಆಸ್ಪತ್ರೆಗಳಿಗಿಂತ ಅತ್ಯುತ್ತಮವಾದ ಪರಿಸ್ಥಿತಿಯಲ್ಲಿ ಇರುವ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲೂ ಈ ಯೋಜನೆಯಡಿ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಎಲ್ಲಾ ಹೃದ್ರೋಗಿಗಳು ಜಯದೇವದಲ್ಲೇ ಚಿಕಿತ್ಸೆ ಪಡೆದುಕೊಂಡು, ಆ ಎಲ್ಲಾ ಹಣ ಈ ಆಸ್ಪತ್ರೆಗೇ ಬಂದಿದ್ದರೆ, ರಾಜ್ಯದ ಪ್ರತೀ ಜಿಲ್ಲಾ ಕೇಂದ್ರದಲ್ಲೂ ಅದರ ಶಾಖೆಯನ್ನು ತೆರೆಯಬಹುದಿತ್ತು, ಇದು ಕೇವಲ ಆಶಯ. ಏಕೆಂದರೆ, ಯಶಸ್ವಿನಿ ಯೋಜನೆಯನ್ನು ತಂದಿರುವುದೇ ರೋಗಿಗಳನ್ನು ವಾಹಕರನ್ನಾಗಿಸಿ, ಸರ್ಕಾರೀ ಹಣವನ್ನು ಖಾಸಗಿಯವರ ತಿಜೋರಿಗೆ ಸುರಿಯಲಿಕ್ಕೆ. ಆದರ ಪರಿಣಾಮವೆಂದರೆ, ನಾರಾಯಣ ಹೃದಯಾಲಯದ ಶಾಖೆಗಳು ರಾಜ್ಯಾದ್ಯಂತ ವಿಸ್ತರಣೆಗೊಳ್ಳುತ್ತವೆಯೇ ಹೊರತು ಜಯದೇವ ಆಸ್ಪತ್ರೆಯದ್ದಲ್ಲ. ಒಂದು ಸರ್ಕಾರೀ ಆಸ್ಪತ್ರೆಯನ್ನು ಎಷ್ಟು ಅಚ್ಚುಕಟ್ಟಾಗಿ ಮತ್ತು ಅದ್ಭುತವಾಗಿ ನಡೆಸಬಹುದೆನ್ನುವುದಕ್ಕೆ ಜಯದೇವ ಆಸ್ಪತ್ರೆ ಮತ್ತು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗಳು ಸಾಕ್ಷಿಯಾಗಿ ನಿಂತಿವೆ. ಸರ್ಕಾರದ ಎಲ್ಲಾ ಆರೋಗ್ಯ ಯೋಜನೆಗಳ ಹಣವನ್ನು ಇದೇ ರೀತಿ ಬಳಸಿ, ಸರ್ಕಾರೀ ಆಸ್ಪತ್ರೆಗಳ ನೆಟ್‌ವರ್ಕನ್ನು ವಿಸ್ತರಿಸದೇ ಖಾಸಗಿಯವರಿಗೆ ಸರ್ಕಾರೀ ಹಣವೂ ಹರಿಯುವಂತೆ ಮಾಡುವ ಯೋಜನೆಯೇ ಸಾರ್ವತ್ರಿಕ ಆರೋಗ್ಯ ಕವರೇಜ್.



ಇದರ ಮೂಲ ಉದ್ದೇಶ ಯಶಸ್ವಿಯಾಗಬೇಕೆಂದರೆ, ಅಂದರೆ ಖಾಸಗಿ ಆಸ್ಪತ್ರೆಗಳಿಗೆ ಲಾಭವಾಗಬೇಕೆಂದರೆ ಸರ್ಕಾರೀ ಆಸ್ಪತ್ರೆಗಳಿಗೆ ಜನರು ಹೋಗಬಾರದು. ಅವು ಮತ್ತಷ್ಟು ದುರ್ಬಲವಾಗಬೇಕು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಸರ್ಕಾರಗಳು ಮಾಡುತ್ತಿವೆ. ಹೀಗಾಗಿ ಸರ್ಕಾರೀ ಆಸ್ಪತ್ರೆಗಳಿಗೇ (ಎಲ್ಲಾ ಅವ್ಯವಸ್ಥೆಯ ಹೊರತಾಗಿಯೂ) ಹೋಗುತ್ತಿದ್ದ ಬಡವರನ್ನೂ ಅಲ್ಲಿಂದ ವಿಮುಖರನ್ನಾಗಿಸಲೂ ಯೋಜನೆಗಳು ಸಿದ್ಧವಾಗಿವೆ. ಇದುವರೆಗೆ ಕೆಲವು ಕಡೆ ಉಚಿತ ಔಷಧಿ ನೀಡುತ್ತಿದ್ದ ರಾಜ್ಯಗಳಲ್ಲೂ ಅದನ್ನು ಹಿಂತೆಗೆದುಕೊಳ್ಳಲು ಆರಂಭಿಸಿದ್ದಾರೆ.

ಭಾರತದಲ್ಲಿ ಸಂಪೂರ್ಣ ಉಚಿತ ಔಷಧಿ ನೀಡುವ ಯೋಜನೆ ಇದ್ದದ್ದು ತಮಿಳುನಾಡು, ಛತ್ತೀಸ್‌ಗಢ ಮತ್ತು ರಾಜಸ್ತಾನದಲ್ಲಿ, ಇವುಗಳಲ್ಲಿ 2011ರಲ್ಲಿ ರಾಜಸ್ತಾನದ ಅಂದಿನ ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದಿದ್ದ 'ಮುಖ್ಯಮಂತ್ರಿ ನಿಶುಲ್ಕ್ ದವಾ ಯೋಜನೆ'ಯು ವಿಶೇಷವಾದ ಮೆಚ್ಚುಗೆಯನ್ನು ಗಳಿಸಿತ್ತು. ಯಾವುದೇ ಕಾರ್ಡುಗಳ ಅಗತ್ಯವಿಲ್ಲದೇ, ಎಲ್ಲಾ ವರ್ಗದ ರೋಗಿಗಳಿಗೂ ಸರ್ಕಾರೀ ಆಸ್ಪತ್ರೆಗಳಲ್ಲಿ ಸಂಪೂರ್ಣವಾಗಿ ಉಚಿತವಾದ ಔಷಧಿಗಳನ್ನು ನೀಡಲಾಗುತ್ತಿತ್ತು. ಅದರ ಜೊತೆಗೆ ಉಚಿತವಾಗಿ ರೋಗ ನಿದಾನ (ಡಯಾಗ್ನಾಸ್ಟಿಕ್ಸ್) ಪರೀಕ್ಷೆಗಳನ್ನೂ ಮಾಡಲಾಗುತ್ತಿತ್ತು. ಇದನ್ನು 2013ರ ವಿಶ್ವ ಆರೋಗ್ಯ ಸಮ್ಮೇಳನದಲ್ಲೂ ಸಾರ್ವತ್ರಿಕ ಆರೋಗ್ಯ ವ್ಯವಸ್ಥೆಯ ಅತ್ಯುತ್ತಮ ಉದಾಹರಣೆಯಾಗಿ ಮುಂದಿಡಲಾಗಿತ್ತು.

ಆದರೆ ಈಗ ವಸುಂಧರಾ ರಾಜೆ ನೇತೃತ್ವದ ಬಿಜೆಪಿ ಸರ್ಕಾರವು ಈ ಯೋಜನೆಯನ್ನು 'ಬಡವರಿಗೆ' ಮಾತ್ರ ನೀಡುವುದಾಗಿ ಹೇಳಿದೆ. ಬಡವರೆಂದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಕಾರ್ಡು ಪಡೆದುಕೊಂಡವರು. ಆದರೆ ರಾಜಸ್ತಾನದ ಆಹಾರ ಸಚಿವ ಹೇಮ್ ಸಿಂಗ್ ಭಡಾನಾ ಜುಲೈನಲ್ಲಿ ರಾಜ್ಯ ವಿಧಾನಸಭೆಯಲ್ಲಿ ಹೇಳಿದ್ದೇನೆಂದರೆ 85 ಲಕ್ಷ ಜನರಿಗೆ ನೀಡಲಾಗಿದ್ದ ರೇಷನ್ ಕಾರ್ಡುಗಳನ್ನೂ ಕಡಿತಗೊಳಿಸಲಾಗುವುದು! ಭಾರೀ ಬಹುಮತದಿಂದ ಆರಿಸಿ ಬಂದಿರುವ ಬಿಜೆಪಿ ಸರ್ಕಾರವು ರಾಜಾಸ್ತಾನದಲ್ಲಿ ಜನರಿಗೆ ನೀಡುತ್ತಿರುವ ಕೊಡುಗೆ ಇದು.

ಇಂತಹುದೇ ಕೊಡುಗೆಗಳನ್ನು ಮೋದಿ ಸರ್ಕಾರವು ಯೋಜಿಸಿದೆ. ಅದರಲ್ಲಿ ಒಂದು 'ಭರವಸೆ ಅಭಿಯಾನ'. (National Healt? Assurance Mission). ಈ ರಾಷ್ಟ್ರೀಯ ಆರೋಗ್ಯ ಭರವಸೆ ಅಭಿಯಾನವನ್ನು ಈ ವರ್ಷವೇ ಆರಂಭಿಸಲಾಗುವುದೆಂದು ಕೇಂದ್ರ ಆರೋಗ್ಯ ಸಚಿವರು ಹೇಳಿದ್ದಾರೆ. ಸಿಐಐ (ಭಾರತೀಯ ಕೈಗಾರಿಕೆಗಳ ಒಕ್ಕೂಟ) ಇತ್ತೀಚೆಗೆ ಏರ್ಪಡಿಸಿದ್ದ 8ನೇ ಆರೋಗ್ಯ ವಿಮಾ ಸಮ್ಮೇಳನದಲ್ಲಿ ಈ ಮಾತನ್ನು ಹೇಳಿದ್ದಾರೆ. ಈ ಅಭಿಯಾನದಲ್ಲಿ ಎಲ್ಲರಿಗೂ 'ತಡೆಯಬಹುದಾದ ಕಾಯಿಲೆ'ಗಳ ಕುರಿತು 'ಮಾಹಿತಿ' ನೀಡುವುದು, 'ಅತ್ಯಗತ್ಯ' ಔಷಧಿಗಳು ಮತ್ತು ಕೆಲವು ರೋಗನಿದಾನ (ಡಯಾಗ್ನಾಸ್ಟಿಕ್) ಪರೀಕ್ಷೆಗಳು ಸಿಗುವ ಬಗ್ಗೆ ಭರವಸೆ ನೀಡಲಾಗುತ್ತದೆ. (ಇದರಲ್ಲಿ ಖಾತರಿ ಎಂಬ ಪದವನ್ನೂ ಬಳಸಲಾಗಿಲ್ಲ, ಕೇವಲ ಅಶ್ಯೂರೆನ್ಸ್).

ಆರೋಗ್ಯ ಸಚಿವರ ಪ್ರಕಾರ ಹೆಲ್ತ್ ಅಶ್ಯೂರೆನ್ಸ್‌ನ ಪ್ರಮುಖ ಭಾಗವಾಗಿ ಆರೋಗ್ಯ ವಿಮೆ ಇರುತ್ತದೆ. ಈ ಅಭಿಯಾನವನ್ನು ಸಮ್ಮೇಳನದಲ್ಲಿ ವಿವರಿಸಿದ್ದು ಮಂತ್ರಿಯೂ ಅಲ್ಲ; ಸರ್ಕಾರೀ ಅಧಿಕಾರಿಯೂ ಅಲ್ಲ, ಬದಲಿಗೆ ಮೆದಾಂತ-ದಿ ಮೆಡಿಸಿಟಿಯ ಅಧ್ಯಕ್ಷ ನರೇಶ್ ಟ್ರೆಹಾನ್. ಆತನ ಪ್ರಕಾರ 'ಸರ್ಕಾರೀ, ಖಾಸಗಿ ಮತ್ತು ಎನ್‌ಜಿಒ ಕ್ಷೇತ್ರದ ಎಲ್ಲಾ ವಿಮೆಗಳನ್ನೂ ಒಟ್ಟುಗೂಡಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರೀ ಆರೋಗ್ಯ ಯೋಜನೆಗಳೆಲ್ಲವೂ ಇದರಲ್ಲಿ ವಿಲೀನವಾಗಬೇಕು. ಸರ್ಕಾರವು ಮೂಲ ಸೌಕರ್ಯಗಳನ್ನು ಒದಗಿಸುವುದು ಬಹಳ ಸಮಯ ತೆಗೆದುಕೊಳ್ಳುತ್ತದೆ. ಅಲ್ಲಿಯವರೆಗೆ ಕಾಯಲಾಗುವುದಿಲ್ಲ'. ಈತನ ಜೊತೆಗೆ ಜಾನ್‌ಸನ್ ಜಾನ್‌ಸನ್ ಕಂಪೆನಿಯ ಏಷ್ಯಾ ಪೆಸಿಫಿಕ್ ಭಾಗದ ವೈಧೀಶ್ ಹೇಳಿದ್ದು 'ಭಾರತದ 100 ಕೋಟಿ ಬೆಳೆಸಿದ ಇಲ್ಲಿನ ಟೆಲಿಕಾಂ ಸೆಕ್ಟರ್‌ನ ಶಕ್ತಿಯಂತೆಯೇ ಕ್ಷೇತ್ರದಲ್ಲೂ ಒಂದು ಸಮಗ್ರ ಮತ್ತು ಹೈಬ್ರಿಡ್ ನಮಗೆ ಬೇಕಿದೆ'.

ಸಿಐಐ ಸಮ್ಮೇಳನದಲ್ಲಿ ಸ್ವತಃ ಆರೋಗ್ಯ ಸಮ್ಮುಖದಲ್ಲಿ ಈ ಕಾರ್ಪೋರೇಟ್‌ಗಳು ಈ ರಿ ಮಾತುಗಳನ್ನಾಡುತ್ತಿರುವುದು ಅವರಿಗೆ ಸಿಕ 'ಖಾತರಿ'ಯಿಂದಲೇ ಹೊರತು ಕೇವಲ 'ಭ ಮಾತ್ರದಿಂದಲ್ಲ; ಆರೋಗ್ಯ ವಿಮೆಯ ಕ ಜನಸಾಮಾನ್ಯರಿಗೆ ಸರ್ಕಾರದಿಂದ ಕಟ್ಟಿಸಿ, ಅದರ ಸಂ ಲಾಭವನ್ನು ವಿಮಾ ಕಂಪೆನಿಗಳು ಮತ್ತು ವೈದ್ಯ ಕಾರ್ಪೋರೇಟ್‌ಗಳು ಪಡೆದುಕೊಳ್ಳಲಿದ್ದಾರೆ. ಸ ಆಸ್ಪತ್ರೆಗಳನ್ನು ಸಂಪೂರ್ಣವಾಗಿ ದುರ್ಬಲಗೊಳಿಸಲಾ ಹೋಗಲಿ, ಈ ವಿಮಾ ಯೋಜನೆಗಳಿಂದ ಜನಸಾಮಾ ಉಚಿತವಾಗಿ ಒಳ್ಳೆಯ ಚಿಕಿತ್ಸೆಯಾದರೂ ದೊರೆತಿ ಆಂಧ್ರಪ್ರದೇಶದಲ್ಲಿ ಬಹಳ ದೊಡ್ಡ ಪ್ರಚಾರದೊಂದಿಗೆ ಬಂದಿರುವ ಆರೋಗ್ಯಶ್ರೀ ಯೋಜನೆಯ ಬಗ್ಗೆ ನಡೆ ಅಧ್ಯಯನ ಹೇಳುವುದೇನೆಂದರೆ, ಈ ವಿಮಾ ಯೋಜ ನಂತರವೂ ಜನರು ತಮ್ಮ ಜೇಬಿನಿಂದ ಮಾ ವೈದ್ಯಕೀಯ ವೆಚ್ಚವೇನೂ ಕಡಿಮೆಯಾಗಿಲ್ಲ.

ಈ ಯೋಜನೆಯಡಿ ಫಲಾನುಭವಿಗಳಿಗೆ ವಾ 2 ಲಕ್ಷ ರೂ. ಚಿಕಿತ್ಸಾ ವೆಚ್ಚವನ್ನು ಭರಿಸುವ ರೀತಿ ಸರ್ಕಾರವು ವಿಮೆ ಮಾಡಿಸಿರುತ್ತದೆ. ಶ್ರವಣಿ ಎಂಬ ಮ ಜಿಲ್ಲೆಯ ಮಗುವೊಂದನ್ನು ಜನ್ಮಜಾತ ಹೃದ್ರೋಗ ಚಿಕಿ ಆರೋಗ್ಯಶ್ರೀ ಯೋಜನೆಯಡಿಯಲ್ಲಿ ಅ ಮಾಡಿಕೊಳ್ಳಲಾಯಿತು. ಆಕೆಯನ್ನು 'ಆರೋಗ್ಯ (ಸರ್ಕಾರದಿಂದ ನೇಮಕಗೊಂಡ ಉದ್ಯೋ ಹೈದರಾಬಾದ್‌ನ ಬಂಜಾರಾ ಹಿಲ್ಸ್‌ನ ಕೇರ್ ಆ ಕಳಿಸಲಾಯಿತು. ಆಕೆಯ ತಂದೆ ದಿನಕ್ಕೆ 300 ಸಂಪಾದಿಸುತ್ತಿದ್ದ ಆಟೋರಿಕ್ಷಾ ಡ್ರೈವರ್. ಅಂತಿಮ ಆತನು ತನ್ನ ಕೈಯಿಂದ 30,000 ರೂ.ಗಳನ್ನು ಖ ಮಾಡಬೇಕಾಯಿತು. ಇಂತಹ ನೂರಾರು ನಿದರ್ಶ ಅಧ್ಯಯನದಲ್ಲಿ ಕಂಡುಬಂದಿವೆ. ಕೊಂಡಾಪುರ ಹಳ್ಳಿಯ ಕೂಲಿ ಜೆ.ರಾಮುಲು ಎಂಬಾತನದ್ದು ರೀತಿಯ 'ಕೇಸು'. ಆತ ತನ್ನ ಜ್ವರದ ಚಿಕಿತ್ಸೆಗಾಗಿ 16 ರೂ. ಖರ್ಚು ಮಾಡಬೇಕಾಯಿತು. ಆತನಿಗೆ ಟೈಫ ಮತ್ತು ಮಲೇರಿಯಾ ಎರಡೂ ಜ್ವರಗಳು ಬ ಬಂದಿದ್ದವು. ಜ್ವರವು ಆರೋಗ್ಯಶ್ರೀ ಅಡಿಯಲ್ಲಿ ಬರು ಏಕೆಂದರೆ ಈ ಜ್ವರವನ್ನು ಶಸ್ತ್ರಚಿಕಿತ್ಸೆ ಗುಣಪಡಿಸಲಾಗುತ್ತಿರಲಿಲ್ಲ!

ಇಂತಹ ವಿಮೆಗಳ ಮೂಲಕ ಲಾಭ ಮಾಡಿಕೊಳ್ಳುವ ಮತ್ತು ಜನರಿಗೂ ತೊಂದರೆ ಕೊ ಒಂದು ಹೊಸ ವ್ಯವಸ್ಥೆಯನ್ನು ಇಡೀ ದೇಶದ ಜನರ ಮೇಲೆ ಹೇರಲು ಸಿದ್ಧತೆಗಳನ್ನು ಮಾಡಿಕೊಳ್ಳಲಾ ಆ ಮೂಲಕ ವಿಮೆ ಕಂಪೆನಿಗಳು ಮತ್ತು ಕಾರ್ಪೋ ವೈದ್ಯ ಲೋಕದ ಕೈಗೆ ದೇಶದ ಜನರ ದೇಹ ಒಪ್ಪಿಸಲಾಗುತ್ತದೆ. ಜನರ ಆರೋಗ್ಯವು ಕುಸಿಯಲಿದೆ ವಿಮಾ ಕಂಪೆನಿಗಳ ತಿಜೋರಿ ವೃದ್ಧಿಯಾಗಲಿದೆ.

...ವ್ ಜಿಹಾದ್ ಎಂಬ ಪಿತೂರಿಯೂ, ಮಹಿಳೆಯ ಸ್ವಾತಂತ್ರ್ಯ ಹರಣವೂ

...ೀಗ ಎಲ್ಲೆಡೆ 'ಲವ್ ಜಿಹಾದ್' ಎಂಬ ಕಲ್ಪಿತ ತಂತ್ರದ ಬಗ್ಗೆ ಮಾತು-ಚರ್ಚೆ ...ತ್ತಿದೆ. ಅದರಲ್ಲೂ ಇನ್ನು ಕೆಲವೇ ದಿನಗಳಲ್ಲಿ ...ಪ್ರದೇಶ ರಾಜ್ಯದಲ್ಲಿ ಹಲವು ವಿಧಾನಸಭೆ ...ಗೆ ನಡೆಯಲಿರುವ ಉಪಚುನಾವಣೆಯ ಕಾವು ...ವಾಗಲೇ ಆರೆಸ್ಸೆಸ್‌ನ ಕುತಂತ್ರಿಗಳು ಈ ಬಗ್ಗೆ ...ಪ್ರಚಾರವನ್ನು ಶುರುಹಚ್ಚಿಕೊಂಡಿದ್ದಾರೆ. ಹಿಂದೂ ...ಕ್ಕಳ ಮಾನ-ಪ್ರಾಣ-ಧರ್ಮ ರಕ್ಷಿಸಲು ... ಪುರುಷರು 'ರಾಖಿ'ಗಳನ್ನು ...ಬೇಕೆಂದು ಚಡ್ಡಿಗಳು ಫರ್ಮಾನು ...ದ್ದಾರೆ.

...ಗಾಗಲೇ ಎಲ್ಲಾ ಮುಸಲ್ಮಾನರು ...ವಾದಕರು ಎಂಬಂತೆ ಚಿತ್ರಿಸಿರುವ ಚಡ್ಡಿಗಳು ... ಸಮುದಾಯದ ಯುವಕರು ವಂಚಕ ...ರು, ಪ್ರೀತಿ ಮಾಡುವ ನೆಪದಲ್ಲಿ ಅತ್ಯಾಚಾರ ...ವರು, ಹಿಂದೂ ಹೆಣ್ಣುಮಕ್ಕಳನ್ನು ...ಸುವ ಮೂಲಕ ಹಿಂದೂ ಧರ್ಮವನ್ನೇ ...ಲು ಸಂಚು ಹೂಡಿರುವವರು ಎಂಬಂತೆ ...ತ್ತಿದ್ದಾರೆ.

... 'ಲವ್ ಜಿಹಾದ್' ಎಂಬ ಪರಿಕಲ್ಪನೆಯೇ ... ಇಲ್ಲದ್ದು, ಇದನ್ನು ಈಗಾಗಲೇ ಎರಡು ... ಪೊಲೀಸರು ಕೋರ್ಟುಗಳ ಮುಂದೆ ...ದಿದ್ದಾರೆ. ಆದರೇನಂತೆ, ಚಡ್ಡಿಗಳಿಗೆ ಇಂತಹ ... ಬೇಕಿಲ್ಲ, ಅವರಿಗೆ ಬೇಕಿರುವುದು ಒಂದು ...ಯವನ್ನು ಕೆಟ್ಟರೀತಿಯಲ್ಲಿ ತೋರಿಸಿ, ...ಗಳಲ್ಲಿ ಅವ್ಯಕ್ತ ಭಯ ಮೂಡಿಸಿ, ...ವನ್ನು ಹಿಡಿಯುವ ತಂತ್ರ ಮಾತ್ರ.

...ರಿಗೂ ಗೊತ್ತಿರುವಂತೆ, ಈ 'ಲವ್ ...'ಅನ್ನು 2009ರಲ್ಲಿ ಹುಟ್ಟುಹಾಕಿದ್ದು ಯಾವ ...ನನಲ್ಲ, ಬದಲಾಗಿ ಸ್ವತಃ ಹಿಂದೂ ...ಭೂತವಾದಿಗಳೇ. ಅವರೇ ಮೊದಲು ಕೇರಳ ... 'ಹುಡುಗಿಯರೇ, ಲವ್ ಜಿಹಾದ್ ಬಗ್ಗೆ ...ಗಿರಿ' ಎಂಬಂತಹ ಪೋಸ್ಟರ್‌ಗಳನ್ನು ...ೋಡೆಗಳ ಮೇಲೆ ಅಂಟಿಸಿದ್ದರು. ಅಂತಹ ...ಗಳಲ್ಲಿ ಮುಸಲ್ಮಾನ ಯುವಕರು ಹಿಂದೂ ...ಯರನ್ನು ಲವ್ ಮಾಡುವಂತೆ ನಟಿಸುತ್ತಾರೆ, ... ಅವರನ್ನು ಇಸ್ಲಾಮ್ ಧರ್ಮಕ್ಕೆ ಮತಾಂತರ ನೀಡಲಾಗುತ್ತದೆ. ಅವರಿಗೆ ಜೀನ್ಸ್ ಪ್ಯಾಂಟು ಮತ್ತು ಮೋಟಾರ್ ಬೈಕ್‌ಗಳನ್ನು ಕೊಡಲಾಗುತ್ತದೆ. ಅವರೆಲ್ಲ ಮಹಿಳಾ ಕಾಲೇಜುಗಳ ಮುಂದೆ ಠಳಾಯಿಸುತ್ತಾ ಹಿಂದೂ ಹುಡುಗಿಯರನ್ನು ಪಟಾಯಿಸುತ್ತಾರೆ. ತಮ್ಮ ಬಲೆಗೆ ಬಿದ್ದ ಯುವತಿಯರನ್ನು ಮತಾಂತರ ಮಾಡಿಸುತ್ತಾರೆ" ಎಂಬ ಕಟ್ಟುಕತೆಯನ್ನು ಹಬ್ಬಿಸಲಾರಂಭಿಸಿತು. ಅಷ್ಟೇ ಅಲ್ಲ, ಇದೇ ಸಮಿತಿ ಪ್ರಕಟಿಸಿದ ಪತ್ರಿಕೆಯ ಪ್ರಕಾರ "ಬ್ರಾಹ್ಮಣ ಹುಡುಗಿಯರನ್ನು ಮತಾಂತರಿಸಿದರೆ ಹೆಚ್ಚು ನಗದನ್ನು, ಕೆಳಜಾತಿಯ ಯುವತಿಯಾದರೆ ಕಡಿಮೆ ಹಣವನ್ನು ಕೊಡಲಾಗುತ್ತದೆ. ಇದಕ್ಕೆಲ್ಲ ಅರಬ್ ದೇಶಗಳಿಂದ ಪೆಟ್ರೋ ಡಾಲರ್‌ಗಳು ಹರಿದುಬರುತ್ತಿವೆ" ಎಂದಿತ್ತು.

ಈ ಹಿನ್ನೆಲೆಯಲ್ಲಿ ಕೇರಳ ಹೈಕೋರ್ಟ್ ಕೂಡ 'ಲವ್ ಜಿಹಾದ್ ಎಂಬುದು ಇದೆಯೇ?' ಎಂದು ವಿಚಾರಿಸಲು ಕೇರಳದ ಪೊಲೀಸರಿಗೆ ತಾಕೀತು ಮಾಡಿತ್ತು. ಪಾಪ ಕೇರಳದ ಪೊಲೀಸರು ಎಲ್ಲೆಡೆ ತನಿಖೆ ಮಾಡಿದರೂ ಈ ತಂತ್ರದ ಬಗ್ಗೆ ಕಿಂಚಿತ್ತೂ ಸುಳಿವು ಸಿಗಲಿಲ್ಲ, ಅದನ್ನು ಅವರು ಕೋರ್ಟ್ ಮುಂದೆ ಒಪ್ಪಿಕೊಂಡಿದ್ದರು ಸಹ. ಅಲ್ಲಿಗೆ ಇದು ಅಂತ್ಯಗೊಳ್ಳಬೇಕಿತ್ತು, ಆದರೆ ಲವ್ ಜಿಹಾದ್ ಬೆನ್ನು ಹತ್ತಿದ್ದ ಹಿಂದೂತ್ವವಾದಿಗಳು ಅದನ್ನು ತಮ್ಮ ದುರುದ್ದೇಶಕ್ಕೆ ಜೀವಂತವಾಗಿಟ್ಟರು.

ಇದಾದ ಸ್ವಲ್ಪದಿನಗಳ ನಂತರ ಕರ್ನಾಟಕದ ಕರಾವಳಿ ಪ್ರದೇಶದಿಂದ ಹಲವಾರು ಯುವತಿಯರು ನಾಪತ್ತೆಯಾಗಿದ್ದು ದೊಡ್ಡ ಸುದ್ದಿಯಾಯಿತು. ಆಗ ವಜ್ರದೇಹಿ ಮಠದ ಸ್ವಾಮಿ ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ ನಡೆಸಿ "ಈ ಯುವತಿಯರನ್ನು ಲವ್ ಜಿಹಾದ್ ತಂತ್ರದಡಿ ಅಪಹರಿಸಿ ಮತಾಂತರ ಮಾಡಲಾಗಿದೆ" ಎಂದು ಅಬ್ಬರಿಸಿದ್ದ. ಆದರೆ ಆನಂತರದ ತನಿಖೆಯಿಂದ ಗೊತ್ತಾಗಿದ್ದೇನೆಂದರೆ, ಪಾಪ ಆ ಬಡ ಯುವತಿಯರು ತಮ್ಮ ಬದುಕಿನಲ್ಲಿ ಒಬ್ಬ ಪುರುಷನ ಪ್ರೇಮವನ್ನು ಅರಸಿ ಸೈನೈಡ್ ಮೋಹನ್ ಕುಮಾರ್ ಎಂಬ ಕಾಮುಕ ವಂಚಕನಿಗೆ ಬಲಿಯಾಗಿ ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದರು ಎಂಬುದು. ಅಲ್ಲಿಗೂ ಚಡ್ಡಿಗಳು ಈ ಲವ್ ಜಿಹಾದ್ ತಂತ್ರವನ್ನು ಕೈಬಿಡಲಿಲ್ಲ, ಅಸ್ತಿತ್ವದಲ್ಲೇ ಇಲ್ಲದ್ದನ್ನು ಸಾಬೀತುಪಡಿಸಲು ಅವರು ಮಾಡಿರುವ ಪ್ರಯತ್ನಗಳಿಗೆ ಲೆಕ್ಕವಿಲ್ಲ.

ಅವುಗಳಲ್ಲಿ ಒಂದು ಪ್ರಕರಣ ಸಿಲ್ವಾ ಎಂಬ ಯುವತಿಗೆ ಸಂಬಂಧಿಸಿದ್ದು. ಇಂಜಿನಿಯರಿಂಗ್ ಓದಿದ್ದ ಸಿಲ್ವಾ ಎಂಬಾಕೆ ಅಜ್ಗರ್ ಎಂಬ ಮುಸಲ್ಮಾನ ಯುವಕನನ್ನು ಪ್ರೀತಿಸಿ ಅವನೊಂದಿಗೆ ಓಡಿಹೋಗಿದ್ದಳು. ಆಗ ಆಕೆಯನ್ನು ಹುಡುಕಿಕೊಡಬೇಕೆಂದು ಆಕೆಯ ತಂದೆತಾಯಿ ಕರ್ನಾಟಕ ಹೈಕೋರ್ಟ್ ಮುಂದೆ 'ಹೇಬಿಯಸ್ ಕಾರ್ಪಸ್' ಅರ್ಜಿ ಸಲ್ಲಿಸಿದ್ದರು. ಸಿಲ್ವಾಳನ್ನು ಪೊಲೀಸರು ಹೈಕೋರ್ಟ್ ಮುಂದೆ ಹಾಜರುಪಡಿಸಿದಾಗ ಆಕೆ ಸ್ವಇಚ್ಛೆಯಿಂದ ಅಜ್ಗರ್‌ನೊಂದಿಗೆ ಹೋಗಿರುವುದಾಗಿಯೂ, ಸ್ವಇಚ್ಛೆಯಿಂದಲೇ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳ್ಳಲು ನಿರ್ಧರಿಸಿರುವುದಾಗಿಯೂ ಹೇಳಿದ್ದಳು. ಆದರೂ ಆಕೆಯ ವಿಚಾರಣೆ ಮಾಡುತ್ತಿದ್ದ ಹೈಕೋರ್ಟ್‌ನ ನ್ಯಾಯಮೂರ್ತಿಗಳು 'ಅವಳ ಮೇಲೆ ಲವ್ ಜಿಹಾದ್ ತಂತ್ರದಡಿ ಒತ್ತಡ ಹಾಕಲಾಗುತ್ತಿದೆಯೇ ಎಂದು ವಿಚಾರಿಸಿ' ಎಂದು ಪೊಲೀಸರಿಗೆ ಆದೇಶಿಸಿದ್ದರು.

ಕೇರಳ ಪೊಲೀಸರಂತೆ ಕರ್ನಾಟಕದ ಪೊಲೀಸರೂ ಅದೆಷ್ಟೇ ತನಿಖೆ ನಡೆಸಿದರೂ 'ಲವ್ ಜಿಹಾದ್'ನ ಪತ್ತೆಯೇ ಸಿಗಲಿಲ್ಲ! ಆಗ ಅವರೂ ಅದನ್ನೇ ನ್ಯಾಯಾಲಯದ ಮುಂದೆ ಹೇಳಿದ್ದರು. ಆದರೂ ಪ್ರಮೋದ್ ಮುತಾಲಿಕ್ ಮತ್ತು ಪ್ರಮಿಳಾ ನೇಸರ್ಗಿ ತರಹದ ಹಿಂದೂ ಧರ್ಮ ರಕ್ಷಕರು "ಹಿಂದೂ ಯುವತಿಯರನ್ನು ಮರುಳು ಮಾಡಿ ಮತಾಂತರ ಮಾಡಲಾಗುತ್ತಿದೆ" ಎಂದು ಬೊಬ್ಬೆ ಹೊಡೆದಿದ್ದರು. ತಮಾಷೆಯ ಸಂಗತಿ ಯಾವುದೆಂದರೆ ಅಜ್ಗರ್‌ನನ್ನು ಪ್ರೀತಿಸಿ ಮತಾಂತರಗೊಂಡಿದ್ದ ಸಿಲ್ವಾ ಹಿಂದೂ ಧರ್ಮಕ್ಕೆ ಸೇರಿದವಳೇ ಆಗಿರಲಿಲ್ಲ, ಬದಲಾಗಿ ಆಕೆ ಕ್ರಿಶ್ಚಿಯನ್ ಧರ್ಮೀಯಳಾಗಿದ್ದಳು!

ಹೀಗೆ ಕೇರಳದಲ್ಲಿ ಜನ್ಮವೆತ್ತಿದ 'ಲವ್ ಜಿಹಾದ್'ನ ಕಲ್ಪನೆಯು ಈಗ ಉತ್ತರಪ್ರದೇಶವನ್ನು ತಾಕಿದೆ. ಹೋದವರ್ಷ ಹೇಗೆ ಬಿಜೆಪಿ ನಾಯಕ ಕೆ.ಎಸ್. ಈಶ್ವರಪ್ಪ ಚುನಾವಣಾ ಪ್ರಚಾರದಲ್ಲಿ 'ಲವ್ ಜಿಹಾದ್' ವಿರುದ್ಧ ಬೊಬ್ಬೆ ಹೊಡೆದು (ಅದಕ್ಕೆ ಅವರು ಚುನಾವಣಾ ಆಯೋಗದಿಂದ ನೋಟಿಸನ್ನೂ ಪಡೆದಿದ್ದರು) ಕೋಮು ಧ್ರುವೀಕರಣ ಮಾಡಿ ಗೆಲ್ಲಲು ಯತ್ನಿಸಿದ್ದರೋ ಅದನ್ನೇ ಈಗ ಚಡ್ಡಿಗಳು ಉತ್ತರಪ್ರದೇಶದಲ್ಲಿ ಮಾಡಲು ಹೊರಟಿದ್ದಾರೆ.

ಅನ್ಯ ಧರ್ಮೀಯರನ್ನಲ್ಲ, ತನ್ನ 'ಹಿಂದೂ ಧರ್ಮ'ದ ಬೇರೆ ಜಾತಿಯವರನ್ನೋ, ತನ್ನದೇ ಜಾತಿಯ ಆದರೆ ಒಂದೇ ಗೋತ್ರದವರನ್ನೋ ಪ್ರೀತಿಸಿದ್ದಕ್ಕೆ ಖಾಪ್ ಪಂಚಾಯತ್‌ಗಳು ಹಲವಾರು ಕೊಲೆಗಳನ್ನು ಮಾಡಿ ಕುಖ್ಯಾತಿ ಗಳಿಸಿರುವ ರಾಜ್ಯ ಉತ್ತರಪ್ರದೇಶ. ಅಂತಹ ರಾಜ್ಯದಲ್ಲಿ ಚುನಾವಣಾ ಲಾಭಕ್ಕಾಗಿ ತನ್ನ ಹಿಂದೂ ಧರ್ಮದಲ್ಲಿರುವ ವಿಷವನ್ನು ಮರೆಮಾಚಿ ಅನ್ಯ ಧರ್ಮೀಯರನ್ನು ಚಡ್ಡಿಗಳು ಗುರಿ ಮಾಡುತ್ತಿರುವುದು ಈಗ ಸ್ಪಷ್ಟವಾಗಿದೆ.

ಅದೆಲ್ಲ ಬದಿಗಿರಲಿ, ಧರ್ಮವನ್ನೂ ಮೀರಿದ ತೀರಾ ಖಾಸಗಿಯಾದ ಒಂದು ಅಂಶವನ್ನು ಈ 'ಜಿಹಾದ್' ಎಂಬ ಹುಚ್ಚಾಟದಲ್ಲಿ ಮರೆಮಾಚಲಾ...



ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

ಬದುಕಿನ ಪಥದಲ್ಲಿ ಹಲವಾರು ವಿಷಯಗಳನ್ನು ತನಗೆ ಸೂಕ್ತ ಕಂಡಂತೆ ಆಯ್ಕೆ ಮಾಡಿಕೊಳ್ಳುವ ಶಕ್ತಿ ಇದೆ ಎಂಬುದನ್ನು ನಿರಾಕರಿಸುವ ಪುರುಷಪ್ರಧಾನ ಮನಸ್ಥಿತಿಯು ಆಕೆಯ ದೇಹವನ್ನು ತನ್ನ ಧರ್ಮ-ಮಾನ-ಮರ್ಯಾದೆಯನ್ನು ಕಾಪಾಡುವ ಅಸ್ತ್ರವೆಂದೇ ಪರಿಗಣಿಸುತ್ತದೆ. ಆ ಮೂಲಕ ಮಹಿಳೆಯರನ್ನು ರಕ್ಷಿಸುವ ನೆಪದಲ್ಲಿ ದಮನ ಮಾಡುತ್ತಲೇ ಮುಂದುವರೆಯುತ್ತದೆ.


ಯಾವುದೇ ಧರ್ಮದ ಮೂಲಭೂತವಾದಿಗಳು ಅನ್ಯಧರ್ಮೀಯರೊಂದಿಗಿನ ಮದುವೆಗಳನ್ನು ಅನಾದಿಕಾಲದಿಂದ ವಿರೋಧಿಸುತ್ತಿದ್ದರೂ ಅಂತರಜಾತಿ ಮತ್ತು ಅಂತರಧರ್ಮೀಯ ಮದುವೆಗಳು ನಡೆಯುತ್ತಾ ಬಂದಿವೆ. ಅಂತಹವರಲ್ಲಿ ಬಹಳಷ್ಟು ಜನ ಸುಖ ಸಂಸಾರಗಳನ್ನು ನಡೆಸುತ್ತಿದ್ದರೆ, ವಿವಿಧ ಕಾರಣಗಳಿಗೆ ಸ್ವಜಾತಿ ಮತ್ತು ಸ್ವಧರ್ಮದಲ್ಲೇ ನಡೆದಿರುವ ವಿವಾಹಗಳಲ್ಲಿ ಬಿರುಕು, ದಮನ, ಶೋಷಣೆಗಳು ನಡೆದು ಆ ದಾಂಪತ್ಯ ಮುರಿದುಬಿದ್ದಂತೆ ಅಂತರಜಾತಿ ಮತ್ತು ಅಂತರಧರ್ಮೀಯ ಮದುವೆಗಳೂ ಹಲವೊಮ್ಮೆ ಮುರಿದು ಬಿದ್ದಿವೆ. ಅದಕ್ಕೆ ಬದುಕು ಎನ್ನುತ್ತಾರೆ.

ಹಿಂದೂ ಮೂಲಭೂತವಾದಿಗಳು ಈಗ ಅದೆಷ್ಟೇ 'ಲವ್ ಜಿಹಾದ್' ವಿರುದ್ಧ ಅರಚಿದರೂ ಇತರೆ ಧರ್ಮದವರನ್ನು ಪ್ರೀತಿಸಿರುವವರು 'ಪ್ಯಾರ್ ಕಿಯಾ ತೋ ಡರ್ನಾ ಕ್ಯಾ' ಎಂದು ಡುಯೆಟ್ ಹಾಡುವುದನ್ನು ನಿಲ್ಲಿಸುವುದಿಲ್ಲ!

ಆಗ ಇತರರಿಗೆ ಇರುವ ಕೆಲಸವಾದರೂ ಎಂತಹದ್ದು? ಮಿಯಾ ಬೀವಿ ರಾಜಿ, ತೋ ಕ್ಯಾ ಕರೆಗಾ ಕಾಜಿ? ಅಲ್ಲವೇ!!







ಲವ್ ಜಿಹಾದ್ ವಿರುದ್ಧ ಕೋಮುವಾದಿಗಳು ಸೃಷ್ಟಿಸಿರುವ ಹಲವು ಪೋಸ್ಟರ್‌ಗಳು

...ತ್ತಾರೆ ಎಂದೆಲ್ಲ ಹೆದರಿಸಲು ಯತ್ನಿಸಿದ್ದರು.


...ವನ್ನೆಲ್ಲ ಅದೆಷ್ಟು ಹಿಂದೂ ಯುವತಿಯರು ...ದರೋ ಗೊತ್ತಿಲ್ಲ, ಆದರೆ ಕೇರಳದ ಕೆಲವು ...ನ್ ಸಂಸ್ಥೆಗಳಂತೂ ನಂಬಿಬಿಟ್ಟವು. ಆದರಲ್ಲೂ ... ಕ್ರಿಶ್ಚಿಯನ್ ಯುವತಿಯರು ನಾಲ್ವರು ...ನ ಯುವಕರೊಂದಿಗೆ ಓಡಿ ಹೋದಾಗ, ಆ ...ನ್ ಸಂಸ್ಥೆಗಳು "ನಮ್ಮ ಹುಡುಗಿಯರನ್ನು ...ಜಿಹಾದ್' ತಂತ್ರ ಬಳಸಿ ಅಪಹರಿಸಲಾಗಿದೆ. ...ಲ್ಲಿ ಇಸ್ಲಾಮ್ ಧರ್ಮಕ್ಕೆ ಮತಾಂತರ ...ವಾಗಿದೆ. ಈಗಾಗಲೇ 4,500 ಕ್ರಿಶ್ಚಿಯನ್ ...ತಿಯರನ್ನು ಇಸ್ಲಾಮ್ ಧರ್ಮಕ್ಕೆ ಮತಾಂತರ ...ದ್ದಾರೆ" ಎಂದು ಕೇರಳದ ಹೈಕೋರ್ಟ್ ... ಅರ್ಜಿ ಸಲ್ಲಿಸಿದರು.

...ದಕ್ಕೆ ಸರಿಯಾಗಿ ಹಿಂದೂ ಜನಜಾಗೃತಿ ಸಮಿತಿ ...ನೊಂದು ಸಂಘಟನೆ "ಮುಸಲ್ಮಾನ ಯುವಕರಿಗೆ ...ಜಿಹಾದ್ ಬಗ್ಗೆ ವಿಶೇಷ ತರಬೇತಿ

ಅದು ತನ್ನ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಮಹಿಳೆಯರ ಹಕ್ಕು. ಪ್ರೀತಿಗೆ ಯಾವ ಧರ್ಮದ ಹಂಗೂ ಇರುವುದಿಲ್ಲ, ಆದ್ದರಿಂದ ಮಹಿಳೆಯೊಬ್ಬಳು ಅನ್ಯ ಧರ್ಮೀಯ ಪುರುಷನೊಬ್ಬನನ್ನು ಪ್ರೀತಿಸಿ ಅವನನ್ನು ಮದುವೆಯಾಗಲು ಇಚ್ಛಿಸಿದರೆ, ಜೊತೆಗೆ ಆತನ ಧರ್ಮವನ್ನು ಸ್ವೀಕರಿಸಲು ಬಯಸಿದರೆ ಅದಕ್ಕೆ ನಮ್ಮ ಕಾನೂನುಗಳಲ್ಲಿ ಯಾವ ಅಡತಡೆಯೂ ಇಲ್ಲ. ಆದರೂ ಇಂತಹದನ್ನು ಅಕ್ರಮವಾಗಿ ತಡೆಯಲು ಕೋಮುವಾದಿಗಳು ಪ್ರಯತ್ನಿಸುತ್ತಿದ್ದಾರೆ.

ಇದರ ಜೊತೆಗೆ ಇನ್ನೊಂದು ಅಂಶವೂ ಅಡಗಿದೆ. ಮೊದಲೇ ನಮ್ಮ ದೇಶದಲ್ಲಿ -ಅದರಲ್ಲೂ ಇಲ್ಲಿರುವ ಎಲ್ಲಾ ಧರ್ಮಗಳಲ್ಲಿಯೂ - ಪುರುಷಪ್ರಧಾನ ಮನಸ್ಥಿತಿ ಪ್ರಬಲವಾಗಿದೆ. ಇಂತಹ ಮನಸ್ಥಿತಿ ಹೊಂದಿರುವವರ ಕಣ್ಣಲ್ಲಿ ಮಹಿಳೆ ಓರ್ವ ಸ್ವತಂತ್ರ ವ್ಯಕ್ತಿಯಾಗಿರದೆ ಪುರುಷನ ಅಧೀನದಲ್ಲಿರುವ ಕೆಳದರ್ಜೆಯ ವಸ್ತುವಾಗಿ ಕಾಣಿಸುತ್ತಾಳೆ. ಆಕೆಗೂ ಯೋಚಿಸುವ, ಚಿಂತಿಸುವ,

ಹರಿಹರ: ಮರಳು ಮಾಫಿಯಾದಲ್ಲಿ ಅಧಿಕಾರಿಗಳೇ ಶಾಮೀಲು



ಜನ ಮರುಳೋ, ಜಾತ್ರೆ ಮರುಳೋ ಗೊತ್ತಿಲ್ಲ. ಆದರೆ ಹರಿಹರದಲ್ಲಿ ಕೋಟ್ಯಂತರ ಬೆಲೆಬಾಳುವ ಮರಳು ಮಾತ್ರ ಲೋಡುಗಟ್ಟಲೇ ಲೂಟಿಯಾಗುತ್ತಿದೆ. ಪ್ರತಿದಿನ ಏನಿಲ್ಲವೆಂದರೂ 25 ಲಕ್ಷ ರೂಪಾಯಿ ಮೌಲ್ಯದ ಮರಳು ತುಂಗಭದ್ರೆಯ ದಡ ಬಿಟ್ಟು ಅಕ್ರಮವಾಗಿ ಬೆಂಗಳೂರು, ಗೋವಾಗಳ ಕಾಂಕ್ರೀಟ್ ಹೊಟ್ಟೆ ಸೇರುತ್ತಿದೆ. ಬಹುತೇಕ ಎಲ್ಲಾ ಹಗರಣಗಳಂತೆ ಇಲ್ಲಿಯೂ ಸಹ ದಲ್ಲಾಳಿ ಖದೀಮರಿಗೆ ಛತ್ರಿ ಹಿಡಿದು ಮರಳುಗಳ್ಳತನಕ್ಕೆ ರತ್ನಗಂಬಳಿ ಹಾಸುತ್ತಿರೋದು ಅದೇ ಸರ್ಕಾರಿ ಅಧಿಕಾರಿಗಳು. ಹರಿಹರದ ತಹಸೀಲ್ದಾರ್ ನಜ್ಮಾ ಮೇಡಮ್‌ರಿಂದ ಹಿಡಿದು ಗ್ರಾಮಾಂತರ ಪೊಲೀಸ್ ಠಾಣೆಯ ಎಸ್‌ಐ ಸುನಿಲ್ ಕುಮಾರ್, ಪಿಡಬ್ಲ್ಯೂಡಿ ಜೂನಿಯರ್ ಇಂಜಿನಿಯರ್ ಬಸವರಾಜಪ್ಪ ನೀಲಗಿರಿ ಮತ್ತು ಭುವನೇಶ್ವರ್‌ರಂತ ಘಟಾನುಘಟಿಗಳೇ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮರಳು ಮುಕ್ಕಣ್ಣರಿಗೆ ಸಾಥ್ ನೀಡುತ್ತಿದ್ದಾರೆ. ಇಲ್ಲಿನ ತುಂಗಭದ್ರಾ ದಂಡೆಯಿಂದ ಶುರುವಾಗುವ ಮರಳು ಮಾಫಿಯಾ ದೂರದ ಬೆಂಗಳೂರು, ಮದ್ದೂರುವರೆಗೂ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡಿದೆ. ಇಡೀ ಮಾಫಿಯಾಕ್ಕೆ ಮೂಲ ಸೂತ್ರಧಾರನೆ, ಗೋಪಾಲ್ ಪವಾರ್ ಎಂಬ ಅಡ್ಡಕಸುಬಿ ಆಸಾಮಿ.

ಹರಿಹರಕ್ಕೆ ಮರಳು ಮಾಫಿಯಾ ಕಾಲಿಟ್ಟಿದ್ದು 2009ರಲ್ಲಿ. ಅಲ್ಲಿಯವರೆಗು ಸಣ್ಣಮಟ್ಟ ಪ್ರಮಾಣದಲ್ಲಿ ಮರಳು ಸ್ಥಳೀಯವಾಗಿ ಬಿಕರಿಯಾಗುತ್ತಿತ್ತೇ ಹೊರತು ಲಾಭಕೋರ ದಂಧೆಯಾಗಿ ಬೆಳೆದಿರಲಿಲ್ಲ. ಆದರೆ ಹರಿಹರದಿಂದ ಕೂಗಳತೆ ದೂರದಲ್ಲಿರುವ ಚಿಕ್ಕಬಿದರಿ ಗ್ರಾಮದಲ್ಲಿ ಒಂದಷ್ಟು ಜನ ಊರಿಗೆ ದೇವಸ್ಥಾನ ಕಟ್ಟುವ ನೆಪವಿಟ್ಟುಕೊಂಡು ಭರ್ಜರಿ ಮರಳು ಸಂಗ್ರಹಿಸಿ ಗುಡ್ಡೆ ಹಾಕಿಕೊಂಡಿದ್ದರು. ಈ ಪರಿ ಮರಳು ಸಂಗ್ರಹದಿಂದ ಏನೆಲ್ಲಾ ಆಗುತ್ತದೆ ಎನ್ನುವ ಅರಿವಿರದ ಗ್ರಾಮಸ್ಥರು, ದೇವಸ್ಥಾನ ಕಟ್ಟಲಿಕ್ಕೋಸ್ಕರ ಹಣ ಸಂಗ್ರಹಿಸಲು ಆ ಮರಳಿನಲ್ಲಿ ಸ್ವಲ್ಪ ಮಾರಲು ಹೋಗಿ ಮಹಾನ್ ಯಡವಟ್ಟು ಮಾಡಿಕೊಂಡಿದ್ದರು. ಮರಳಿನ ಅಕ್ರಮ ದಾಸ್ತಾನು ಮತ್ತು ಮಾರಾಟದ ವಾಸನೆ ಹಿಡಿದ ಹರಿಹರದ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಸಾತನಹಾಳ್ ಮತ್ತು ಗ್ರಾಮಾಂತರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ರಾಂಕುಮಾರ್ ಗ್ರಾಮಸ್ಥರಿಗೆ ಗಂಟುಬಿದ್ದಿದ್ದರು. ಸುದ್ದಿ ತಿಳಿದ ತಹಸೀಲ್ದಾರ್ ನಜ್ಮಾ, ಗ್ರಾಮಸ್ಥರನ್ನು ಬೆದರಿಸಿ ಕೈತುಂಬಿಕೊಂಡರೆ, ಪೊಲೀಸ್ ಇಲಾಖೆಯ ಸಾತನಾಳ್ ಮತ್ತು ರಾಂಕುಮಾರ್ ಕೂಡ ಜೇಬು ಭರ್ತಿಮಾಡಿಕೊಂಡರು. ಇಷ್ಟೆಲ್ಲಾ ಅಪರಾತಪರಾ ನಡೆಯುತ್ತಿರುವ ವೇಳೆಯಲ್ಲಿ ವಿಷಯ ಅಂದಿನ ಡಿಸಿ ಲಾಬೂರಾಂ ಗಮನಕ್ಕೆ ಬಂದಿತ್ತು. ತನಿಖೆಯ ಶಾಸ್ತ್ರವಾಗಿ ಸಂಗ್ರಹವಾದ ಮರಳನ್ನು ಸೀಜ್ ಮಾಡಿ, ನೆಪಕ್ಕೆಂಬಂತೆ ಸರ್ಕಲ್ ಇನ್ಸ್‌ಪೆಕ್ಟರ್ ಸಾತನಾಳ್ ಮತ್ತು ಎಸ್‌ಐ ರಾಂಕುಮಾರ್‌ರನ್ನು ಟ್ರಾನ್ಸ್‌ಫರ್ ಮಾಡಲಾಗಿತ್ತು. ಅಂದಹಾಗೆ, ಅವತ್ತು ಚಿಕ್ಕಬಿದರಿಯಲ್ಲಿ ಸೀಜಾದ ಮರಳು ಏನಿಲ್ಲವೆಂದರು ಏಳು ಕೋಟಿ ರೂಪಾಯಿ ಬೆಲೆಬಾಳವಷ್ಟಿತ್ತು. ಅದರ ಮೇಲೆ ದಲ್ಲಾಳಿ ಖದೀಮರ ಕಣ್ಣು ಬಿದ್ದಿದ್ದೇ ತಡ ಹರಿಹರದಲ್ಲಿ ಮರಳು ಮಾಫಿಯಾ ವ್ಯವಸ್ಥಿತವಾಗಿ ಬೇರು ಬಿಡಲು ಆರಂಭಿಸಿತ್ತು.

ದೇವಸ್ಥಾನ ಕಟ್ಟುವ ನೆಪದಲ್ಲಿ ಚಿಕ್ಕಬಿದರಿ ಗ್ರಾಮಸ್ಥರು ಸಂಗ್ರಹ ಮಾಡಿದ್ದ ಸಾವಿರಾರು ಲೋಡು ಮರಳು ಸೀಜಾದ ಸುದ್ದಿ ಗೋಪಾಲ್ ಪವಾರ್‌ನ ಗಮನಕ್ಕೆ ಬಂದದ್ದೇ ಬೆಂಗಳೂರಿನ ಬಿಲ್ಡರ್ ಪ್ರಕಾಶ ಮತ್ತು ಮದ್ದೂರಿನ ನರೇಶ ಎನ್ನುವ ಗಿರಾಕಿಗಳನ್ನು ಕರೆತಂದು ಚಿಕ್ಕಬಿದರಿ ಗ್ರಾಮಸ್ಥರಿಗೆ ಗಂಟುಹಾಕಿದ್ದ. ಹಾಗೆ ಬಂದವರು ಮಾಡಿದ ಮೊದಲ ಕೆಲಸವೆಂದರೆ 'ಸೀಜಾದ ಮರಳು ನಮಗಿರಲಿ ಗ್ರಾಮಸ್ಥರ ಮೇಲಾಕುವ ಕೇಸನ್ನು ನಾವು ಪರಿಹರಿಸುತ್ತೇವೆ' ಎಂಬ ಭರವಸೆ ನೀಡಿದ್ದು. ಜೊತೆಗೆ ದೇವಸ್ಥಾನ ಕಟ್ಟಲು 1.25 ಕೋಟಿ ಹಣ ನೀಡಿ ಮರಳಿನ ಮೇಲೆ ಅನಧಿಕೃತವಾಗಿ ಕಬ್ಜಾ ಸಾಧಿಸಿದ್ದರು. ಮುಟ್ಟುಗೋಲಾದ ಯಾವುದೇ ಆಸ್ತಿ ಸರ್ಕಾರಕ್ಕೆ ಸೇರತಕ್ಕದ್ದು, ಆದರೂ ಅದನ್ನು ಕಳ್ಳದಂಧೆ ಮೂಲಕ ಖದೀಮರು ಕುದುರಿಸಿಕೊಳ್ಳುತ್ತಿದ್ದರೂ ಹರಿಹರದ ಪಿಡಬ್ಲ್ಯೂಡಿ ಅಧಿಕಾರಿಗಳಾಗಲಿ, ತಹಸೀಲ್ದಾರ್ ನಜ್ಮಾ ಮೇಡಮ್ಮಾಗಲಿ ತಮಗೆ ಸಂಬಂಧವೇ ಇಲ್ಲವೆಂಬಂತೆ ತೆಪ್ಪಗಿದ್ದು ಬಿಟ್ಟರು. ಅದೇವೇಳೆಗೆ ಮರಳು ಸೀಜ್ ಮಾಡಿದ್ದ ಜಿಲ್ಲಾಧಿಕಾರಿ ಲಾಬೂರಾಂ ವರ್ಗವಾಗಿದ್ದು ಈ ಖೂಳರಿಗೆ ಮತ್ತಷ್ಟೂ ನೆರವಾಗಿತ್ತು. ಈ ಪ್ರಕರಣ ಹೊಸದಾಗಿ ಬಂದ ಜಿಲ್ಲಾಧಿಕಾರಿ ಗಮನಕ್ಕೇ ಬರದಂತೆ ವ್ಯವಸ್ಥಿತ ಜಾಲ ಹೆಣೆದ ಮರಳುಗಳ್ಳರು ಅಂದಿನಿಂದ ಎಗ್ಗಿಲ್ಲದಂತೆ ತುಂಗಭದ್ರೆಯ ಒಡಲು ಗೆಬರುತ್ತಿದ್ದಾರೆ.

ಇದರ ನಡುವೆ ಚಿಕ್ಕಬಿದಿರೆಯ ಮರಳಿಗೆ ಮತ್ತೊಬ್ಬ ಆಸಾಮಿ ಗಂಟುಬಿದ್ದಿದ್ದ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಾವೇರಿ ಕ್ಷೇತ್ರದಲ್ಲಿ ಬಿಜೆಪಿ ಪಾರ್ಟಿಯಿಂದ ಸ್ಪರ್ಧಿಸಿ ಸೋತಿದ್ದ ಅರುಣ್‌ಕುಮಾರ್ ಎಂಬಾತ ಬರೋಬ್ಬರಿ ಮೂರು ಕೋಟಿ ಡೀಲ್ ಕುದುರಿಸಿಕೊಂಡಿದ್ದ. ಮಾಜಿ ಲೋಕೋಪಯೋಗಿ ಮಂತ್ರಿ ಉದಾಸಿಯ ಪಕ್ಕಾ ಶಿಷ್ಯನಾದ ಈತ ಈ ಮೊದಲೇ ಬೆಂಗಳೂರಿನ ಬಿಲ್ಡರ್‌ಗಳು ಬೇನಾಮಿಯಾಗಿ ಖರೀದಿಸಿದ್ದ ಮರಳನ್ನೇ ಮತ್ತೊಮ್ಮೆ ಖರೀದಿಸಿದ್ದ. ಅಂದಹಾಗೆ, ಇವನ ಖರೀದಿಯೂ ಬೇನಾಮಿಯೇ! ಪಿಡಬ್ಲ್ಯುಡಿ ಇಲಾಖೆಯ ಜೂನಿಯರ್ ಇಂಜಿನಿಯರ್‌ಗಳಾದ ಬಸವರಾಜಪ್ಪ ನೀಲಗಿರಿ ಮತ್ತು ಭುವನೇಶ್ವರ್‌ರೇ ಇಂಥಾ ಬೇನಾಮಿ ಅವ್ಯವಹಾರಗಳ ಸೂತ್ರಧಾರರು. ಇಷ್ಟಾದರೂ ಸರ್ಕಾರದ ಲೆಕ್ಕದಲ್ಲಿ ಸೀಜಾದ ಅಷ್ಟೂ ಮರಳು ಸರ್ಕಾರಕ್ಕೇ ಸೇರಿದ್ದು. ಆ ನಂಬಿಕೆಯಲ್ಲಿ ಪರ್ಮಿಟ್ ಪಡೆದವರಿಗೆ ಪ್ರತಿ 1 ಕ್ಯೂಬಿಕ್ ಮೀಟರ್ ಮರಳಿಗೆ 650 ರೂ. ದರ ನಿಗದಿಪಡಿಸಿ ಮಾರಾಟ ಮಾಡಲು ಮುಂದಾಗಿತ್ತು. ಕೋಟಿಗಟ್ಟಲೆ ಹಣ ಸುರಿದ ದಲ್ಲಾಳಿಗಳು ಅನಾಯಾಸವಾಗಿ ಕೈಸುಟ್ಟುಕೊಳ್ಳಲು ಸಿದ್ಧರಿರಲಿಲ್ಲ. ಹಾಗಾಗಿ ಚಾಪೆ ಕೆಳಗೆ ತೂರುವ ಅಡ್ಡದಾರಿ ಹುಡುಕಿಕೊಂಡಿದ್ದರು. ಬೇರೆಯವರಿಗೆ ಅವಕಾಶವನ್ನೇ ಕೊಡದೆ ಬೇನಾಮಿ ಪರ್ಮಿಟ್ಟುಗಳನ್ನು ಸೃಷ್ಟಿಸಿಕೊ... ತಮ್ಮ ಪಾಲಿನ ಮರಳಿಗೆ ಬಾಯಿ ಕಿಸಿದು ಕುಳಿತಿ... ಗೋಪಾಲ್ ಪವಾರ್ ಒಬ್ಬನೇ ಬೆಂಗಳೂ... ಹಾವೇರಿ-ಗೋವಾ ನೋಂದಣಿಯಲ್ಲಿ ಬರೋಬ್ಬರಿ... ಬೇನಾಮಿ ಪರ್ಮಿಟ್ಟು ಗಿಟ್ಟಿಸಿ ಕೂತಿದ್ದಾನೆಂದರೆ ಪ್ರಕ... ಗಂಭೀರತೆ ಅರ್ಥವಾಗಬಹುದು. ಅವರ ದೋಖಾ ಅ... ನಿಲ್ಲುವುದಿಲ್ಲ, ತೂಕದಲ್ಲೂ ಭಯಂಕರ ಮೋಸ ಮಾಡು... ಪರ್ಮಿಟ್ಟಿನ ಫಾರಮ್‌ನಲ್ಲಿ ಒಂದು ಲಾರಿಗೆ 11 ಕ್ಯೂ... ಮೀಟರ್ ಮರಳು ತುಂಬುವ ಸಾವ... ತೋರಿಸುತ್ತಾರಾದರು ಲಾರಿಗೆ ತುಂಬೋದು 21 ಕ್ಯೂ... ಮೀಟರ್ ಮರಳನ್ನು. ಅಲ್ಲಿಗೆ ಸರ್ಕಾರಕ್ಕೆ 10 ಕ... ದೋಖಾ! ದಲ್ಲಾಳಿಗೆ ಒಂದು ಲೋಡಿನಿಂದ ಏನಿಲ್ಲವೆ... 40 ಸಾವಿರ ಲಾಭ! ಸರಿ, ಇಲ್ಲೇನೊ ಭರ್ಜರಿ... ಮರಳು ತುಂಬುತ್ತಾರೆ, ಆದರೆ ಮಾರ್ಗಮಧ್ಯ... ಅಧಿಕಾರಿಗಳು ಹಿಡಿದು ಓವರ್ ಲೋಡಿಂಗ್... ಜಡಿದರೆ ಏನು ಗತಿ? ಅದಕ್ಕೂ ಇವರ ಬಳಿ ಒ... ರೆಡಿಮೇಡ್ ಮೆಡಿಸಿನ್ ಇದೆ. ಅದನ್ನು ಕೊಡೋ... ಪಿಡಬ್ಲ್ಯುಡಿ ಇಲಾಖೆಯ ಜೂನಿಯರ್ ಇಂಜಿನಿಯರ್... ಹೆಗ್ಗಣಗಳೆ. ಚಿಕ್ಕಬಿದರಿಯಲ್ಲಿ ಮರಳು ತುಂಬಿದ ಭ... ಲಾರಿಗೆ ಕುಂತಲ್ಲೇ 2000 ರೂ. ದಂಡ ಹಾಕಿದ ರ... ಹರಿದು ಚಾಲಕನ ಕೈಗಿತ್ತು ಕೈತೊಳೆದು ಕೊಂಡುಬಿಡು... ಅಪ್ಪಿತಪ್ಪಿಯೂ ಆ ರಸೀದಿಯಲ್ಲಿ ಲಾರಿಯಲ್ಲಿರುವ ಮ... ಪ್ರಮಾಣ ಏಷ್ಟು ಎನ್ನುವುದನ್ನು ನಮೂದಿಸುವುದಿಲ್ಲ. ಒ... ತಪ್ಪಿಗೆ ಒಮ್ಮೆ ಮಾತ್ರ ಶಿಕ್ಷೆ ಎನ್ನುವ ರಿಯಾಯಿತಿ... ಈ ರೀತಿ ದುರುಪಯೋಗಪಡಿಸಿಕೊಳ್ಳುವ ಖಯಾಲಿ... ಲೋಕೋಪಯೋಗಿ ಮಂದಿಗೆ ಸಿದ್ಧಿಸಿದೆ.

ವಿಪರ್ಯಾಸವೆಂದರೆ, ಇದೇ ಹರಿಹರದ ಆಸು... ನಲ್ಲಿರುವ ಹಳ್ಳಿಗರು ಸ್ವಂತ ಮನೆ ಕಟ್ಟಿಕೊ... ಎತ್ತಿನಗಾಡಿಯಲ್ಲಿ ಒಂಚೂರು ಮರಳು ತಂದರೆ ಅ... ಮೇಲೆ ಎಗರಿಬಿಡುವ 'ನಿಷ್ಠಾ'ವಂತ ಅಧಿಕಾರಿಗಳು... ನೆಲದಲ್ಲೇ 5000 ರೂ. ದಂಡ ವಿಧಿಸುತ್ತಾರೆ. ಅ... ದಿನವೊಂದಕ್ಕೆ 25 ಲಕ್ಷ ಮೌಲ್ಯ ದಾಟಿದ ಮ... ನಿರಂತರವಾಗಿ ಹೆದ್ದಾರಿಯಲ್ಲೇ ಹರಿಹರ ದಾಟುತ್ತಿ... ಜಿಲ್ಲಾಧಿಕಾರಿ ಅಂಜನಕುಮಾರರಾಗಲಿ, ತಹಸೀಲ್ದಾರ್ ... ಆಗಲಿ ತಡೆಯುವ ಗೋಜಿಗೇ ಹೋಗದಿರುವುದು ಅ... ಅನುಮಾನ ಹುಟ್ಟುಹಾಕುತ್ತದೆ. ಇಲಾಖೆಯೊ... ತೂರಿಕೊಂಡಿರುವ ಮರಳು ದಂಧೆಯ ದಗಾಕೋರ... ಮಟ್ಟಹಾಕುವ ಕಾಲ ಅದ್ಯಾವಾಗ ಬರುತ... ಹರಿಹರೇಶ್ವರನೇ ಬಲ್ಲ.


● ಟಿ.ಎಸ್. ಷಣ್ಮು...

ಆ ಟೈಮಲ್ಲಿ ದಟ್ಟದರಿದ್ರನೂ ಅರ್ಧರಾಜ್ಯ ಕೊಡುತ್ತಾನೆ

ಇತ್ತೀಚೆಗೆ ಕರ್ನಾಟಕದಲ್ಲಿ ಸ್ಫೋಟಗೊಂಡ ಬಲಾತ್ಕಾರ ಸಂಭೋಗದ ಸುದ್ದಿಯಿಂದ ಪ್ರಚೋದನೆಗೊಂಡ ಸ್ವಾಮಿಗಳು ಭಕ್ತಾದಿಗಳ ಮೇಲೆ ಹಾರತೊಡಗಿದ್ದಾರಂತಲ್ಲಾ. ಈ ಪೈಕಿ ಉತ್ತರ ಕರ್ನಾಟಕದ ಕಡೆಯ ಸ್ವಾಮಿಯೊಬ್ಬ ಜೈಲಿನಲ್ಲಿರುವಾಗಲೇ ದಕ್ಷಿಣ ಕರ್ನಾಟಕದ ಸ್ವಾಮಿಯೊಬ್ಬ "ನನ್ನ ಜೈಲಿನ ಕೋಣೆ ಮಠದ ಕೋಣೆಯಂತೆಯೇ ಇರಬೇಕು" ಎಂದು ಭಕ್ತರಿಗೆ ಫರ್ಮಾನು ಹೊರಡಿಸಿದ್ದಾನಂತಲ್ಲಾ. ಹೇಳಿಕೇಳಿ ಸದರಿ ಸ್ವಾಮಿ ಸುರಸುಂದರ, ಪ್ರಣಯ ಚೇಷ್ಟೆಯ ನಗೆಗಾರ. ಅಲ್ಲದೆ ತಾನೇ ಸಾಕಿರುವ ದನಗಳು ದನಗಳ ಮೇಲೆಯೇ ಹಾರಿ ಮುಸುಗರಿಯುವುದನ್ನು ನೋಡಿ ಉದ್ರೇಕಗೊಂಡವನು. ಅದೂಅಲ್ಲದೆ "ಸಿಹಿ ತಿನಿಸುಗಳನ್ನು ತಿನ್ನುತ್ತಾ, ಟಿವಿ ನೋಡುತ್ತಾ, ಅಪಾಯಕಾರಿ ವಯಸ್ಸಿನಲ್ಲಿ ಸಿಕ್ಕಿಕೊಂಡ ಆಸಾಮಿಯಿಂದ ಏನೋ ಅಚಾತುರ್ಯವಾಗಿರಬಹುದು" ಎಂದು ಸಾಮಾನ್ಯ ಭಕ್ತರು ಕ್ಷಮಾಹಿಂಗಿತದ ಮಾತನಾಡುತ್ತಿದ್ದಾರಂತಲ್ಲಾ. ಇದನ್ನು ಕಂಡು "ಕರ್ನಾಟಕದ ಪೊಲೀಸರು ಅತ್ಯಾಚಾರಕ್ಕೆ ಒಳಗಾದವರನ್ನೇ ಒಳಗೆ ಹಾಕಿ, ಸ್ವಾಮಿಯಿಂದ ಸಗಣಿ ಸ್ವೀಕರಿಸಿದ್ದಾರೆ" ಎಂದು ಶತಮಾನಗಳ ಕಾಲ ಇಂಥವರ ಶೋಷಣೆಗೆ ತುತ್ತಾದ ದಲಿತರು ಪ್ರತಿಭಟಿಸಿದ್ದಾರಂತಲ್ಲಾ. "ನಮ್ಮ ಸ್ವಾಮಿಯ ವಿರುದ್ಧ ದಲಿತರು ಪ್ರತಿಭಟಿಸುವುದೆಂದರೇನು? ಇದು ನಮ್ಮ ಸ್ವಾಮಿಗಷ್ಟೇ ಅಲ್ಲ, ನಮ್ಮ ಜನಾಂಗಕ್ಕೂ ಮಾಡುತ್ತಿರುವ ಅವಮಾನ" ಎಂದ ಬಗೆದ ಸ್ವಾಮಿ ಬಳಗ "ನಮ್ಮ ಸ್ವಾಮಿ ಮಾಡಿರುವ ರೇಪನ್ನು ಖಂಡಿಸುವ ಹಕ್ಕು ನಿಮಗಿಲ್ಲ. ನೀವೇನಿದ್ದರೂ ನಿಮ್ಮ ಜನಾಂಗ ಸ್ವಾಮಿ ಮಾಡಿರುವ ರೇಪನ್ನು ಮಾತ್ರ ಖಂಡಿಸತಕ್ಕದ್ದು" ಎಂದು ಘೋಷಣೆ ಕೂಗಿ, ಎಲೆಯಡಿಕೆ ಕವಳವನ್ನು ಹಂಚಿಕೊಂಡು "ರಾಘವೇಂದ್ರ, ನೀನೇ ಗತಿ" ಎಂದು ಜಾಗ ಖಾಲಿ ಮಾಡಿದವಂತಲ್ಲಾ, ಥೂತ್ತೇರಿ!"

****

ಸ್ವಾಮೀಜಿ ನೆಲೆಸಿರುವ ಪ್ರದೇಶದ ಬುದ್ಧಿಜೀವಿಗಳ ಪ್ರಕಾರ, ಸ್ವಾಮೀಜಿ ವಾಸ ಮಾಡುವ ಪ್ರದೇಶ ಈಗಾಗಲೇ



ಭೀಕರವಾದ ಸಾಮಾಜಿಕ ಸಮಸ್ಯೆಯಿಂದ ತತ್ತರಿಸಿದೆ. ಅಲ್ಲಿನ ಯುವಕರಾಗಲೇ ಅರವತ್ತು ವರ್ಷ ದಾಟಿದ್ದರೂ ಯುವಕರಾಗಿಯೇ ಇದ್ದಾರೆ. ಆದರೆ ನೋಡಲು ಮಹಾ ಮುದುಕರಂತೆ ಕಾಣುತ್ತಿದ್ದಾರೆ. ಕಾರಣ ಮದುವೆಯಿಲ್ಲ, ಅದಕ್ಕೂ ಕಾರಣ ಆ ಪ್ರಾಂತ್ಯದಲ್ಲಿ ಹೆಣ್ಣುಗಳ ಸಂಖ್ಯೆ ಕಡಿಮೆಯಾಗಿದೆ. ಕಾರಣ "ನನಗೆ ಜನ್ಮ ಕೊಡಲು ಹೆಣ್ಣುಬೇಕು. ನಾನು ಮದುವೆಯಾಗಲು ಹೆಣ್ಣುಬೇಕು. ಆದರೆ ನನ್ನ ಹೊಟ್ಟೆಯಲ್ಲಿ ಹೆಣ್ಣು ಬೇಡ" ಎಂಬ ಅವ್ಯಕ್ತ ಭಾವನೆ. ತನ್ನ ಪ್ರಾಂತ್ಯದ ತರುಣ ಜನಾಂಗ ಹೆಣ್ಣಿಲ್ಲದೆ ಮಣ್ಣಾಗುತ್ತಿದೆಯಲ್ಲಾ ಎಂದು ಸದಾ ಹೆಣ್ಣಿನ ಬಗ್ಗೆ ಚಿಂತಿಸಿದ ಸ್ವಾಮಿ ಹೆಣ್ಣಿಗೆ ಮರುಳಾಗಿರುವುದರಲ್ಲಿ ಯಾವ ಅಪರಾಧವೂ ಇಲ್ಲ. ಅನಾದಿಕಾಲದಿಂದಲೂ ಮನುಷ್ಯ ಯಾವುದರಿಂದ ವಂಚಿತನೋ ಅದನ್ನೇ ಕುರಿತು ಆಲೋಚಿಸುತ್ತ ಬಂದಿದ್ದಾನೆ. ಆದ್ದರಿಂದ ಅಪಾಯಕರ ವಯಸ್ಸಿನಲ್ಲಿರುವ ಸ್ವಾಮಿ ಅನಾಹುತ ಎಸಗಿರಬಹುದು. ಇದು ಒಂದು ಮಠದ ಕತೆಯಲ್ಲ, ಕರ್ನಾಟಕದ ನೂರಾರು ಮಠಗಳಲ್ಲಿ ನಡೆಯುವ ಸಾಮಾನ್ಯವೆನಿಸುವಂತಹ ಕತ್ತಲೆ ಆಟ. ಇಂತಹ ಆಟಗಳು ನಿಲ್ಲಬೇಕಾದರೆ ಸ್ವಾಮೀಜಿಗಳೆಲ್ಲಾ ನಮ್ಮ ಧರ್ಮಕ್ಷೇತ್ರದ ಹೆಗಡೆಯಂತೆ ಧರ್ಮಾಧಿಕಾರಿ ಎಂದು ಘೋಷಿಸಿಕೊಂಡು ಮದುವೆಯಾಗಿಬಿಟ್ಟರೆ ಈ ಸಮಸ್ಯೆಯೇ ಇರುವುದಿಲ್ಲ. ಆದರೆ ಒಂದು ಸಮಸ್ಯೆಯಿದೆ. ಸ್ವಾಮಿಗಳು ನಮ್ಮ ರೇಣುಕಾಚಾರಿಯಂತಾದರೆ ಗತಿಯೇನು ಎಂದು ಗೊಂದಲಕ್ಕೆ ಬಿದ್ದು ಗಡ್ಡ ಕೆರೆದರಂತಲ್ಲಾ, ಥೂತ್ತೇರಿ!!

****

ನಾಗಮಂಗಲದ ಜಾಕ್‌ಪಾಟ್ ಮರಿಯಪ್ಪನ ಮೊಮ್ಮಗಳಾದ ಮೈತ್ರೇಯಿ ಎಂಬ ಚಾಲಾಕಿ ಹೆಣ್ಣುಮಗಳು ಸದಾನಂದ ಗೌಡನ ಮಗನನ್ನು ಬುಟ್ಟಿಗೆ ಹಾಕಿಕೊಂಡು ಜಾಕ್‌ಪಾಟ್ ನಿರೀಕ್ಷೆಯಲ್ಲಿದ್ದರೆ, ಕಾರ್ತಿಕ್ ಗೌಡ ಕಳ್ಳಬೆಕ್ಕಿನಂತೆ ಪರಾರಿಯಾಗಿ ತನ್ನಪ್ಪನ ಅಂತಸ್ತಿಗೆ ತಕ್ಕ ವಧುವಿನೊಡನೆ ನಿಶ್ಚಿತಾರ್ಥ ನಡೆಸಿಕೊಂಡನಂತಲ್ಲಾ. ಇದರಿಂದ ಕೆರಳಿದ ಮೈತ್ರೇಯಿ ಹಳೆ ಹರಿಶಿಣದ ತುಣುಕೊಂದನ್ನು ಸಾಕ್ಷಿಯಾಗಿ ಹಿಡಿದು "ಕಾರ್ತಿಕ್ ಗೌಡ ಕಂತ್ರಿ ಕೆಲಸ ಮಾಡುವ ಮೊದಲು ಕತ್ತಿಗೆ ಕಟ್ಟಿದ ಕೊಂಬು ಇದೇ ನೋಡಿ" ಎಂದಳಂತಲ್ಲಾ. ಇದನ್ನು ಕೇಳಿ ನಗಾಡಿದ ನಾಡಿನ ಜನ "ಉನ್ಮಾದಕ್ಕೆ ತುತ್ತಾದ ದಟ್ಟ ದರಿದ್ರನೂ ಆ ವೇಳೆಯಲ್ಲಿ ಅರ್ಧ ರಾಜ್ಯವನ್ನೇ ಬರೆದುಕೊಡುವ ಆಶ್ವಾಸನೆ ಕೊಡುತ್ತಾನೆ. ಮೈತ್ರೇಯಿ ಪ್ರದೇಶದ ರಾಜಕಾರಣಿಯೊಬ್ಬ ಇಂತದೇ ಕೆಲಸ ಶುರು ಹಚ್ಚಿಕೊಳ್ಳುವ ಮುನ್ನ ಬಿಡಿಎ ಸೈಟ್ ಕೊಡುವುದಾಗಿ ಮಲಗಿದಲ್ಲಿಯೇ ಆಶ್ವಾಸನೆ ಕೊಟ್ಟಿದ್ದನಂತೆ. ಇಂತಹ ಘಟನೆಗಳು ಗೊತ್ತಿದ್ದೂ ಕೂಡ ಸದಾನಂದ ಗೌಡರ ಮಗನ ಹರಿಶಿಣಕೊಂಬಿಗೆ ಕೊರಳೊಡ್ಡಿ ಮೋಸ ಹೋಗಿದ್ದಾಳೆ" ಎಂದರಂತಲ್ಲಾ. ಮೈತ್ರೇಯಿ ಪಾಡೇನಾದರೂ ಆಗಲಿ, ಸದಾ ಸಿಬಾಕ ಜಾಹೀರಾತಿನ ಸದಾನಂದನ ನಗೆಯಂತೂ ಹಾರಿಹೋಗಿದೆಯಂತಲ್ಲಾ. ಈ ಆಘಾತದಿಂದ ಚೇತರಿಸಿಕೊಳ್ಳಲಾಗದ ಸದಾನಂದ ಗೌಡರು "ಆ ಮೈತ್ರೇಯಿ ಯಾರೂ ಎಂಬುದು ಗೊತ್ತೇಯಿಲ್ಲ" ಎಂದು ಬಡಬಡಾ

ಥೂತ್ತೇರಿ

ಯಾ...

ಯಿಸುತ್ತಲೇ ಆಕೆಯ ವಿರುದ್ಧ ಪ್ರತಿದಾಳಿಗೆ ತಯಾರಾಗು... ಮಗನ ಬೇಲ್‌ಗಾಗಿ ಹಗಲೂರಾತ್ರಿ ಎಕ್ಸ್‌ಪ್ರೆಸ್ ರೈಲಿ... ಓಡಾಡುತ್ತಿದ್ದಾರಂತಲ್ಲಾ, ಥೂತ್ತೇರಿ!!

****

ಮೋದಿ ನೂರು ದಿನ ಪೂರೈಸುವುದರೊಳಗೆ ... ಅಕ್ಕಪಕ್ಕದ ಜಿಲ್ಲೆಗಳಂತಹ ದೇಶಕ್ಕೆ ಭೇಟಿ ಕೊ... ಬಂದಿರುವುದಲ್ಲದೆ ಜಪಾನ್ ದೇಶಕ್ಕೂ ಹೋಗಿ "... ನಿಮ್ಮ ನಂಟಿನ ಗುಟ್ಟೇನು ಗೊತ್ತೇ? ಫೆವಿಕಾಲ್. ಫೆವಿಕಾಲಿನ ಗುಟ್ಟೇನು ಗೊತ್ತೆ? ನಮ್ಮ ಬಾಂಧವ್ಯ ಕ... ಫೆವಿಕಾಲ್ ಮಾತ್ರ ಹಾಗೆಯೇ ಇರುತ್ತದೆ" ಎಂದು ಮೂ... ದರ್ಜೆ ರಾಜಕಾರಣಿಯಂತೆ ಮಾತನಾಡಿ ಭಾ... ಬಂದನಂತಲ್ಲಾ. ಮೋದಿ ವಾಪಸ್ ಬಂದಕೂ... ರಾಜನಾಥ್ ಸಿಂಗ್ ಮಗನ ಲಂಚದ ಹಗರಣ, ಸದಾ... ಗೌಡನ ಪುತ್ರನ ಲೈಂಗಿಕ ಹಗರಣ, ಮೋದಿ ಅಧಿ... ಬರಲೆಂದು ಹಗಲೂ ಇರುಳೂ ರಾಮಕಥೆ ಪಠಿಸ... ರಾಘವೇಶ್ವರನ ರೇಪಿನ ವೃತ್ತಾಂತವೆಲ್ಲಾ ಪ್ರಕಟಗೊ... ಮುಜುಗರಕ್ಕೆ ಈಡಾದನಂತಲ್ಲಾ. ಈ ಮಧ್ಯೆ ಭಟ್ಟರ ಕೆ... ಕಸದ ತೊಟ್ಟಿಯಂತಹ ಪತ್ರಿಕೆಯೊಂದು ಎಲ್ಲಾ ಸುದ್ದಿ... ಮುಚ್ಚಿ ಬರೆಯಲು ಕನ್ನಡದ ಶಬ್ದ ಭಂಡಾರ... ಹುಡುಕುತ್ತಿದೆಯಂತಲ್ಲಾ. ಭಟ್ಟನ ಕಸದ ತೊಟ್ಟಿ ಹಾ... ನಮ್ಮ ಸದಾನಂದ ಗೌಡರನ್ನು ಮಾತಾಡಿಸಿ ಖರ್ಗೆಯ... ಕರ್ನಾಟಕಕ್ಕೆ ಕೊಟ್ಟು ಹೋಗಿದ್ದ ಎರಡು ಎಕ್... ರೈಲಿನ ವಿಷಯ ತೆಗೆದು, ನಂತರ ಮಗನ ಮುಗ್ಧ... ಕೆದಕಲೆಂದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗೋಟೋನ್: "ನೀವು ತಲುಪಲು ಪ್ರಯ... ರುವ ಗ್ರಾಹಕ ತನ್ನ ಎಲ್ಲಾ ಕರೆಗಳನ್ನು ಬಂದ್ ಮಾಡಿದ್ದಾ...

ಥೂತ್ತೇರಿ!!!

ತ್ತರ ಕನ್ನಡದ ಮೇಲೆ ನಿಧಾನಕ್ಕೆ ಪಕ್ಷದ ಅವಿಭಜಿತ
ನ್ನಡದ ಅನೈತಿಕ ಪೊಲೀಸ್‌ಗಿರಿ ಭೂತ ಆವಾಹನೆ
! ಕೆಲಸವಿಲ್ಲದ ಸಂಘ ಪರಿವಾರದ ಉಂಡಾಡಿ
ತಂಡ ಕ್ರಿಶ್ಚಿಯನ್-ಮುಸ್ಲಿಮರ ಮೇಲೆರಗಿ
ಕ-ರಾಜಕೀಯ ಮೈಲೇಜ್‌ಗಾಗಿ ಅನಾಹುತಕಾರಿ
ನ್ನ ನಡೆಸುತ್ತಿದೆ. ಈಚೆಗೆ ಕುಮಟಾದಲ್ಲಿ ಹಿಂದೂ
ವೇದಿಕೆಯ ಪುಂಡರ ಪಡೆ ಅಟ್ಟಹಾಸದಿಂದ
ದ ಪರಿಗೆ ಇಡೀ ಜಿಲ್ಲೆ ಕಂಗಾಲಾಗಿ ಹೋಗಿದೆ;
ತುಂಟ ವಿದ್ಯಾರ್ಥಿಯೊಬ್ಬನ ಅಟ್ಟಾಡಿಸಿ ಬಡಿದು
ರೋಹಿ' ಎಂದು ಬೊಬ್ಬಿರಿದು ಆತನ ಜೈಲಿಗಟ್ಟಿ
ಯುಂಘೋಷಿತ -ದೇಶಭಕ್ತರು ವಿಕೃತಾನಂದ
ಸಿದ್ದಾರೆ.

ಇಡ್ಲಿ ವಡಾ ಸಾಂಬಾರ್!


ಕ ಪ್ರಸಂಗಿ ಸಾಬರ ಹುಡುಗನಿಗೆ ಬುದ್ಧಿ ಹೇಳಿ
ಮುಗಿಸಬಹುದಾಗಿದ್ದ 'ಮೊಬೈಲ್ ಹುಚ್ಚಾಟ'ವನ್ನು
ದೇಶಾಭಿಮಾನದೊಂದಿಗೆ ಸಮೀಕರಿಸಿ ದೊಡ್ಡ
ಮಾಡಿ ಹಿಂದೂತ್ವದ ಉನ್ಮಾದ ಪ್ರದರ್ಶಿಸಿದ
ಪರಿವಾರದ ಪರಾಕ್ರಮ ಈಗ ಇಡೀ ಜಿಲ್ಲೆಯಲ್ಲಿ
ಸಹ್ಯ-ವಿಷಾದಕ್ಕೆ ಕಾರಣವಾಗಿದೆ. ಕುಮಟಾದ ಎ.ವಿ.
ವಾಣಿಜ್ಯ ಮಹಾವಿದ್ಯಾಲಯದ ಅಂತಿಮ ವರ್ಷದ
ಮಹಮ್ಮದ್ ಜಾಬೀರ್ ಖಾನ್ ರಾಷ್ಟ್ರಗೀತೆಯನ್ನು
ಡಾ-ಸಾಂಬಾರ್‌ಗೆ ಹೋಲಿಸಿ ಹಾಡೊಂದನ್ನು
ವಾಟ್ಸ್‌ಆಪ್‌ನಲ್ಲಿ ಹರಿಬಿಟ್ಟು ಗೆಳೆಯರೊಂದಿಗೆ
ಮಾಡಿದ್ದೇ ಸದಾ ತರಲೆಗಾಗಿ ಕಾಯುವ ಸಂಘ
ದ ಜಗಳಗಂಟರಿಗೆ ಆಯುಧವಾಗಿ ಹೋಗಿದೆ!
ಬೀರ್ ಮತ್ತು ಆತನ ಪೋರ್ಕಿ ಮಿತ್ರ ಮಂಡಳಿ
ಈ ವಾಟ್ಸ್‌ಆಪ್ ಮಜಾ ನಡೆದದ್ದು ಆಗಸ್ಟ್
ತ್ರಿ ವೇಳೆ. ಬೆಳಗ್ಗೆ ಆಗುವ ಹೊತ್ತಿಗೆ ಈ ಮಳ್ಳಾಟ
ಮಲ್ಲಿ ಸಕ್ರಿಯವಾಗಿರುವ ಹೆಂಗಸೊಬ್ಬಳ ಮಗನಿಂದ
ರಿವಾರದ ಹರಾಮಿಗಳಿಗೆ ಗೊತ್ತಾಗಿದೆ. ಹಿಂದೂತ್ವದ
ತೋರಿಸಿ ಹೀರೋಗಳಾಗಲು ಇದೇ ಸುಸಮಯ
ಂಡ ಶ್ರೀರಾಮಸೇನೆ, ಹಿಂದೂ ಜಾಗರಣಾ ವೇದಿಕೆ,
ದೂ ಪರಿಷತ್ ಮತ್ತು ಎಬಿವಿಪಿ ಗ್ಯಾಂಗ್
ಾಲೇಜಿಗೇ ನುಗ್ಗಿದೆ. ತರಗತಿಯ ಕೋಣೆಯಲ್ಲಿದ್ದ
ನ ದರದರನೆ ಹೊರಗೆಳೆದು ತಂದು ಮನಸೋ
ಡಿದು ಹೈರಾಣಾಗಿಸಿದ್ದಾರೆ.

ಹತ್ತೊಂಬತ್ತರ ಹರೆಯದ ಹುಡುಗ ಹಿಂಸೆ
ದೇ ವಿಲವಿಲ ಒದ್ದಾಡಿದ್ದಾನೆ, "ನನ್ನದು ತಪ್ಪಾಗಿದೆ...
." ಎಂದು ಅಂಗಲಾಚಿದ್ದಾನೆ. ಆ ಬಾಲಕನ
ಯಕತೆ ಕಂಡು ಇನ್ನಷ್ಟು ಪ್ರಚೋದಿತರಾದ ಹಿಂದೂ
ಮತ್ತೆ ಮುಖ-ಮೂತಿ ನೋಡದೆ ಚಚ್ಚಿದ್ದಾರೆ.
ದುರುದ್ದೇಶದ ಕೆಲಸವಲ್ಲ... ಗೆಳೆಯರ ನಡುವೆಯಷ್ಟೇ.
ಸಬಿರಾ ಇದು... ನಾನು ದೇಶದ್ರೋಹಿ ಅಲ್ಲ...
ಹೊಡಿಬೇಡಿ... ಪ್ಲೀಸ್ ನನ್ನ ಬಿಟ್ಟು ಬಿಡಿ..."
ಗೋಗರೆದಿದ್ದಾನೆ.

ನ್ಯಾವುದೂ ಕೇಸರಿ ಕೌರ್‍ಯಗಾರರಿಗೆ ಅರ್ಥವೇ
ಅನೈತಿಕ ಪೊಲೀಸ್‌ಗಿರಿ ನಡೆಸಿ ಕಾಲೇಜಿನ
ವಲ್ಲಿ ಎಲ್ಲ ವಿದ್ಯಾರ್ಥಿಗಳೆದುರೇ ಇಂಟ್ರಾಗೇಷನ್
ದ್ದಾರೆ. ದೇಶಾಭಿಮಾನ ಗುತ್ತಿಗೆ ಪಡೆದವರಂತೆ-
ಜಾತಿಯವರೆಲ್ಲ ಕಾಫಿರ್‌ಗಳೆಂಬಂತೆ ದಾದಾಗಿರಿ
ದ್ದಾರೆ. ಅಷ್ಟಕ್ಕೇ ಈ ದೇಶ ರಕ್ಷಕರ ಪಿತ್ಥ ಇಳಿದಿಲ್ಲ,
ನ ಹೊಡೆಯುತ್ತಲೇ ಒಂದೂವರೆ ಕಿ.ಮೀ. ದೂರದ
ಪೊಲೀಸ್ ಠಾಣೆವರೆಗೆ ಮೆರವಣಿಗೆ ಮಾಡಿ
ದ್ದಾರೆ. ಅಲ್ಲೂ ಪೊಲೀಸರೊಂದಿಗೆ ಕ್ಯಾತೆ ತೆಗೆದಿದ್ದಾರೆ.
ಸಾಬರ ಹುಡುಗನ ನಮ್ಮ ಕೈಗೆ ಕೊಡಿ ಬುದ್ಧಿ
ತ್ತೇವೆ... ಇಲ್ಲನೇ ನಮ್ಮೆದುರೇ ನಿಮ್ಮ ಥರ್ಡ್ ಡಿಗ್ರಿ
ಮೆಂಟ್ ಕೊಟ್ಟು ವಿಚಾರಣೆ ನಡೆಸಿ..." ಎಂದು
ಬಾಂಧೆ ಪ್ರದರ್ಶಿಸಿದ್ದಾರೆ. ಅಬ್ಬಬ್ಬಾ! ಹಿಂದೂತ್ವದ
ನ್ಮಾದವೇ!!

ದ್ದು ಎಸ್ಪಿ ದಿಲೀಪ್ ಸಾಹೇಬರ ಎದುರೇ!
ತ್ವದ ಆರ್ಭಟ ಸಂಘ ಪರಿವಾರಿಗಳು ತೋರಿಸಿದ್ದಾರೆ.
ರಾಷ್ಟ್ರದ್ರೋಹ ಎಂಬುದಿದ್ದರೆ ನಮ್ಮೊಂದಿಗೆ


ಉತ್ತರ ಕನ್ನಡ
ಅಧಿಕಪ್ರಸಂಗಿ ಸಾಬರ ಪೋರ
ಮತ್ತು
ಅನೈತಿಕ ಪೊಲೀಸ್ ಪಾತಕ!!



ಪ್ರತಿಭಟನೆಗೆ ಬನ್ನಿ..." ಎಂದು ಕಾಲೇಜಿನ ಕ್ಲಾಸು-ಕ್ಲಾಸಿಗೆ ಹೋಗಿ ಭಾಷಣ ಬಿಗಿದು ಅಮಾಯಕ ವಿದ್ಯಾರ್ಥಿಗಳನ್ನು ಬೀದಿಗೆ ತಂದಿದ್ದರು ಹಿಂದೂ ಸಂಘಟನಾ ಶೂರರು. ಈ ವಿದ್ಯಾರ್ಥಿ ಬಲ ತೋರಿಸಿಯೇ ಪೊಲೀಸರನ್ನು ಹೆದರಿಸಿದ ಚೆಡ್ಡಿ ಸಂತಾನ ಸಾಬರ ಹುಡುಗನ ಜೈಲಿಗಟ್ಟುವಂತ ಹಠ ಹಿಡಿದು ಕುಂತಿತು. ಕಕ್ಕಾಬಿಕ್ಕಿಯಾದ ಪೊಲೀಸರು ತುಂಟ ವಿದ್ಯಾರ್ಥಿಯ ಅಚಾತುರ್ಯ ಇದೆಂದು 'ರಾಜಿ' ಮಾಡಿಸುವುದು ಬಿಟ್ಟು ಸಂಘ ಪರಿವಾರದ ಬ್ಲಾಕ್‌ಮೇಲ್‌ಗೆ ಕಂಗಾಲಾಗಿ ಜಾಬೀರ್ ಮೇಲೆ ಬಿಗಿಯಾದ ಕಲಂನಡಿ ಕೇಸ್ ಜಡಿದು ಬಿಟ್ಟರು.

ಈಗ ಅಂತಿಮ ವರ್ಷದಲ್ಲಿದ್ದ ಆ ಹುಡುಗನ ಭವಿಷ್ಯವೇ ಬರಿದಾಗಿಹೋಗಿದೆ. ಕಂಬಿಗಳ ಹಿಂದೆ ಕುಂತು ತನ್ನ ಗೆಳೆಯರ ದ್ರೋಹಕ್ಕೆ ಬಲಿಯಾದೆನೆನ್ನುತ್ತ ಕಂಬನಿಗರೆಯುತ್ತಿದ್ದಾನೆ. ಒಳಸಂಚು, ದೇಶಧರ್ಮದಲ್ಲಿ ಭೇದ ಹುಟ್ಟಿಸುವುದು, ದೇಶ, ಭಾಷೆ, ಧರ್ಮದ ಮಧ್ಯೆ ವೈಷಮ್ಯ ಮೂಡಿಸುವುದು





ಮತ್ತು ಮಾಹಿತಿ ತಂತ್ರಜ್ಞಾನ ಅಪರಾಧದ ಕೇಸ್ ಜಾಬೀರ್ ಮೇಲೆ ಹಾಕಲಾಗಿದೆ. ಕುಮಟೆಯ ವಕೀಲರೂ ಸಂಘ ಪರಿವಾರದ ಹುಸಿ ದೇಶಾಭಿಮಾನದ-ದೇಶ ಭಕ್ತಿಯ ಬೂಟಾಟಿಕೆಯ ಬೆದರಿಕೆಗೆ ಬೆದರಿ ಜಾಬೀರ್‌ನ ಕೇಸು ಹಿಡಿಯಲು ಹಿಂಜರಿಯುತ್ತಿದ್ದಾರೆ. ಒಟ್ಟಿನಲ್ಲಿ ಮುಸ್ಲಿಂನಾಗಿ ಹುಟ್ಟಿದ ತಪ್ಪಿಗೆ ಜಾಬೀರ್ ಮತ್ತವನ ಹೆತ್ತವರೀಗ ಪಡಬಾರದ ಪಾಡು ಪಡುತ್ತಿದ್ದಾರೆ.

ಗೆಳೆಯರ ನಡುವೆ ಮಾತ್ರ ತನ್ನ ಹುಡುಗಾಟಿಕೆಯ ಲಹರಿ ಹರಿಬಿಟ್ಟಿದ್ದ ಜಾಬೀರ್‌ನ ಎಡವಟ್ಟಿಗಿಂತಲೂ ಅಕ್ಷಮ್ಯವಾದ ಅನೈತಿಕ ಪೊಲೀಸ್‌ಗಿರಿ ಸಂಘಿಗಳು ನಡೆಸಿದ್ದಾರೆ. ಆ ಸಾಬರ ಹುಡುಗನಿಗೆ ಹೊಡೆಯುವ ಅಧಿಕಾರ ಚೆಡ್ಡಿಗಳಿಗೆ ಕೊಟ್ಟವರ್‍ಯಾರು? ಚೆಡ್ಡಿ ಚತುರರಾದ ವಿಶ್ವನಾಥ ನಾಯ್ಕ, ಪ್ರಶಾಂತ್ ನಾಯ್ಕ, ಕಮಲಾಕರ ನಾಯ್ಕ, ಸುರೇಶ್ ಪಟಗಾರ, ಸಂತೋಷ್ ನಾಯ್ಕ, ಜೈವಂತ ನಾಯ್ಕ, ಸದಾನಂದ ಪ್ರಭು, ಗಣೇಶ್ ಭಟ್ಟ ಮುಂತಾದ ಹಿಂದೂ ಅಮಲುಕೋರರು ಜಾಬೀರ್‌ನ ಜೀವ ತಿನ್ನುತ್ತಿರುವ ವೀಡಿಯೋ, ಮೊಬೈಲ್ ಚಿತ್ರೀಕರಣ ಕೆಲವು ವಿದ್ಯಾರ್ಥಿಗಳು ಮಾಡಿದ್ದಾರೆ. ಇದಿಷ್ಟೇ ಸಾಕಲ್ಲವಾ? ಅನೈತಿಕ ಪೊಲೀಸ್‌ಗಿರಿಯ ಅತಿರೇಕದ ಅನಾಹುತದ ಸಾಕ್ಷಿ-ಆಧಾರಕ್ಕೆ? ಹಾಗಿದ್ದರೆ ಪೊಲೀಸ್ ವರಿಷ್ಠ ದಿಲೀಪ್ ಏಕೆ ಇವರ ಮೇಲೆ ಕೇಸು ಜಡಿದಿಲ್ಲ? ವೃತ್ತಿಧರ್ಮದ ಅರಿವು ಕುಮಟಾದ ವಕೀಲರಿಗಿದೆಯಾ? ಹಾಗಂತ ಕುಮಟೆಯ ಜನರೇ ಈಗ ಮಾತಾಡಿಕೊಳ್ಳುತ್ತಿದ್ದಾರೆ.

ಚಾಟರ್ ಪೋಲಿಬಾಯ್ಸ್

ವಯೋಸಹಜ ಹುಂಬತನದಲ್ಲಿ ಜಾಬೀರ್ ಮಾಡಬಾರದ್ದು ಮಾಡಿದ್ದಾನೆ ನಿಜ. ಚೆಡ್ಡಿ ಪ್ರಾಣೀತ ಬೋಗಸ್ ದೇಶಪ್ರೇಮ-ರಾಷ್ಟ್ರಗೌರವದ ಸಮೂಹ ಸನ್ನಿಗೆ ಸಿಲುಕಿದವರಿಗೆ ಸಾಬರ ಹುಡುಗ ಜಾಬೀರ್ ಮಾಡಿದ್ದು ರಾಷ್ಟ್ರದ್ರೋಹದ ಕಿಡಿಗೇಡಿತನ ಎಂಬಂತೆ ಕಾಣುವುದು ಸಹಜ. ಆದರೆ ಆ ಮತಾಂಧ ಭಾವನೆಯಾಗಲಿ, ದೇಶಕ್ಕೆ ಅಗೌರವ ತೋರುವ ತಿಕ್ಕಲುತನವಾಗಲಿ ಇಲ್ಲದ, ಸ್ವಭಾವತಃ ಹಿಂದೂ ಗೆಳೆಯ ಹಿಂಡಿನಲ್ಲೇ ಹೆಚ್ಚು ಒಡನಾಡುವ ಜಾಬೀರ್ ಯಾಕೆ ಅಷ್ಟು ಕೆಟ್ಟದಾಗಿ ವಾಟ್ಸ್‌ಆಪ್‌ನಲ್ಲಿ ಒಂದು ಮೆಸೇಜ್ ಕಳಿಸಿದ್ದಾನೆ. ಇಡ್ಲಿ-ವಡಾ-ಸಾಂಬಾರ್ ಜತೆ ಕೇಸರಿ-ಬಿಳಿ-ಹಸಿರು ಸೇರಿಸಿದ್ದಕ್ಕಿಂತ ಕೆಟ್ಟದಾದ ಇನ್ನೊಂದು ಮೆಸೇಜ್ ಆತನಿಂದ ಅದ್ಹೇಗೆ ಬಿಡುಗಡೆಯಾಯ್ತು? ಜಾಬೀರ್‌ನ ಚಕ್ರವ್ಯೂಹದಲ್ಲಿ ಸಿಲುಕಿಸಲು ಷಡ್ಯಂತ್ರವೇನಾದರೂ ನಡೆಯಿತಾ?

ಇಂಥದೊಂದು ಅನುಮಾನಗಳ ಸುತ್ತ ಈಗ ಕುತೂಹಲಕರ ಚರ್ಚೆ ನಡೆಯುತ್ತಿದೆ. ಇದಕ್ಕೆ ಕಾರಣವೂ ಇದೆ. ಜಾಬೀರ್‌ನನ್ನು 'ರಾಷ್ಟ್ರ ಘಾತುಕ'ನೆಂದು ಬಿಂಬಿಸಿ ಅನೈತಿಕ ಪೊಲೀಸರ ಕೈಗೆ ಕೊಟ್ಟ ರಕ್ಷಿತ್ ಜೋಗಿ ಇಬ್ಬರೂ ಪರಮಾಪ್ತ ಮಿತ್ರರು. ಈ ಜಾಬೀರ್ ಮತ್ತು ರಕ್ಷಿತ್ ಸೇರಿ ನಾಲ್ಕೈದು ಹಿಂದೂ ಹುಡುಗರ ಸೇರಿಸಿಕೊಂಡು ಚಾಟ್‌ಗ್ರೂಪ್ ಒಂದನ್ನು ಮಾಡಿಕೊಂಡಿದ್ದಾರೆ. ಈ ಗ್ಯಾಂಗ್‌ನ ಚಾಟ್ ರಂಗು-ರಂಗೀಲಾ ಬಲ್ಲವರು ಅದಕ್ಕೆ ಪೋಲಿ ಪಟಾಲಮ್ ಎಂದೇ ಅಡ್ಡ ಹೆಸರಿಟ್ಟಿದ್ದಾರೆ. ಈ ಮಧ್ಯಮ ವರ್ಗದ ಹುಡುಗರಲ್ಲಿ ಸಾವಿರಾರು ರೂ.ಗಳ ಎಂಡ್ರೈಡ್ ಮೊಬೈಲ್, ಟ್ಯಾಬ್, ಬುಲೆಟ್ ಬೈಕ್‌ನಂಥ ಥಳುಕುಬಳುಕಿನ ಐಷಾರಾಮಿ ವಸ್ತುಗಳು- ಬೆಲೆ ಬಾಳುವ ಬಟ್ಟೆಗಳು ಇವೆ.

ಜಾಬೀರ್-ರಕ್ಷಿತ್ ನಡುವೆ ಈಗೀಗ 'ಅದ್ಯಾಕೋ' ಸಂಬಂಧ ಸರಿ ಇರಲಿಲ್ಲ. ರಕ್ಷಿತ್‌ನ ಮನೆಯವರಿಗೂ ಜಾಬೀರ್‌ನ ಕಂಡರಾಗುತ್ತಿರಲಿಲ್ಲ. ಹೇಳಿಕೇಳಿ ಈ ರಕ್ಷಿತ್ ಕುಮಟಾದ ನಗರ ಮಟ್ಟದ ಬಿಜೆಪಿ ಮಹಿಳಾಮಣಿ ಗೌರಮ್ಮ ಜೋಗಿಯ ಪುತ್ರರತ್ನ. ಒಂದು ಕಾಲದಲ್ಲಿ ರಸ್ತೆ ಬದಿಯಲ್ಲಿ ಬಳೆ-ರಿಬ್ಬನ್-ಪಿನ್ ಮಾರುತ್ತಿದ್ದ ಗೌರಮ್ಮನ ಫ್ಯಾಮಿಲಿ ಇವತ್ತು ಲಕ್ಷಾಂತರ ರೂ.ನ ಕಾಂಪ್ಲೆಕ್ಸ್ ಕುಮಟೆಯ ಹೃದಯ ಭಾಗದಲ್ಲೇ ಖರೀದಿಸುವಷ್ಟು ಹಣವಂತರಾಗಿದ್ದಾರೆ. ಡಿಂಗ್‌ಡಾಂಗ್ ದಂಧೆಯಿಂದಲೇ ಇವರು ಕಮಾಯಿ ಮಾಡಿದ್ದಾರೆಂಬ ಗುಲ್ಲು ಕುಮಟೆಯಲ್ಲಿದೆ. ಈಚೆಗೆ ಗೌರಮ್ಮ ಬಿಜೆಪಿಯಲ್ಲಿ ಮಿಂಚುತ್ತಿರುವಂತೆಯೇ ಆ ಕುಟುಂಬಕ್ಕೆ ರಾಜಕೀಯ ಪ್ರಭಾವಳಿಯೂ ಬಂದುಬಿಟ್ಟಿದೆ.

ಒಂದು ಮೂಲದ ಪ್ರಕಾರ ರಕ್ಷಿತ್ ಕುಟುಂಬದ ಹುಡುಗಿಯೊಂದಿಗೆ ಅತಿಯಾದ ಗೆಳೆತನ ಜಾಬೀರ್ ಬೆಳೆಸಿಕೊಂಡಿದ್ದನಂತೆ. ಇದು ಆ ಖಾನ್‌ದಾನ್‌ಗೆ ಸರಿ ಕಾಣಲಿಲ್ಲ, ಹೀಗಾಗಿ ಜಾಬೀರ್‌ನ ಅರೆಸ್ಟ್ ಮಾಡಲು ರಕ್ಷಿತ್ ಕುಟುಂಬದವರು ಸಮಯ ಸಾಧಿಸುತ್ತಿದ್ದರಂತೆ. ಮತ್ತೊಂದು ಜನಜನಿತ 'ಸುದ್ದಿ'ಯ ಪ್ರಕಾರ ಮುಸ್ಲಿ ಸಮುದಾಯದ ಜಾಬೀರ್‌ನನ್ನು ದೇಶದ್ರೋಹಿಯೆಂದು ತೋರಿಸಿದರೆ ಬಿಜೆಪಿಯಲ್ಲಿ ತನ್ನ ಸ್ಥಾನ-ಮಾನ ಏರುತ್ತದೆಂದು ಗೌರಮ್ಮ ಸ್ಕೆಚ್ ಹಾಕಿದ್ದಳಂತೆ. ಒಂದಂತೂ ಖರೆ. ಜಾಬೀರ್ ಮತಾಂಧ ಗುಣ-ಧರ್ಮದ ಹುಡುಗನಲ್ಲ, ಹಿಂದೂ ಗೆಳೆಯರೇ ಆತನಿಗೆ ಜಾಸ್ತಿ ಪೋಲಿ-ಜಾಲಿ ಚಟುವಟಿಕೆಯಲ್ಲಿ ತೇಲಾಡುತ್ತಿದ್ದ ಈ ದೋಸ್ತಿಗಳಲ್ಲಿ ಘಾತುಕ ಕೋಮು ಕಿತಾಪತಿ ಸದ್ದಿಲ್ಲದೆ ಸೇರಿಕೊಂಡಿತ್ತು.

ಇದ್ದಕ್ಕಿದ್ದಂತೆಯೇ ರಕ್ಷಿತ್‌ನ ವರ್ತನೆ ಬದಲಾಗಿತ್ತು, ಜಾಬೀರ್‌ನನ್ನು "ನೀನು ಸಾಬಿ... ನೀನು ಪಾಕಿಸ್ತಾನಿ... ನೀನು ಪಾಕ್‌ಗೆ ಹೋಗು..." ಎಂಬಿತ್ಯಾದಿ ಮಾತುಗಳು ರಕ್ಷಿತ್‌ನಿಂದ ಬರತೊಡಗಿತ್ತು, ಬಹುಶಃ ಇದು ಆತನ ತಾಯಿಯ ಬಿಜೆಪಿ ಸಹವಾಸದ ದೋಷದ ದುಷ್ಪರಿಣಾಮ ಇರಬಹುದು. ಮೊನ್ನೆ ಸ್ವಾತಂತ್ರ್ಯ ದಿನಾಚರಣೆ ದಿನವೂ ಹಾಗೇ ಆಗಿದೆ. ರಕ್ಷಿತ್ ಧರ್ಮ-ದೇಶದ ಹೆಸರೆತ್ತಿ ಜಾಬೀರ್‌ನನ್ನು ಮೂದಲಿಸಿದ್ದಾನೆ. ಚಾಟ್‌ನಲ್ಲಿ ಮಾತಿಗೆ ಮಾತು ಬೆಳೆದಿದೆ. ವಿಕೃತ ಮೆಸೇಜ್‌ಗಳೂ ಹರಿದಾಡಿವೆ. ಜಾಬೀರ್‌ಗೆ ತನ್ನ ದೇಶ ನಿಷ್ಠೆಯನ್ನೇ ಅನುಮಾನಿಸಿದ್ದು ಘಾಸಿಗೊಳಿಸಿದೆ. ಗೆಳೆಯ ರಕ್ಷಿತ್‌ನ ಕೆಣಕಲು ಆತ ಇಡ್ಲಿ-ವಡಾ-ಸಾಂಬಾರ್ ಹಾಡು ಕಟ್ಟಿ ವಾಟ್ಸ್‌ಆಪ್‌ನಲ್ಲಿ ತೇಲಿಬಿಟ್ಟಿದ್ದಾನೆ. ಹಾಗೆ ತನ್ನ ಇನ್ನಿತರ ಗೆಳೆಯರಿಗೂ ಕಳಿಸಿದ್ದಾನೆ.


ಆದರೆ ಇದನ್ನು ರಕ್ಷಿತ್ ಮನೆಯವರಿಗೆ ತೋರಿಸಿದ್ದಾನೆ. 'ನಿಗೂಢ' ಕಾರಣಕ್ಕಾಗಿ ಜಾಬೀರ್‌ನ ಹಣಿಯಲು ಹವಣಿಸುತ್ತಿದ್ದ ಗೌರಮ್ಮ ಜೋಗಿ ಕಡೆಯವರಿಗೆ ಈ ಮೆಸೇಜ್ ಸಾಕಾಗಿದೆ! ತಕ್ಷಣ ತನ್ನ ಪಾಲಿಟಿಕಲ್ ಒಡನಾಡಿಗಳಾದ ಸಂಘ ಪರಿವಾರದ-ನೈತಿಕ ಪೊಲೀಸ್‌ಗಿರಿಯನ್ನೇ ಕಸುಬಾಗಿಸಿಕೊಂಡಿದ್ದ- 'ದೇಶಭಕ್ತರಿಗೆ' ವಾಟ್ಸ್‌ಆಪ್ 'ವಿವರ' ಹೇಳಿದ್ದಾರೆ. ಹಿಂದೂತ್ವದ ಕೊಳ್ಳಿ ದೆವ್ವಗಳು ಹಿಂದೆ-ಮುಂದೆ ಯೋಚಿಸದೆ ತಮ್ಮ 'ಮಹಿಳಾ ನಾಯಕಿ' ಹೇಳಿದ್ದನ್ನು ನಂಬಿದ್ದಾರೆ. ಪಾಪದ ಹುಡುಗ ಜಾಬೀರ್‌ನ ಬದುಕಿಗೆ ಕೊಳ್ಳಿ ಇಟ್ಟಿದ್ದಾರೆ.

ಈಗ ಚೆಂಡಿರುವುದು ಅಸಲೀ ಪೊಲೀಸರ ಅಂಕಣದಲ್ಲಿ. ಜಾಬೀರ್‌ನ 'ಕಾಫಿರ್' ಎಂದು ಕಂಬಿಯ ಹಿಂದಿಟ್ಟಿರುವ ಪೊಲೀಸರು 'ಚಾಟ್‌ಬಾಯ್ಸ್' ಸಂಭಾಷಣೆ ಕೂಲಂಕಷವಾಗಿ ಪರೀಕ್ಷಿಸಬೇಕಿದೆ. ಜಾಬೀರ್ ಖಾನ್ ಮತ್ತು ರಕ್ಷಿತ್ ಜೋಗಿಯ ಫೋನ್ ಕರೆ ಪರಿಶೀಲಿಸಬೇಕಿದೆ. ಜಾಬೀರ್ ಇಡ್ಲಿ ಹಾಡು ಹೊಸೆವ ಮೊದಲು ಮತ್ತು ಆ ನಂತರ ರಕ್ಷಿತ್ ಏನೇನು ಪ್ರಚೋದನೆಯ ಕುಚೋದ್ಯ ಮಾಡಿದ್ದಾನೆಂಬುದರ ತನಿಖೆ ಮಾಡಬೇಕಿದೆ. ಆ ದೇಶಭಕ್ತರ ಬಣ್ಣ ಬಯಲಾಗುತ್ತದೆ.

ಹಾಗೆಯೇ ಕಾನೂನನ್ನು ಕೈಗೆತ್ತಿಕೊಂಡು ಅನೈತಿಕ ಪೊಲೀಸ್‌ಗಿರಿ ನಡೆಸಿ ಜಾಬೀರ್ ಮೇಲೆ ಅಮಾನುಷ ಹಲ್ಲೆ ಮಾಡಿದವರನ್ನೂ ಕಂಬಿ ಹಿಂದೆ ದೂಡಬೇಕಿದೆ. ಈಗ ಎಲ್ಲರ ಬಾಯಲ್ಲೂ ಒಂದೇ ಉದ್ಗಾರ! "ಅಧಿಕಪ್ರಸಂಗಿ ಸಾಬರ ಹುಡುಗನಿಗೆ ನಾಲ್ಕು ಬುರುಡೆಗೆ ಹಾಕಿ ಬುದ್ಧಿ ಹೇಳಿಬಿಡಬಹುದಿತ್ತು... ಹೇಗೋ ಚೆಡ್ಡಿಗಳು ಹೊಡೆದು ಚಟ ತೀರಿಸಿಕೊಂಡು ಮೋಕಳಿಕ್ ಆಗಿದ್ದರು... ಸಣ್ಣ ವಯಸ್ಸಿನ ವಿದ್ಯಾರ್ಥಿಯ ಮೇಲೆ ಪೊಲೀಸ್ ಕೇಸ್ ಬೇಡವಾಗಿತ್ತು... ಆತನ ಬದುಕಿಗೆ ಕಲ್ಲು ಹಾಕುವ ಕೆಲಸ ಕೇಸರಿ ಕಟುಕರು ಮಾಡಬಾರದಿತ್ತು..." ಹಾಗಂತ ಹಿಂದೂಗಳೇ ಹಿಂದೂ ಜಾಗರಣಾ ವೇದಿಕೆಯ ಗೂಂಡಾಗಳಿಗೆ ಲಟಿಕೆ ಮುರಿದು ಶಾಪ ಹಾಕುತ್ತಿದ್ದಾರೆ. ಸಮಾಧಾನದ ಸಂಗತಿಯೆಂದರೆ, ಬಿಜೆಪಿ-ಆರೆಸ್ಸೆಸ್-ಮೋದಿ ಆರಾಧಕರಿಗೂ ಜಾಬೀರ್‌ನ ಸಂಕಟದ ಹಿಂದೆ 'ಸಲ್ಲದ್ದು' ಕಂಡಿದೆ; ಕೇಸರಿ-ಚೆಡ್ಡಿ ಪಡೆಯದು ಅತಿಯಾಯ್ತೆಂದೇ ಎಲ್ಲರೂ ಜಾಬೀರ್‌ಗೆ ಅನುಕಂಪ ತೋರಿಸುತ್ತಿದ್ದಾರೆ.

● ನಮಹ

ಅವರ ನೆನಪೂ ರೂಪಕವಾಗಿ ನಮ್ಮನ್ನು ಕಾಡುತ್ತಿರಲಿ



ಅನಂತ ಮೂರ್ತಿ ರೀತಿ


ಪ್ರೀತಿ ಮತ್ತು ಪ್ರಜಾಪ್ರಭುತ್ವದ ಪ್ರೀತಿ- ಎರಡನ್ನೂ ಬದುಕಿದವರು ಅನಂತಮೂರ್ತಿ. ಈ ವಿಷಯದಲ್ಲಿ ಯಾವ ದ್ವಂದ್ವವೂ ಇಲ್ಲ; ಗೊಂದಲವೂ ಇಲ್ಲ. ಅಂತೆಯೇ ಅವರು ಅತ್ಯಂತ ಸ್ಪಷ್ಟ ನಿಲುವು ತಾಳಿದ ಎರಡು ವಿಷಯಗಳೆಂದರೆ- ಕನ್ನಡಪರ ನಿಲುವು ಮತ್ತು ಕೋಮುವಾದ ವಿರೋಧ. ಕನ್ನಡವನ್ನು ಪ್ರೀತಿಯ ಸಂವೇದನೆಯಾಗಿ ಸ್ವೀಕರಿಸಿದ ಅವರು ನಿಚ್ಚಳ ನಿಲುವನ್ನು ಪ್ರತಿಪಾದಿಸುತ್ತ ಬಂದರು. ಕೋಮುವಾದವನ್ನು ದಿಟ್ಟವಾಗಿ ವಿರೋಧಿಸುತ್ತ ಬಂದರು. ಮೋದಿಯನ್ನು ಒಬ್ಬ ವ್ಯಕ್ತಿಯಾಗಿ ವಿರೋಧಿಸಲಿಲ್ಲ. ಕೋಮುವಾದದ ಕರಾಳ ರೂಪಕವಾಗಿ ಕಂಡು ಪ್ರತಿರೋಧಿಸಿದರು.

ಅನಂತಮೂರ್ತಿಯವರು ಇನ್ನಿಲ್ಲ. ಆದರೆ ಅವರನ್ನು ಮತ್ತು ಅವರ ವಿಚಾರಗಳನ್ನು ಕುರಿತ ಚರ್ಚೆ ನಿಂತಿಲ್ಲ. ಇದು ಅನಂತಮೂರ್ತಿ ಎಂಬ ರೂಪಕ ವ್ಯಕ್ತಿತ್ವದ ವಿಶೇಷ. ಅವರು ಬದುಕಿದ್ದಾಗ 'ವೈಚಾರಿಕ'ವಾಗಿ ಎದುರಾದವರು ಈಗಲೂ ಅದೇ ಧಾಟಿಯಲ್ಲಿ ಮಾತಾಡುತ್ತ ಉತ್ತಮ ಗುಣ ಮತ್ತು ಸಾಧನೆಗಳನ್ನೂ ಜೊತೆಗೆ ನೆನೆಯುತ್ತಿದ್ದಾರೆ. ಆದರೂ ಹಿಂದೆ ಇದ್ದ ವೈಚಾರಿಕ 'ಜಗಳ ಬಂದಿ'ಯನ್ನು ಮರೆ ಮಾಚುತ್ತಿಲ್ಲ. ಇನ್ನು ಕೆಲವರು- ನಿರ್ದಿಷ್ಟವಾಗಿ ಹಿಂದೂ ಮೂಲಭೂತವಾದಿಗಳು- ಅಲ್ಲಲ್ಲೆ ಪಟಾಕಿ ಸಿಡಿಸಿ ಅನಂತಮೂರ್ತಿಯವರ ಸಾವನ್ನು ಸಂಭ್ರಮಿಸಿದ್ದಾರೆ! ಇಂಥ ವಿಕೃತಿಗಳು ಮುನ್ನೆಲೆಗೆ ಬರುತ್ತಿರುವುದು ನಮ್ಮ ಕಾಲದ ದುರಂತವೇ ಸರಿ. ಸಂಸ್ಕೃತಿಯ ಹೆಸರಿನಲ್ಲಿ ವಿಕೃತಿಯನ್ನು ವಿಜೃಂಭಿಸಿ ವಿಘ್ನ ಸಂತೋಷದ ಮೂಲಕ ಅಸಹನೆಯ ಅತಿರೇಕವನ್ನು ಅನಾವರಣಗೊಳಿಸುವ ಪ್ರವೃತ್ತಿಯನ್ನು ಖಂಡಿಸುವುದಷ್ಟೇ ಅಲ್ಲ, ಯಾರ ವಿಷಯದಲ್ಲೂ ಹೀಗಾಗದಂತೆ ತಡೆಯುವ ವಿವೇಕವನ್ನು ಬಿತ್ತಬೇಕು; ಬೆಳೆಸಬೇಕು.

ವಿಚಿತ್ರವೆಂದರೆ, ಅಸಹನೆಯ ವೈಪರೀತ್ಯಗಳಿಗೂ, ವೈಚಾರಿಕ ಚರ್ಚೆಗಳಿಗೂ ಅನಂತಮೂರ್ತಿಯವರೇ ನಿಮಿತ್ತವಾದದ್ದು, ನಿಕಷಸ್ಥಾನದಲ್ಲಿ ಇದ್ದದ್ದು- ಅವರ ವ್ಯಕ್ತಿತ್ವ ಮತ್ತು ವಿಚಾರಗಳ ತೀವ್ರತೆಗೆ ಸಾಕ್ಷಿ ಸ್ವರೂಪಿಯಾಗಿದೆ. ಬದುಕಿದ್ದಾಗ ಅವರು ಪಡೆದ ಪ್ರಶಂಸೆ ಮತ್ತು ಪ್ರತಿರೋಧಗಳು ನಿಧನಾನಂತರವೂ ಮುಂದುವರೆದ ಬಗೆಯ ಮೂಲಕ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಸಾಧನೆಗಳನ್ನು ಪ್ರಶಂಸಿಸುತ್ತ ಹುಸಿ ಪ್ರತಿರೋಧಗಳನ್ನು ಖಂಡಿಸುತ್ತ ಪ್ರೀತಿಪೂರ್ವಕವಾಗಿಯೇ ಪ್ರಜಾಸತ್ತಾತ್ಮಕ ಚರ್ಚೆ ಮತ್ತು ಸಂವಾದದ ಸಂದರ್ಭವನ್ನು ರೂಪಿಸುವುದು ಮತ್ತು ಕಾಯ್ದುಕೊಳ್ಳುವುದು ನಮ್ಮ ಕಾಲದ ವಿವೇಕವಾಗಬೇಕಾಗಿದೆ. ವೈಚಾರಿಕ ವಿರೋಧವು ಮೂಲಭೂತವಾದಿ ಫ್ಯಾಸಿಸ್ಟರ ಪ್ರತಿರೋಧಕ್ಕೆ ಪೂರಕವಾಗದಂತೆ ಎಚ್ಚರ ವಹಿಸುವ ಅಗತ್ಯವೂ ಇದೆ. ಪ್ರಗತಿಪರ ವೈಚಾರಿಕ ವಲಯದ ಭಿನ್ನಾಭಿಪ್ರಾಯಗಳು ಪ್ರಗತಿಪರ ಚಿಂತನಾ ರೂಪಕಗಳನ್ನು ಛಿದ್ರಗೊಳಿಸುವ ಒಳಸಂಭ್ರಮವು ಪ್ರತಿಗಾಮಿಗಳಿಗೆ ಪ್ರೋತ್ಸಾಹ ಕೊಡುವ ಒಂದು ವಿಕಾರವಾಗಬಾರದೆಂಬ ಸೂಕ್ಷ್ಮತೆ ನಮಗೆ ಬೇಕು. ಯಾಕೆಂದರೆ ನೇರ-ನಿಷ್ಠುರ ಎನ್ನುವುದು ಧಿಮಾಕಿನ ಧೈರ್ಯವಾದಾಗ ವಿಚಾರಗಳು ವಿಕಾರವಾಗುವ ಅಪಾಯವಿರುತ್ತದೆ. ನೇರ, ನಿಷ್ಠುರ ನಡೆ-ನುಡಿಗಳು ಸೌಜನ್ಯ ಮತ್ತು ಸಹನೆಯ ಎಲ್ಲೆಯನ್ನು ಮೀರಿದಾಗ ಸಂವಾದಕ್ಕೆ ಮಾರಕವಾಗುತ್ತವೆ. ವ್ಯಕ್ತಿ ದ್ವೇಷಕ್ಕೆ ಎಡೆಮಾಡುವ ಅಪಾಯವನ್ನು ಆಹ್ವಾನಿಸುತ್ತವೆ. ಇಂಥ ಅಪಾಯಗಳಿಂದ ಪ್ರತಿಗಾಮಿಗಳಷ್ಟೇ ಅಲ್ಲ ಪ್ರಗತಿಗಾಮಿಗಳೂ ದೂರವಾಗಿ ಸಂವೇದನಾಶೀಲ ಸಂವಾದ ನಡೆಸಬೇಕಲ್ಲವೆ?- ಎಂಬ ಪ್ರಶ್ನೆಯೇ ಅನಂತಮೂರ್ತಿಯವರ ಸಾವಿನ ಸಂದರ್ಭದ 'ಪಾಠ' ಎಂದು ನಾನು ಭಾವಿಸುತ್ತೇನೆ. ಸಾಧಕರೊಬ್ಬರ ಸಾವಿನ ಸಂದರ್ಭದಲ್ಲಿ ಇಂಥ ಪಾಠವನ್ನು ಕಲಿಯಬೇಕಾದ ಅಥವಾ ನೆನೆಯಬೇಕಾದ ಕಾಲವಮಾನದಲ್ಲಿ ನಾವಿದ್ದೇವೆನ್ನುವುದು ವಿಷಾದದ ಒಂದು ವಿಪರ್ಯಾಸವಾಗಿದೆ.

ನಾನು ಮೇಲೆ ಪ್ರಸ್ತಾಪಿಸಿದ ಈ 'ಪಾಠ'ವನ್ನು ರೂಢಿಸಿಕೊಂಡು ಬದುಕಿದವರು ಅನಂತಮೂರ್ತಿಯವರು. ಅವರು ವ್ಯಕ್ತಪಡಿಸುತ್ತಿದ್ದ ಕೆಲವು ಅಭಿಪ್ರಾಯಗಳು ನಿಷ್ಠುರವೆನ್ನಿಸಿದರೂ ಮಾತಿನಲ್ಲಿ ಸಹನೆಯ ಸ್ಪರ್ಶ ಇರುತ್ತಿತ್ತು. ಕಳಕಳಿಯ ಒಳ ಒತ್ತಡವೊಂದು ಕೆಲಸ ಮಾಡುತ್ತಿತ್ತು. ಹೀಗಾಗಿ ತೀವ್ರ ಪ್ರತಿಕ್ರಿಯೆಗಳಲ್ಲೂ ಸೌಜನ್ಯ ಇರುತ್ತಿತ್ತು. ಒರಟುತನಕ್ಕೆ ದೂರವಾದ ದೃಢನಂಬಿಕೆಯ ನುಡಿಗಾರಿಕೆಯು ಅನಂತಮೂರ್ತಿಯವರ ಸಹಜ ಗುಣವಾಗಿತ್ತು. ಕೆಲವೊಮ್ಮೆ ಅವರ ಅಭಿಪ್ರಾಯಗಳಲ್ಲಿ ವೈರುಧ್ಯದ ಒಳಸುಳಿ ಕಾಣುತ್ತಿತ್ತು. ಇದರ ಫಲವಾಗಿ 'ದ್ವಂದ್ವಮೂರ್ತಿ' ಎಂದು ಲೇವಡಿಗೂ ಅವರು ತುತ್ತಾದರು. ಯಾಕೆ ಹೀಗಾಯಿತು ಎಂದು ನಾನು ಯೋಚಿಸಿದ್ದುಂಟು. ಬಹುಶಃ ಏಕಕಾಲದಲ್ಲಿ ಎರಡು ತುದಿಗಳನ್ನು ಒಂದೇ ವಿಚಾರದಲ್ಲಿ ತಳಕು ಹಾಕುವ, ಪರ-ವಿರೋಧಗಳನ್ನು ಒಟ್ಟಿಗೇ ಇಟ್ಟು ನೋಡುವ, ಈ ಮೂಲಕ ಅಸ್ಪಷ್ಟ ತಾಕಲಾಟಕ್ಕೆ ಒಳಗಾಗುವ ಪ್ರಕ್ರಿಯೆಯಿಂದ ಅನಂತಮೂರ್ತಿಯವರ ಪ್ರತಿಕ್ರಿಯೆಗಳಲ್ಲಿ ದ್ವಂದ್ವ ಮತ್ತು ಗೊಂದಲ ಉಂಟಾಗುತ್ತಿತ್ತು ಎಂದು ಊಹಿಸಬಹುದು. ಇದು ಅವರ ವ್ಯಕ್ತಿತ್ವದ ಒಂದು ಭಾಗವಾಗಿಯೇ ಬೆಳೆಯಿತೇನೋ ಎನ್ನಿಸುವುದೂ ಉಂಟು.

ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು. ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲ. ಗಣಿಧಣಿಗಳಾದ ಶ್ರೀ ಜನಾರ್ದನ ರೆಡ್ಡಿ ಮತ್ತು ತಂಡದೊಂದಿಗೆ ಮೊದಲು ಅವಿನಾಭಾವಸಂಬಂಧ ಹೊಂದಿದ್ದ ಯಡಿಯೂರಪ್ಪನವರು ಆ ನಂತರದ ರಾಜಕೀಯ ಬೆಳವಣಿಗೆಗಳಿಂದ ದೂರವಾದ ಸಂದರ್ಭ. ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವ ಸಮಾರಂಭ. ಅನಂತಮೂರ್ತಿಯವರು ಅತಿಥಿಗಳಲ್ಲ. ಆದರೂ ಸಮಾರಂಭಕ್ಕೆ ಬಂದರು. ಬಂದಮೇಲೆ ವೇದಿಕೆಗೆ ಕರೆಯದಿದ್ದರೆ ಹೇಗೆ ಎಂದು ಕರೆದು ಕೂಡಿಸಿದರು. ಅನಂತಮೂರ್ತಿಯವರು ಹೀಗೆ ಅಭಿಪ್ರಾಯ ಪಟ್ಟರು: 'ಯಡಿಯೂರಪ್ಪನವರನ್ನು ಅಭಿನಂದಿಸಲು ನಾನು ಇಲ್ಲಿಗೆ ಸ್ವಯಂಪ್ರೇರಣೆಯಿಂದ ಬಂದಿದ್ದೇನೆ. ಯಾಕೆಂದರೆ ಅವರು ಗಣಿಧಣಿಗಳ ವಿರುದ್ಧ ಸೆಟೆದು ನಿಂತಿದ್ದು ಪ್ರಾಕೃತಿಕ ಸಂಪತ್ತನ್ನು ರಕ್ಷಿಸಲಿದ್ದಾರೆ.' -ಹೀಗೆ ಹೇಳಿದ ಅನಂತಮೂರ್ತಿಯವರಿಗೆ ಯಡಿಯೂರಪ್ಪನವರು ಗಣಿಧಣಿಗಳ ಜೊತೆಗಾರರಾಗಿಯೇ ರಾಜಕೀಯ ಮಾಡಿದ್ದು ಅಧಿಕಾರದ ಕಾರಣಕ್ಕಾಗಿ ಮನಸ್ತಾಪಕ್ಕೆ ಒಳಗಾದದ್ದು ಮರೆತೇಹೋಗಿತ್ತು. ಅವರ ರಾಜಕೀಯ ಗ್ರಹಿಕೆ ಅಷ್ಟರಮಟ್ಟಿಗೆ ಕ್ಷೀಣವಾಗಿತ್ತು. ಗಣಿಗಾರಿಕೆ ವಿರುದ್ಧವಾಗಿದ್ದಾರೆಂಬ ಅಂಶ ಅವರನ್ನು ಭಾವುಕಗೊಳಿಸಿತ್ತು. ಚರಿತ್ರೆ ಮರೆತುಹೋಗಿತ್ತು. ಆದರೆ ಇದೇ ಅನಂತಮೂರ್ತಿಯವರು ಭಾರತೀಯ ಜನತಾ ಪಕ್ಷದ ವಿರೋಧಿಯಾಗಿದ್ದರು! ಯಡಿಯೂರಪ್ಪನವರು ಜೀವನದುದ್ದಕ್ಕೂ ಈ ಪಕ್ಷದಲ್ಲೇ ದುಡಿದು ಬೆಳೆದವರು! ಅನಂತಮೂರ್ತಿಯವರ ಅಭಿಪ್ರಾಯವನ್ನು ದ್ವಂದ್ವದ ನೆಲೆ ಎಂದೂ ಕರೆಯಬಹುದು;



ಗೊಂದಲ ಎನ್ನಬಹುದು. ರಾಜಕಾರಣದ ತಪ್ಪು ತಿಳಿವಳಿಕೆಯೂ ಇರಬಹುದು. ಆದರೆ ಅವರು ಖಂಡಿತ ಅಪ್ರಬುದ್ಧರಲ್ಲ. ಅತ್ಯಂತ ಪ್ರಬುದ್ಧ ಚಿಂತನೆಗೆ ಹೆಸರಾದವರು. ಹಿಂದು-ಮುಂದಿನ ನೋಟಗಳಿಗೆ ಪ್ರಯತ್ನಿಸದೆ ತಾತ್ಕಾಲಿಕ ತೀವ್ರಭಾವಕ್ಕೆ ಒಳಗಾಗಿ ಹೀಗೆ ದ್ವಂದ್ವಾತ್ಮಕವಾಗುವ ಸಂದರ್ಭಗಳನ್ನು ಅನಂತಮೂರ್ತಿಯವರಲ್ಲಿ ಕಾಣಬಹುದು. ಒಳ್ಳೆಯದೆಂದು ಅವರು ಭಾವಿಸುವ ಮತ್ತು ತಾತ್ವಿಕ ವಿರೋಧಿಗಳಲ್ಲೂ ಒಳ್ಳೆಯದನ್ನು ಗುರುತಿಸುವ ಅವರ ಗುಣವೂ ಈ ದ್ವಂದ್ವಕ್ಕೆ ಕಾರಣವಿರಬಹುದು.

ಜಾತ್ಯತೀತ ಜನತಾದಳದ ನಾಯಕರಾದ ಶ್ರೀ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭವೊಂದರಲ್ಲಿ 'ಯಾರ್ರೀ ಅನಂತಮೂರ್ತಿ?' ಎಂದು ಹೀಗಳೆದಿದ್ದರು. ಆನಂತರ ಮಾಜಿ ಮುಖ್ಯಮಂತ್ರಿಗಳಾಗಿದ್ದಾಗ ಸರ್ಕಾರದ ವಿರುದ್ಧ ಆಮರಣಾಂತ ಉಪವಾಸ ಕೂತರು. ಉಪವಾಸ ತಪ್ಪಿಸಲು ಅಥವಾ ನಿಲ್ಲಿಸಲು ಸ್ವತಃ ಅನಂತಮೂರ್ತಿಯವರೇ ಹೋಗಿ ಕುಮಾರಸ್ವಾಮಿಯವರಿಗೆ ಶರಬತ್ತು ಕುಡಿಸಿದರು. 'ಯಾರ್ರೀ ಅನಂತಮೂರ್ತಿ?' ಎಂದು ಹೀಗಳೆದ ಪ್ರಸಂಗವನ್ನು ಮರೆತಿದ್ದರು. ಇದನ್ನೂ 'ದ್ವಂದ್ವ' ಎಂದವರುಂಟು. ಆದರೆ ಈ ಮಾದರಿ ಅನಂತಮೂರ್ತಿಯವರ ವ್ಯಕ್ತಿತ್ವದ ಒಳಝರಿಯಾಗಿತ್ತು.

ಯಡಿಯೂರಪ್ಪ ಮತ್ತು ಕುಮಾರಸ್ವಾಮಿಯವರ ವಿಚಾರದಲ್ಲಿ ಕಂಡುಬಂದ ಅನಂತಮೂರ್ತಿಯವರ ನಡೆ-ನುಡಿಯನ್ನು ನರೇಂದ್ರ ಮೋದಿಯವರ ವಿಚಾರದಲ್ಲಿ ಕಾಣಲು ಸಾಧ್ಯವಿಲ್ಲ. ನರೇಂದ್ರ ಮೋದಿಯವರು ಪ್ರಧಾನಿಯಾಗಬಾರದು-ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅದರಲ್ಲಿ ಯಾವ ಗೊಂದಲವೂ ಇರಲಿಲ್ಲ. ಹಾಗಾದರೆ ಅವರ ವಿಚಾರಗಳು ವ್ಯಕ್ತಿ ಕೇಂದ್ರಿತವೆ? ಮೋದಿಯವರನ್ನು ವ್ಯಕ್ತಿ ಕೇಂದ್ರಿತವಾಗಿ ವಿರೋಧಿಸಿದರೆ? ಇಲ್ಲ. ಅನಂತಮೂರ್ತಿಯವರಿಗೆ ಮೋದಿಯು ಆಕ್ರಮಣಕಾರಿ ಹಿಂದೂತ್ವದ ರೂಪಕವಾಗಿದ್ದರು. ಹಾಗಾಗಿ ಅಪಾಯಕಾರಿಯಾಗಿ ಕಂಡರು. ಅವರ ಬಗ್ಗೆ ಇವರು ಹೇಳಿದ ಒಂದು ಮಾತು ಸಾವಿನ ನಂತರವೂ ಕಾಡಿಸಿದ್ದು ನೋವಿನ ಸಂಗತಿ.

ವಾಸ್ತವವಾಗಿ ಅನಂತಮೂರ್ತಿಯವರು ಮೋದಿಯವರ ಬಗ್ಗೆ ತೀವ್ರ ಪ್ರತಿಕ್ರಿಯೆ ನೀಡಿದ್ದು ನನ್ನ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ. ಶ್ರೀ ಎಸ್.ಎಂ. ಕೃಷ್ಣ ಅವರು ಪುಸ್ತಕ ಬಿಡುಗಡೆ ಮಾಡಿದರು. ಡಾ. ಕೆ.ವಿ. ನಾರಾಯಣ ಅತಿಥಿಗಳಾಗಿದ್ದರು. ಅನಂತಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಎಸ್.ಎಂ. ಕೃಷ್ಣ ಅವರು 'ನನಗೆ ಐ.ಟಿ. ಅಭಿವೃದ್ಧಿಪಡಿಸಿದ್ದಕ್ಕಿಂತ ಅಕ್ಷರ ದಾಸೋಹ ಜಾರಿಗೆ ತಂದದ್ದು ಹೆಚ್ಚು ಸಂತೋಷ ತಂದಿದೆ' ಎಂದು ಹೇಳಿದರು. ಅನಂತಮೂರ್ತಿಯವರಿಗೆ ಇಷ್ಟು ಸಾಕಿತ್ತು. 'ಈಗ ಕೃಷ್ಣ ನಮ್ಮವರಾದರು' ಎಂದು ಪ್ರಶಂಸಿಸುತ್ತ ಅಭಿವೃದ್ಧಿ ಮಾದರಿಗಳ ವಿಷಯಕ್ಕೆ ಹೊರಳಿ ಮೋದಿಯವರತ್ತ ಹೊರಳಿದರು. 'ಮೋದಿ ಪ್ರಧಾನಿಯಾದ್ರೆ ನಾನು ಬದುಕಿರಬಾರದು ಅನ್ನಿಸುತ್ತೆ' -ಎಂದು ಭಾವೋದ್ವೇಗದಲ್ಲಿ ಹೇಳಿದರು. ಅವರು ದೇಶ ಬಿಟ್ಟು ಹೋಗುತ್ತೇನೆಂದು ಹೇಳಿರಲಿಲ್ಲ. ಆದರೆ ಅನಂತಮೂರ್ತಿಯವರ ಮಾತು ಬೇರೆ ರೂಪ ಪಡೆಯಿತು. ಮೋದಿಯವರು ಪ್ರಧಾನಿಯಾದ ಮೇಲೆ ಇವರನ್ನು ಮಾನಸಿಕವಾಗಿ ಹಿಂಸೆಗೆ ಒಳಪಡಿಸಿ ಮೂಲಭೂತವಾದಿಗಳು ವಿಜೃಂಭಿಸಿದರು. 'ಪಾಕಿಸ್ತಾನಕ್ಕೆ ಹೋಗಿ' ಎಂದರು. ಆರೋಗ್ಯವಾಗಿದ್ದಾಗಲೂ ಇಂಥ ಮಾನಸಿಕ ಯಾತನೆ ಕೊಡಬಾರದು. ಆದರೆ ಮೂಲಭೂತವಾದಿ ವಿಕಾರಿಗಳು ತೀವ್ರ ಅನಾರೋಗ್ಯದಲ್ಲಿದ್ದ ಅನಂತಮೂರ್ತಿಯವರಿಗೆ ಮಾನಸಿಕ ಹಿಂಸೆ ಕೊಟ್ಟು ಪ್ರಜಾಪ್ರಭುತ್ವದ ಮೌಲ್ಯವನ್ನಷ್ಟೇ ಅಲ್ಲ, ಮಾನವೀಯ ಮೌಲ್ಯವನ್ನೂ ಮಣ್ಣು ಪಾಲು ಮಾಡಿದರು. ಅನಂತಮೂರ್ತಿಯವರ ಸಾವಿನನಂತರ ಇದೇ ವಿಕಾರದ ಕೆಲವು ಕಿಡಿಗೇಡಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಧರ್ಮ-ಸಂಸ್ಕೃತಿ ಎಂದೆಲ್ಲ ಮಾತಾಡುವ ವಲಯದಿಂದ ಬಂದವರೇ ಮಾನವ ಧರ್ಮಕ್ಕೆ, ಸಹನಾ ಸಂಸ್ಕೃತಿಗೆ ಬೆಂಕಿಯಿಟ್ಟರು.

ಧರ್ಮ, ಸಂಸ್ಕೃತಿ, ಪರಂಪರೆ- ಎಂದೆಲ್ಲ ಮಾತಾಡುವ ಎಲ್ಲರೂ ಅರ್ಥಮಾಡಿಕೊಳ್ಳಬೇಕಾದ ಚಾರಿತ್ರಿಕ ಸಂದರ್ಭಗಳಿವೆ. ಬುದ್ಧ, ಬಸವಣ್ಣ, ಅಲ್ಲಮ, ಅಂಬಿಗರ ಚೌಡಯ್ಯ, ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್, ಸುಭಾಷ್‌ಚಂದ್ರ ಬೋಸ್- ಇವರೆಲ್ಲ ಒಂದೇ ಮಾದರಿಯ ಒಂದೇ ವಿಚಾರಧಾರೆಯ ವ್ಯಕ್ತಿತ್ವಗಳಲ್ಲ. ಬುದ್ಧನ ಕಾಲದಲ್ಲೂ ವಾಗ್ವಾದಗಳಿದ್ದವು. ಬಸವಣ್ಣನವರ ಭಕ್ತ-ಭವಿ ಎಂಬ ವಿಂಗಡನೆಯನ್ನು ಅಲ್ಲಮಪ್ರಭು ವ್ಯಂಗ್ಯ ಮಾಡಿದ್ದರು. ಅಂಬಿಗರ ಚೌಡಯ್ಯ 'ಶರಣ ಸತಿ ಲಿಂಗಪತಿ' ಎಂಬ ಪರಿಕಲ್ಪನೆಯನ್ನೇ ಪ್ರಶ್ನಿಸಿದ್ದರು. ಗಾಂಧಿ ಮತ್ತು ಅಂಬೇಡ್ಕರ್ ನಡುವೆ ಅಪರಿಮಿತ ವೈಚಾರಿಕ ವಾಗ್ವಾದಗಳು ನಡೆದಿದ್ದವು. ಇದರ ಫಲವೊ ಎಂಬಂತೆ ಗಾಂಧೀಜಿಯವರು ತಮ್ಮ ಕೊನೆಯ ದಶಕದಲ್ಲಿ ಸಾಕಷ್ಟು ಬದಲಾಗಿ ಜಾತಿ-ವರ್ಣ-ವರ್ಗ ವ್ಯವಸ್ಥೆಗೆ ವಿರೋಧಿಯಾದರು. ಗಾಂಧೀಜಿ ಮ... ಭಗತ್ ಸಿಂಗ್ ಅಭಿಪ್ರಾಯಗಳಿಗೆ ಅಜಗಜಾಂ... ಸುಭಾಷ್‌ಚಂದ್ರ ಬೋಸ್ ಮಾದರಿಯ ಗಾಂಧಿಯವ... ಸಮ್ಮತವಲ್ಲ. ಆದರೆ ಇವರೆಲ್ಲರ ಭಿನ್ನಾಭಿಪ್ರಾಯಗ... ವ್ಯಕ್ತಿಗತವಾಗಿರಲಿಲ್ಲ. ಸಂವಾದದ ಸೌಜನ್ಯವನ್ನು ಮೀರಲಿ... ಅಷ್ಟೇಕೆ, ಪರಸ್ಪರ ಭಿನ್ನ ಮಾದರಿಯು ಈ ಎಲ್ಲ ವ್ಯಕ್ತಿತ್ವಗಳ... ಇಂದಿನ ನಾವು ಗೌರವಿಸುತ್ತಿದ್ದೇವೆ. 'ನಮ್ಮವರು' ಎಂ... ಭಾವಿಸಿದ್ದೇವೆ. ಈ ಪರಂಪರೆಯನ್ನು ಅರ್ಥಮಾಡಿಕೊಂ... ಅದಕ್ಕೆ ತಕ್ಕಂತೆ ನಡೆದುಕೊಳ್ಳದೆ ಇರುವವರಿಗೆ, ಧರ... ಸಂಸ್ಕೃತಿ, ಪರಂಪರೆ ಎಂಬ ಪದಗಳನ್ನು ಬಳಸುವ ನೈ... ಹಕ್ಕು ಇಲ್ಲ.

ಅನಂತಮೂರ್ತಿಯವರನ್ನು ನಾವು ಅರ್ಥಮಾಡಿಕೊ... ಬೇಕಾದ್ದು ಇದೇ ದೃಷ್ಟಿಕೋನದಲ್ಲಿ ಎಂದು ನಾ... ಭಾವಿಸುತ್ತೇನೆ. ಸಮಕಾಲೀನ ಲೇಖಕರಾದ ಅನಂತಮೂ... ಲಂಕೇಶ್, ತೇಜಸ್ವಿಯವರು ಒಂದೇ ಮಾದರಿಯ... ಪ್ರಗತಿಪರ ಚಿಂತನೆಯ ಮೂಲಧಾತುವಿನ ಮೂಲಕ ಬೆ... ಮೂರು ಮಾದರಿಗಳು. ಪರಸ್ಪರ ವೈಚಾರಿಕ ವಾಗ್ವಾದ... ನಡೆಸಿದ, ಭಿನ್ನಾಭಿಪ್ರಾಯಗಳನ್ನು ಸಾದರಪಡಿಸಿದ ಇವರ... ಸಮಾನ ಗೌರವದಿಂದ ಕಾಣುವುದು, ಗೌರವಪೂರ್ವಕವ... ಚರ್ಚಿಸುವುದು ನಮ್ಮ ಪರಂಪರೆ. ಭಿನ್ನಾಭಿಪ್ರಾಯಗಳ... ಬೀದಿ ಜಗಳ ಮಾಡುವುದು ಸಾಂಸ್ಕೃತಿಕ ಪರಂಪರೆಯಾ... ವುದಿಲ್ಲ.

ಅನಂತಮೂರ್ತಿಯವರು ಮೊದಲಿಂದಲೂ ಆಗ... ವಿವಾದಕ್ಕೆ ಒಳಗಾಗುತ್ತ ಬಂದರು. ವೈಚಾರಿ... ವಿರೋಧಗಳನ್ನು ಎದುರಿಸಿದರು. ಅವರದು ಸರಳ ರೇಖಾ... ವ್ಯಕ್ತಿತ್ವವಲ್ಲ; ಸರಳ ರೇಖಾತ್ಮಕ ವಿಚಾರವಂತಿಕೆಯೂ ಅ... ಅವರದು ಸಂಕೀರ್ಣ ವ್ಯಕ್ತಿತ್ವ ಮತ್ತು ವಿಚಾರವಂ... ಕೆಲವೊಮ್ಮೆ ಸರಳವಾದದ್ದನ್ನೂ ಸಂಕೀರ್ಣಗೊಳಿಸು... ಜಟಿಲತೆ. ಸದಾ ಪ್ರತಿಕ್ರಿಯಿಸುವ, ಪ್ರತಿಸ್ಪಂದಿಸುವ ಜೀವಂ... ಅನಂತಮೂರ್ತಿಯವರಲ್ಲಿ ನನಗೆ ಇಷ್ಟವಾದ ಗುಣವೆಂ... ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಯಾವತ್ತೂ ... ವಿರೋಧವಾಗಿ ಪರಿಗಣಿಸದ, ವೈಯಕ್ತಿಕ ದ್ವೇಷಕ್ಕೆ ತಿರುಗಿ... ಮನೋಮೌಲ್ಯ. ಇದೊಂದು ಅಪರೂಪದ ಅಂ... ಯಾಕೆಂದರೆ ಇದು ಭಿನ್ನಾಭಿಪ್ರಾಯಗಳನ್ನು ಬಹುಪಾ... ಬೀದಿಜಗಳವಾಗಿಸುತ್ತಿರುವ ಸಂದರ್ಭ. ಅನಂತಮೂ... ಯವರ ಅಭಿಪ್ರಾಯಗಳನ್ನು ಬೀದಿಗೆಳೆದು ತಂ... ಪ್ರಶ್ನಿಸುವವರ ನಡುವೆಯೂ ಅವರು ಬೀದಿ ಜಗ... ಬರಲಿಲ್ಲ. ತಮ್ಮ ಸಾಂಸ್ಕೃತಿಯ ಸಂಯಮವನ್ನು ಕಾಪ... ಕೊಂಡರು. ಆದರೆ ಪ್ರತಿಕ್ರಿಯೆ ಮಾಡುವುದನ್ನು ನಿಲ್ಲಿಸಲಿ... ತಮ್ಮ ಕೊನೆಯುಸಿರಿನವರೆಗೂ ಸಾಮಾಜಿಕ, ರಾಜಕೀ... ವಿಷಯಗಳಿಗೆ ಪ್ರತಿಸ್ಪಂದಿಸುತ್ತ ಪ್ರತಿಕ್ರಿಯೆಯನ್ನು ದಾಖಲಿ... ಬಂದರು.

ಹಾಗೆ ನೋಡಿದರೆ ನನ್ನ ಮತ್ತು ಅವರ ಪರಿಚ... ಪ್ರೀತಿಪೂರ್ವಕವಾಗಿ ಪ್ರಾರಂಭವಾಗಲಿಲ್ಲ. ಸುಮಾ... 1975ನೇ ಇಸವಿ. ಆಗಾಗಲೇ ನಾನು 'ಪ್ರಜಾವಾಣಿ'ಯ... ಪುಸ್ತಕ ವಿಮರ್ಶಕನಾಗಿದ್ದೆ. ಸುಮಾರು ಐದಾರು ವರ್ಷ... ಕಾಲ ಪುಸ್ತಕ ವಿಮರ್ಶೆ ಬರೆದ ನಾನು ಕೃತಿ ಪರಿಶೀಲ... ಸಾಮಾಜಿಕ ಸಂದರ್ಭವನ್ನು ಪ್ರಮುಖವಾಗಿ ಪರಿಗಣಿಸ... ವರ್ಣ, ವರ್ಗ ಮುಂತಾದ ಪರಿಭಾಷೆಯನ್ನು ಬಳಸು... ಈ ಕಾರಣದಿಂದ ಎಡಪಂಥೀಯರಿಗೆ ನಾನು ಇಷ್ಟವಾ... ಮೈಸೂರಿನಿಂದ ಪ್ರಕಟವಾಗುತ್ತಿದ್ದ ಎಡಪಂಥೀ... ವಿಚಾರಧಾರೆಯ ಪತ್ರಿಕೆ 'ಒಡನಾಡಿ'ಯು 'ಭಾರತೀ... ಸಾಹಿತ್ಯದ ವರ್ಗ ಸ್ವಭಾವ' ಎಂಬ ವಿಶೇಷ ಸಂಚಿಕೆಯ... ತಂದಾಗ ನನ್ನನ್ನು 'ಕನ್ನಡ ಸಾಹಿತ್ಯದ ವರ್ಗ ಸ್ವಭಾ... ಬಗ್ಗೆ ಲೇಖನ ಬರೆಯಲು ಕೇಳಿತು. ಅಚ್ಚಿನಲ್ಲಿ ... ಪುಟಗಳಷ್ಟು ಆಗುವ ಲೇಖನ ಬರೆದೆ. ಅನಂತಮೂ... ಯವರ ಬಗ್ಗೆ ಒಳ್ಳೆಯ ಮಾತುಗಳ ಜೊತೆಗೆ ಅ... ಕೃತಿಗಳ ವರ್ಗ ಸ್ವಭಾವ ಕುರಿತ ವಿಮರ್ಶಾತ್ಮಕ ಮಾತು... ಅದರಲ್ಲಿದ್ದವು. ಅವರಿಗೆ ಅಸಮಾಧಾನವಾಗಿದೆಯೆಂ... 'ಒಡನಾಡಿ'ಯ ಸಂಪಾದಕರು ನನಗೆ ತಿಳಿಸಿದರು. ಅ... ತಿಳಿಸಿದ ಒಂದೇ ವಾರದಲ್ಲಿ ಅನಂತಮೂರ್ತಿಯವರಿ... ಒಂದು ಪತ್ರ ಬಂತು. ಪತ್ರದ ಜೊತೆಗೆ ನನ್ನ ಲೇಖ...

...ತ್ತು, ಈ ಕೃತಿಯ ಪ್ರತಿ ಪುಟದಲ್ಲಿ ಕೆಲವು ...ಳ ಕೆಳಗೆ ಗೆರೆ ಎಳೆದು ಮಾರ್ಜಿನ್‌ನಲ್ಲಿ ಪ್ರಶ್ನೆಗಳನ್ನು ...ಇವರು ತಮ್ಮ ಪತ್ರದಲ್ಲಿ 'ಕನ್ನಡ ಅಧ್ಯಾಪಕರಾದ ... ವಾಕ್ಯ ರಚನೆಯೂ ಸರಿಯಾಗಿ ಗೊತ್ತಿಲ್ಲ ಎಂದು ...ಬು ವಿಷಾದವಾಗುತ್ತದೆ' ಎಂದು ಕಟುವಾಗಿ ...ದ್ದರು. ನಾನು ಅದಕ್ಕೆ ಪ್ರತಿಕ್ರಿಯೆಯಾಗಿ ಒಂದು ...ಬರೆದೆ. ಆ ಪತ್ರದಲ್ಲಿ ಅವರ ಪುಸ್ತಕಗಳಲ್ಲಿದ್ದ ವಾಕ್ಯ ...ಯ ತಪ್ಪುಗಳನ್ನು ಉದಾಹರಿಸಿ, ಈ ತಪ್ಪುಗಳು ...ಡು ತಮ್ಮಂಥ ಹಿರಿಯರನ್ನು ಪ್ರಶ್ನಿಸುವುದಿಲ್ಲ ಎಂದು ...ವಾದಿದ್ದೆ. ಜೊತೆಗೆ 'ನನ್ನಂತಹ ಯುವ ಲೇಖಕರ ...ನ್ನು ಪ್ರೀತಿಯಿಂದ ತಿದ್ದಿ ಸರಿದಾರಿ ತೋರಿಸುವ ...ರಾಗಿ. ನಾನಂತೂ ಎದೆಗುಂದುವುದಿಲ್ಲ, ನನ್ನ ...ಜಿಕ ಬದ್ಧತೆ ಬಿಡುವುದಿಲ್ಲ. ಆದರೆ ಎಲ್ಲ ಹೊಸ ...ಕರೂ ಹೀಗೆಯೇ ಇರುವುದಿಲ್ಲ. ಹೊಸ ಲೇಖಕರ ...ಂದಿಸಬೇಡಿ' ಎಂದು ಬರೆದಿದ್ದೆ ಆಗ ಅನಂತಮೂರ್ತಿ ...ನ್ನೊಂದು ಪತ್ರ ಬರೆದು 'ನಿಮ್ಮ ಲೇಖನವು ...ವಾದವನ್ನು ಸರಳೀಕರಿಸುತ್ತದೆ ಎಂದು ಹೇಳುವುದು ... ಉದ್ದೇಶವಾಗಿತ್ತು. ನನ್ನ ಪತ್ರದಿಂದ ನಿಮಗೆ ...ವಾಗಿದ್ದರೆ ಕ್ಷಮಿಸಿ' ಎಂದು ತಿಳಿಸಿದಾಗ ನನಗೆ ನಿಜಕ್ಕೂ ... ದೊಡ್ಡವರಾದರು. ಆದರೂ ನಾನು ನನ್ನ ಸಹಜ ...ಯಲ್ಲಿ 'ನಿಮ್ಮ ಈ ಎರಡನೇ ಪತ್ರ, ಮೊದಲನೇ ...ವಾಗಿದ್ದರೆ ನಿಮ್ಮ ಬಗೆಗಿನ ಗೌರವ ಮತ್ತಷ್ಟು ...ಗುತ್ತಿತ್ತು' ಎಂದು ಬರೆದುಬಿಟ್ಟಿದ್ದೆ. ನನ್ನ ಮತ್ತು ...ಮೂರ್ತಿಯವರ ಸ್ನೇಹ ಆರಂಭವಾದದ್ದು ಈ ವಾದ-...ವಾದದಿಂದ. ಮುಂದೆಯೂ ಇಂತಹ ಭಿನ್ನಾಭಿಪ್ರಾಯ ...ಬಂದರೂ ಅವು ವೈಯಕ್ತಿಕವೂ ಆಗಿರಲಿಲ್ಲ; ದೊಡ್ಡ ...ಣದಲ್ಲೂ ಇರಲಿಲ್ಲ. ಅವರು ನನ್ನ ಬಗ್ಗೆ ತೋರಿಸುತ್ತ ... ಪ್ರೀತಿ ಕಡಿಮೆಯಾಗಲೂ ಇಲ್ಲ, ಹೆಚ್ಚಾಗಲೂ ... ಅನಂತಮೂರ್ತಿಯವರು ವ್ಯಕ್ತಿ ಪ್ರೀತಿ ಮತ್ತು ...ಪ್ರಭುತ್ವ ಪ್ರೀತಿ ಎರಡನ್ನೂ ಬಿಟ್ಟು ಕೊಡಲಿಲ್ಲ.

...ವು ಬಂಡಾಯ ಸಾಹಿತ್ಯ ಚಳವಳಿಯನ್ನು ಕಟ್ಟಿದಾಗ, ...ವಾಗಿಯೇ ನವ್ಯ ಸಾಹಿತಿಗಳಿಗೆ ಆತಂಕವುಂಟಾಗಿತ್ತು. ... ಫಲವಾಗಿ ಅಲ್ಪ ಪ್ರಮಾಣದ ಅಸಹನೆಯೂ ಇತ್ತು. ...ಶ್ ಅವರು ಬಹಿರಂಗವಾಗಿಯೇ ಮೊದಲನೇ ...ಯ ಸಾಹಿತ್ಯ ಸಮ್ಮೇಳನವನ್ನು ಬೆಂಬಲಿಸಿ ಹೇಳಿಕೆ ...ರು. ಆ ನಂತರದ ದಿನಗಳಲ್ಲಿ 'ಡಂಬಾಯ' ಎಂದು ...ಯುತ್ತಲೇ ನಮ್ಮ ಚಳವಳಿಯನ್ನು ಪ್ರೀತಿಸುತ್ತಲೇ ...ಹೋಡ್ಡಿದರು. ಅನಂತಮೂರ್ತಿಯವರು ಬಹಿರಂಗವಾಗಿ ...ಲಿಸಲಿಲ್ಲ, ಹಾಗೆಂದು ವಿರೋಧಿಸಲೂ ಇಲ್ಲ. ...ದಲ್ಲೂ ಏನಾದರೂ ಅರ್ಥವಂತಿಕೆಯನ್ನು ಗುರುತಿಸುವ ... ಹೊಂದಿದ್ದ ಅವರು ಸ್ವಲ್ಪಕಾಲಾನಂತರ 'ಕನ್ನಡ ...ಳಿಯನ್ನು ಕಟ್ಟುವಲ್ಲಿ ನಿಮ್ಮ ಪಾತ್ರವೂ ಮುಖ್ಯ' ...ು ನನಗೆ ಹೇಳಿದರು.

...ಂಗೆ ಮೆಚ್ಚುವ ಗುಣ ಅವರಲ್ಲಿ ಹಾಸುಹೊಕ್ಕಾಗಿತ್ತು. ...ಯ ಬಳಗದವರನ್ನು ಹೆಚ್ಚು ಮೆಚ್ಚುವುದು ಅವರ ... ಗುಣವಾಗಿತ್ತು. ತಾಂತ್ರಿಕವಾಗಿ ನಾನು ಅವರ ...ಯ ಬಳಗ'ದವನಲ್ಲ. ನಿರಂತರ ಸಂಪರ್ಕದಲ್ಲಿದ್ದವನಲ್ಲ. ...ದು ಅವರು ಅನಾದರ ತೋರಲಿಲ್ಲ. ನನ್ನ ಪುಸ್ತಕ ...ಗಡೆ ಸಮಾರಂಭದಲ್ಲಿ ಅವರು ಒಂದು ಮಾತು ...ದರು: 'ಬರಗೂರ್‌ಗೆ ನಾವು ಅನ್ಯಾಯ ಮಾಡಿದೆವು. ...ಂದ್ರೆ ಇವರು ಬಂಡಾಯ ಸಾಹಿತ್ಯ ಚಳವಳಿ ಕಟ್ಟಿದಾಗ-...ನು ಕಡಿಮೆ, ನಾವೂ ಬಂಡಾಯಗಾರರೇ- ಎಂದು ...ಿ ಈತನ ಕೊಡುಗೇನ ಸರಿಯಾಗಿ ಗುರುತಿಸಲಿಲ್ಲ' ...ರು. ಹೀಗೆ ಆತ್ಮಾವಲೋಕನ ಮಾಡಿಕೊಳ್ಳುವ ಗುಣ ...ಲ್ಲೂ ಇರುವುದಿಲ್ಲ. ಇನ್ನೊಂದು ಅಂಶವನ್ನೂ ಇಲ್ಲಿ ...ಬೇಕು. ನನ್ನ ಪುಸ್ತಕ ಬಿಡುಗಡೆ ಮಾಡಿದ ದಿನ-...ನನಗೆ ದೂರವಾಣಿ ಕರೆ ಮಾಡಿದ ಅನಂತಮೂರ್ತಿ ...ರು 'ನಿನ್ನ ಗದ್ಯ ತುಂಬಾ ಚೆನ್ನಾಗಿದೆ ಕಣಯ್ಯ' ಎಂದು ...ಳಿದರು. ನಾನು ತಕ್ಷಣ 'ಮೋದಿ ಕಡೆ ತಿರುಗೋ ... ಇದನ್ನ ವೇದಿಕೆ ಮೇಲೆ ಹೇಳ್‌ಬಾರದಿತ್ತ ಸಾರ್' ... ಅವರು 'ನೀನು ನನ್ ಮನಸ್ನಲ್ಲಿ ಇದ್ದೀಯ ಕಣಯ್ಯ. ...ಗದ್ದಾನೂ ಅಷ್ಟೆ' ಎಂದರು. ನಾನು ಮೆಲ್ಲಗೆ 'ಅಲ್ಲ ... ಬರಗೂರ್‌ಗೆ ಅನ್ಯಾಯ ಮಾಡಿದ್ವಿ ಅಂತ ಹೇಳೋಕೆ ...ಗೆ ಎಂಬತ್ತು ವರ್ಷ ದಾಟಬೇಕಾಯ್ತು; ನನಗೆ ಅರವತ್ತು ...ಬೇಕಾಯ್ತು' ಎಂದೆ. ಅವರು ನಗುವಿನಲ್ಲೇ ಮೃದುವಾಗಿ ...ಮುಷಂತೆ 'ಇದೇ ನೋಡು ನಿನ್ ಸ್ವಭಾವ' ಎಂದರು. ...ನಂತರ ರಾಷ್ಟ್ರ ರಾಜಕಾರಣ ಕುರಿತಂತೆ ಸಾಕಷ್ಟು ...ಮಾಡಿದರು- ಪ್ರೀತಿಯಿಂದ.

...ಪ್ರೀತಿ ಮತ್ತು ಪ್ರಜಾಪ್ರಭುತ್ವದ ಪ್ರೀತಿ- ಎರಡನ್ನೂ ...ಕಿದವರು ಅನಂತಮೂರ್ತಿ. ಈ ವಿಷಯದಲ್ಲಿ ಯಾವ ...ಷ್ಟವೂ ಇಲ್ಲ, ಗೊಂದಲವೂ ಇಲ್ಲ. ಅಂತೆಯೇ ಅವರು ...ತ ಸ್ಪಷ್ಟ ನಿಲುವು ತಾಳಿದ ಎರಡು ವಿಷಯಗಳೆಂದರೆ- ...ವಾದ ನಿಲುವು ಮತ್ತು ಕೋಮುವಾದ ವಿರೋಧ. ...ವನ್ನು ಪ್ರೀತಿಯ ಸಂವೇದನೆಯಾಗಿ ...ರಿಸಿದ ಅವರು ನಿಚ್ಚಳ ನಿಲುವನ್ನು ...ಪಾದಿಸುತ್ತ ಬಂದರು. ಕೋಮುವಾದವನ್ನು ...ವಾಗಿ ವಿರೋಧಿಸುತ್ತ ಬಂದರು. ಮೋದಿ ...ನ್ನಿ ಒಬ್ಬ ವ್ಯಕ್ತಿಯಾಗಿ ವಿರೋಧಿಸಲಿಲ್ಲ, ...ಕೋಮುವಾದದ ಕರಾಳ ರೂಪಕವಾಗಿ ಕಂಡು ...ರೋಧಿಸಿದರು.



ನಿಜ; ಅನಂತಮೂರ್ತಿಯವರ ಎಲ್ಲ ಅಭಿಪ್ರಾಯಗಳೂ ನಮಗೆ ಸಮ್ಮತವೆಂದೇನೂ ಅಲ್ಲ. ಆದರೆ ಅವರು ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ಅಪ್ರಾಮಾಣಿಕರಾಗಿರಲಿಲ್ಲ, ಅಪ್ರಿಯವಾಗುತ್ತೇನೆಂದು ಅಳುಕಲಿಲ್ಲ. ಅಪ್ರಿಯವಾಗುವುದನ್ನೂ ಆನಂದಿಸುವ ಅಂತಃಶಕ್ತಿ ಅವರಲ್ಲಿತ್ತು. ವಿವಾದಗಳನ್ನು ಆಹ್ವಾನಿಸುವ ಸಂಭ್ರಮವೂ ಇತ್ತು. ಹೀಗಾಗಿ ಅವರಲ್ಲಿ 'ಸಾಂಸ್ಕೃತಿಕ ಹೀರೋತನ'ವಿತ್ತು. ಹೀರೋತನ ಮತ್ತು ನಾಯಕತ್ವ ಎರಡೂ ಬೇರೆ ಎಂದು ನನ್ನ ಅಭಿಪ್ರಾಯ. ಹೀರೋತನಕ್ಕೆ ಸಂಘಟನಾತ್ಮಕ ನೆಲೆ ಮತ್ತು ಸಂಯೋಜಿತ ಶಕ್ತಿ ಬೇಕಾಗುವುದಿಲ್ಲ. ಸ್ವಕೇಂದ್ರಿತ ವ್ಯಕ್ತಿತ್ವ ಬದ್ಧತೆ ಮತ್ತು ವಿಚಾರವಂತಿಕೆಯಿಂದ ಹೀರೋತನವನ್ನು ಸಾದರಪಡಿಸಬಹುದು. ಪ್ರಜ್ಞಾಪೂರ್ವಕವಾಗಿ ಸಾದರಪಡಿಸದಿದ್ದಾಗಲೂ ಹೀರೋತನದಿಂದ ಬೆಳಗಬಹುದು. ಆದರೆ ನಾಯಕತ್ವವೇ ಬೇರೆ. ನಿರ್ದಿಷ್ಟ ಸೈದ್ಧಾಂತಿಕ ತಿಳಿವಳಿಕೆಯಿಂದ ಸಂಘಟಿಸುವ, ಸ್ನೇಹವಲಯವನ್ನು ಒಟ್ಟಿಗೇ ಕೊಂಡೊಯ್ಯುವ, ಸಾಮೂಹಿಕ ಶಕ್ತಿಯನ್ನು ಕ್ರೋಢೀಕರಿಸುವ, ಈ ಮೂಲಕ ಮನ್ನಣೆಗಳಿಸುವ ಪ್ರಕ್ರಿಯೆಯ ಫಲವಾಗಿ ಮೂಡುವ ಪ್ರತೀಕವು ನಾಯಕತ್ವವಾಗುತ್ತದೆ. ಆದ್ದರಿಂದ ನನ್ನ ಮಟ್ಟಿಗೆ ಅನಂತಮೂರ್ತಿಯವರಲ್ಲಿ ಕಂಡದ್ದು ಸಾಂಸ್ಕೃತಿಕ ಹೀರೋತನ. ಅನ್ಯರಿಗೆ ಕೇಡು ಬಯಸದ, ಕಾಲು ಕೆರೆದು ಕಾಳಗಕ್ಕೆ ನಿಲ್ಲದ ಹೀರೋತನ. ಕೆಲವೊಮ್ಮೆ ಹೀರೋತನ 'ಒಂಟಿತನ'ವೂ ಆಗುತ್ತದೆ. ವಿವಾದಗಳಲ್ಲಿ ವ್ಯಕ್ತಿಯೇ ಮುಂದೆ ಕಾಣಿಸಿದ್ದಾಗ ಸಾಮುದಾಯಿಕ ಸ್ಪಂದನೆ ನಿರೀಕ್ಷಿತವಾಗಿ ಸಿಗದೆಯೂ ಇರಬಹುದು. ಆಗ ಹೀರೋತನದಿಂದಲೇ ಉಂಟಾಗುವ ಒಂಟಿತನವು ಸಂಕಟವನ್ನು ತರುತ್ತದೆ. ಅನಂತಮೂರ್ತಿಯವರೂ ಇಂತಹ ಒಂಟಿತನದ ಸಂಕಟವನ್ನು ಅನುಭವಿಸಿದ್ದರೆಂದು ನನ್ನ ತಿಳಿವಳಿಕೆ. ಒಂಟಿತನವೆನ್ನುವುದು ವ್ಯಕ್ತಿತ್ವದ ಒಂದು ಅನಿವಾರ್ಯ ಅಂಗವೂ ಹೌದು!

ಸಾರ್ವಜನಿಕ ಬದುಕಿನಲ್ಲಿ ಕಂಡುಬಂದ ಅನಂತಮೂರ್ತಿಯೆಂಬ ರೂಪಕವು ಸಾಹಿತ್ಯದಲ್ಲಿ ಹೇಗಿತ್ತು ಎಂಬ ಅಂಶವನ್ನು ಹೇಳದಿದ್ದರೆ ತಪ್ಪಾಗುತ್ತದೆ. ಅನಂತಮೂರ್ತಿಯವರು 'ಸಂಸ್ಕಾರ' ಕಾದಂಬರಿಯಿಂದ ಹಿಡಿದು ಬರೆದ ಕಾದಂಬರಿಗಳೂ ಕತೆಗಳೂ ಕವಿತೆಗಳೂ ಚಿಂತನಾತ್ಮಕ ಕೃತಿಗಳೂ ಕನ್ನಡ ಸಾಹಿತ್ಯ ಲೋಕವನ್ನು ಸೃಜನಶೀಲವಾಗಿಸಿವೆ. ಸಮಾಜವನ್ನು ಚಲನಶೀಲವಾಗಿಸಿವೆ. ಅವರ ಎಲ್ಲ ಕೃತಿಗಳೂ ಸಮಾನ ಉತ್ತಮಿಕೆಯನ್ನು ಪಡೆದಿಲ್ಲ. ಇದು ಎಲ್ಲ ಲೇಖಕರ ಬಗ್ಗೆಯೂ ಹೇಳಬಹುದಾದ ಮಾತು. ನನ್ನನ್ನು ಇವತ್ತೂ ಕಾಡಿಸುವ ಒಂದು ಅತ್ಯುತ್ತಮ ಕೃತಿಯೆಂದರೆ 'ಸಂಸ್ಕಾರ'. ಎಸ್.ಎಲ್.ಭೈರಪ್ಪನವರ 'ವಂಶವೃಕ್ಷ'ದ ಶ್ರೀನಿವಾಸ ಶ್ರೋತ್ರಿ, ರಾವ್ ಬಹದ್ದೂರರ 'ಗ್ರಾಮಾಯಣ'ದ ಬಾಳಾಚಾರ್ಯ ಮತ್ತು ಅನಂತಮೂರ್ತಿಯವರ 'ಸಂಸ್ಕಾರ'ದ ಪ್ರಾಣೇಶಾಚಾರ್ಯ- ಈ ಮೂರು ಬ್ರಾಹ್ಮಣ ಪಾತ್ರಗಳು ನಮ್ಮ ಸಾಮಾಜಿಕ ಸಂದರ್ಭದ ಮೂರು ಮಾದರಿಗಳನ್ನು ಪ್ರತಿನಿಧಿಸುತ್ತವೆ. ಭೈರಪ್ಪನವರ 'ಶ್ರೀನಿವಾಸ ಶ್ರೋತ್ರಿ' ಬದಲಾವಣೆಗೆ ಒಗ್ಗದ, ಬಗ್ಗದ ಬದ್ಧ ಸಂಪ್ರದಾಯಸ್ಥ ಪಾತ್ರ. ಕಾದಂಬರಿಯಲ್ಲಿ ಬಹು ಪ್ರಭಾವಶಾಲಿ ಪಾತ್ರ. ರಾವ್‌ಬಹದ್ದೂರರ 'ಬಾಳಾಚಾರ್ಯ'ರು ಸಂಪ್ರದಾಯಸ್ಥರಾದರೂ ಹಳ್ಳಿಯ ಒಳಿತಿಗಾಗಿ ತಳಮಳಿಸುವ, ಅದಕ್ಕಾಗಿ ಹಾರೈಸುವ, ಶೂದ್ರ ಯುವಕ ದಾದಾನನ್ನು ಕಾಪಾಡಲು ದೇವರ ಕೋಣೆಯಲ್ಲಿ ಕೂಡಿಸಲು ಹಿಂಜರಿಯದ ನಡವಳಿಕೆಯ ಚಲನಶೀಲ ಪಾತ್ರ. ಅನಂತಮೂರ್ತಿಯವರ 'ಪ್ರಾಣೇಶಾಚಾರ್ಯ' ವೈದಿಕ ಸಂಸ್ಕೃತಿಯ ಜಡತೆಯ ನಡುವೆ ಒದ್ದಾಡುವ, ಅದರಿಂದ ಬಿಡುಗಡೆಗೊಳ್ಳಲು ಹವಣಿಸುವ, ಅಸ್ತಿತ್ವಕ್ಕಾಗಿ ಹೊಸದಾರಿ ಹುಡುಕಲು ತವಕಿಸುವ ತೀವ್ರ ಸಾಮಾಜಿಕ ಚಲನೆಯ ರೂಪಕ. ಪ್ರಾಣೇಶಾಚಾರ್ಯರಲ್ಲಿ ಹೊಸದಾರಿಯ ಹುಡುಕಾಟದ ತೀವ್ರತೆ, ತಲ್ಲಣ, ತಳಮಳ- ಮುಂತಾದ ಅನುಭವ ಪ್ರಾಮಾಣ್ಯದ ಪ್ರಾಮಾಣಿಕ ಪ್ರಶ್ನೆಗಳು ಕಾಡುತ್ತವೆ. ವೈದಿಕತೆಯನ್ನು ಬಿಟ್ಟ ನಾರಾಣಪ್ಪ ಎದುರಾಳಿಯಾಗಿಯೂ ಕಾಡುತ್ತಾನೆ. ಶ್ರೀನಿವಾಸ ಶ್ರೋತ್ರಿಯಿಂದ ಬಾಳಾಚಾರ್ಯರತ್ತ, ಬಾಳಾಚಾರ್ಯರಿಂದ ಪ್ರಾಣೇಶಾಚಾರ್ಯರತ್ತ ಸಾಗಿದ ಸಾಮಾಜಿಕ ಚಲನೆಯು ವಿಕಾಸದ ಹಂತಗಳನ್ನು ಸಂಕೇತಿಸುತ್ತದೆ. ಕಾದಂಬರಿಗಳು ತಳೆದ ತಾಂತ್ರಿಕತೆಯನ್ನೂ ಪ್ರತಿನಿಧಿಸುತ್ತದೆ. 'ಸಂಸ್ಕಾರ'ದಲ್ಲಿ ಅನಂತಮೂರ್ತಿಯವರ ತಾತ್ವಿಕತೆ ಸಮರ್ಥವಾಗಿ ನೆಲೆಗೊಂಡಿದೆ. ಸ್ವತಃ ಲೇಖಕರ ತಲ್ಲಣಗಳು ಪ್ರಾಣೇಶಾಚಾರ್ಯರ ಪ್ರತೀಕದಲ್ಲಿರುವಂತೆ ಭಾಸವಾಗುತ್ತದೆ.

ಅನಂತಮೂರ್ತಿಯವರದು ರೂಪಕಾತ್ಮಕ ಭಾಷೆ. ಅದು ಬ್ರಾಹ್ಮಣ-ಶೂದ್ರ ಕಲ್ಪನೆಯಿರಬಹುದು; ಮೋದಿ-ಅರಸು ವಿಶ್ಲೇಷಣೆಯಿರಬಹುದು; ಲೋಹಿಯಾ-ಮಾರ್ಕ್ಸ್ ಇರಬಹುದು; 'ಸಂಸ್ಕಾರ'ದ ನಾರಾಣಪ್ಪ-ಪ್ರಾಣೇಶಾಚಾರ್ಯ ಇರಬಹುದು. ರೂಪಕಗಳನ್ನು ಕಟ್ಟುವುದರಲ್ಲಿ ರೂಪಕಾತ್ಮಕ ಭಾಷೆಯನ್ನು ಬಳಸುವುದರಲ್ಲಿ ಅನಂತಮೂರ್ತಿ ಸದಾ ಆಸಕ್ತರು. ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ರೂಪಕಗಳನ್ನು ಬಿಡಿಸುತ್ತ ಹೋಗಬೇಕು. ಒಳಗನ್ನು ಅರಿಯಬೇಕು.

ತಮ್ಮ ತೀವ್ರ ಅನಾರೋಗ್ಯದ ನಡುವೆಯೂ ಅತ್ಯಂತ ಜೀವನೋತ್ಸಾಹವನ್ನು ತೋರಿದ ಅನಂತಮೂರ್ತಿಯವರ ನೆನಪೂ ಒಂದು ರೂಪಕವಾಗಿ ನಮ್ಮನ್ನು ಕಾಡುತ್ತಿರಲಿ; ಚಲನಶೀಲವಾಗಿಸಲಿ.

● ಬರಗೂರು ರಾಮಚಂದ್ರಪ್ಪ

ಒಂದು ಡಿಪ್ರಮೋಷನ್ ಘಟನೆ



ಕ್ರಿಯಾಶೀಲ ಚಲನವಲನ
ಆದರೆ ಇತ್ತೀಚೆಗೆ
ಕಲಾಗ್ರಾಮದಲ್ಲಿ ನಡೆದ ಅಂತ್ಯಸಂಸ್ಕಾರ
ಕಲೆಯ ಯಾವ ಗುಂಪಿಗೂ ಸೇರದೆ
ಗ್ರಾಮದ ಶೋಕ ಮಡುಗಟ್ಟಿತು.

ಮಡಿವಂತಿಕೆಯ ಮಡಕೆ ಒಡೆದು
ನೀರು ಚಿಮ್ಮಿದ ರಂಧ್ರದಲ್ಲಿ
ಜಡಗೊಂಡ ಹೃದಯವಂತಿಕೆಯ
ಜಾತಕಫಲ ಕಾಣುತ್ತಿತ್ತು
ಅಲ್ಲಾಹು, ಕ್ರಿಸ್ತ ಕೃಷ್ಣ ಯಾರಿಗಾಗಿ
ಪ್ರಾರ್ಥಿಸಿದರೂ ಪ್ರಾರ್ಥನೆಯ ಶುದ್ಧಿ
ಮಾತ್ರ ಕಲೆಯ ಸೌರಭ
ಅದು ಭಾವ ಭಾಷಾತೀತ ಜಾತ್ಯತೀತ


ಒಂದು ಜಾತಿಯ ಗುರುತಿನಿಂದ
ಒಂದು ಕೋಮಿನ ಮುದ್ರೆಯಿಂದ
ಜ್ಞಾನಪೀಠ ಅಲಂಕರಿಸಿದ ಚೇತನವೊಂದರ
ಶವಸಂಸ್ಕಾರ ಕಲಾಗ್ರಾಮದಲ್ಲಿ ನಡೆದರೆ
ಅಲ್ಲಿ ಜಾತಿಯೊಂದರ ಬೂದಿಯ ಕಾವು
ಗಂಧದ ಕೊರಡುಗಳಿಂದ ಹೊಮ್ಮುತ್ತದೆ


ಇತ್ತೀಚೆಗೆ
ಕಲಾಗ್ರಾಮದಲ್ಲೊಂದು
ಡಿಪ್ರಮೋಷನ್ ಘಟನೆ ನಡೆದಿದೆ
ಕಲಾಗ್ರಾಮ ಕಂಪಿಸಿದೆ

ನಾಟಕವೋ, ಚಿತ್ರಕಲೆಯೋ, ನೃತ್ಯವೋ,
ಸಾಹಿತ್ಯವೋ, ಸಂಗೀತವೋ
ಕರಕುಶಲ ಕಲೆಯೋ ತನ್ನ ಅಭಿವ್ಯಕ್ತಿಯ
ಆಗರವನ್ನು ಕಲಾಗ್ರಾಮದಲ್ಲಿ ಉಸಿರಾಡುವುದು
ಗ್ರಾಮಕ್ಕೆ ಶೋಭೆ; ಜೀವಕ್ಕೆ ತಂಪು

ಸೃಜನಶೀಲ ಚೇತನವೊಂದು
ಅರಳುವ ತಾಣದಲ್ಲಿ
ಮಸಣದ ಪರಿಮಳ ತುಂಬಿ
ಕಲೆಯ ಡಿಪ್ರಮೋಷನ್ ಆಗುವ ಘಟನೆಯನ್ನು
ಇನ್ನು ಸಹಿಸಲಾರೆನೆಂದು
ಕಲಾಗ್ರಾಮ ಕಂಪಿಸಿದೆ....

● ಜ್ಯೋತಿ ಗುರುಪ್ರಸಾದ್


ಡಾಟಿ-ಸದಾನಂದಗೌಡ ಜೊತೆ ಕಾರ್ತಿಕ್


ಮೈತ್ರೇಯಿ ಜೊತೆ ಕಾರ್ತಿಕ್ ಚಕ್ಕಂದ


ಪಾರ್ಟಿಯಲ್ಲಿ ಕಾರ್ತಿಕ್

ಅಪ್ಪ ಗೋಮುಖ: ಮಗ ಕಾಮುಕ

ಅವಳು ರಾತ್ರಿರಾಣಿ! ನಡತೆ ಸರಿಯಿಲ್ಲದವಳು. ಮಾಜಿ ಮುಖ್ಯಮಂತ್ರಿ ಮತ್ತು ಹಾಲಿ ಕೇಂದ್ರ ಮಂತ್ರಿ ಸದಾನಂದಗೌಡರ ಸ್ಥಾನಮಾನ, ಸಂಪತ್ತಿನ ಮೇಲೆ ಕಣ್ಣಿಟ್ಟೇ ಅವರ ಮಗನಿಗೆ ಗಾಳ ಹಾಕಿದ್ದಾಳೆ. ಸದಾನಂದ ಗೌಡರ ಮಗ ಕಾರ್ತಿಕ್ ಗೌಡ ಏನೂ ಗೊತ್ತಿಲ್ಲದ ಹುಳು. ಈಕೆಯ ಕ್ಯಾರೆಕ್ಟರೇ ಸರಿ ಇಲ್ಲ, ಯಾರೋ ಅಬ್ಬೇಪಾರಿಯೊಬ್ಬನಿಗೆ ಈಕೆ ಮೋಸ ಮಾಡಿದ್ದಾಳಂತೆ. ಇನ್ನಾರೋ ಹರಾಮಿ ಈಕೆಯನ್ನು ಮದುವೆಯಾಗಿದ್ದಾನಂತೆ. ಮಗದೊಬ್ಬ ಹಲಾಲು ಟೋಪಿಯ ಜೊತೆ ಈಕೆ ಪುಣೆಗೆ ಹೋಗಿ ಬಂದಳಂತೆ. ಈಕೆಯ ಕುಟುಂಬವೇ ಸರಿಯಿಲ್ಲವಂತೆ. ಯಕಶ್ಚಿತ್ ಹಳ್ಳಿಯಿಂದ ಬಂದ ಹುಡುಗಿಯೊಬ್ಬಳು ಕೇಂದ್ರ ರೈಲ್ವೇ ಮಂತ್ರಿ ಸದಾನಂದ ಗೌಡರ ಮಗನನ್ನು ಮದುವೆ ಯಾಗಲು ಬಯಸುವುದು ಎಂಥಾ ಅನ್ಯಾಯ? ಎಲ್ಲಾದರೂ ಉಂಟಾ...?

ಕಳೆದೊಂದು ವಾರದಲ್ಲಿ ಕನ್ನಡದ ಯಾವುದೇ ನ್ಯೂಸ್ ಚಾನಲ್ಲುಗಳನ್ನು ನೋಡಿ, ಇದರ ಹೊರತಾದ ಬೇರೇನಾದರೂ ಸುದ್ದಿಯುಂಟಾ?

ಆದ್ಯಾರೋ ಲಡ್ಡು ನಾಗ ಎಂಬ ಹರಾಮಿ ರುಪಿ ಎಂಬ ಕಳ್ಳ ಹೆಸರಿಟ್ಟುಕೊಂಡು ತಾನು ನಟಿ ಮೈತ್ರೇಯಿಳನ್ನು ಮದುವೆಯಾಗಿದ್ದೇನೆ ಎಂದು ಕತೆ ಹೊಡೆದರೆ ನಮ್ಮ ನ್ಯೂಸ್ ಚಾನಲ್ಲುಗಳು ದಿನಗಟ್ಟಲೆ ಈ ಬಗ್ಗೆ ಚರ್ಚೆ ನಡೆಸುತ್ತವೆ. ಇನ್ನಾರೋ ಲಫಂಗನೊಬ್ಬ ನಟಿ ಮೈತ್ರೇಯಿ ನನಗೆ ಮಾಜಿ ಪ್ರೇಯಸಿಯಾಗಿದ್ದಳು ಎಂದರೆ ಈ ಟೀವಿಗಳು 'ಹೌದಾ, ಹೇಗೆಲ್ಲಾ ಡ್ಯುಯೆಟ್ ಕುಣಿದಿರಾ...' ಎಂದು ಬಾಯಿ ಚಪ್ಪರಿಸುತ್ತವೆ. ಅವಳು ಬಾಂಬೆಗೆ ಹೋಗಿದ್ದಳು ಎಂದು ಮತ್ತಾರೋ ಖದೀಮ ಹೇಳಿಕೆ ಕೊಟ್ಟನೆಂದರೆ ಕನ್ನಡದಟೀವಿಗಳಿಗೆ ಅದೇ ಪ್ರಸಾದ ಅದೇ ಪರಮ ಸತ್ಯ!

ಕಾರ್ತಿಕ್ ಗೌಡ ತನ್ನ ಮೇಲೆ ಅತ್ಯಾಚಾರವೆಸಗಿದ್ದಾನೆಂದು ಯಾವ ಹೆಣ್ಣು ಮಗಳು ದೂರು ಕೊಟ್ಟಿದ್ದಾಳೋ ಆಕೆಯ ಮೇಲೇಯೇ ನ್ಯೂಸ್ ಚಾನಲ್ಲುಗಳ ಸರಣಿ ಅತ್ಯಾಚಾರ ಶುರುವಾಗಿರುವಂತಿಲ್ಲವೆ?

ನ್ಯೂಸ್ ಚಾನಲ್ಸ್ ರೇಪ್!

ನಟಿ ಮೈತ್ರೇಯಿಳ ಹಿನ್ನೆಲೆ, ಕ್ಯಾರೆಕ್ಟರ್, ಇತಿಹಾಸ-ಭೂಗೋಳಕ್ಕೆ ಕೈಯಿಟ್ಟ ಟೀವಿಗಳಿಗೆ ಕೇಂದ್ರ ಮಂತ್ರಿ ಸದಾನಂದ ಗೌಡರ ಮಗನ ಐಷಾರಾಮಿತನವಾಗಲಿ, ಶೋಕಿಗಳಾಗಲಿ, ಆತನ ರಾತ್ರಿ ಬದುಕಾಗಲಿ, ಹೆಣ್ಣುಬಾಕತನ ವಾಗಲಿ ಏಕೆ ಕಾಣಿಸುತ್ತಿಲ್ಲ? ಹೋಗಲಿ ಯಾರೋ ಲಫಂಗನೊಬ್ಬ ತಾನು ಮೈತ್ರೇಯಿ ಜೊತೆ ಲಾಡ್ಜಿನಲ್ಲಿ ನಾಲ್ಕು ತಿಂಗಳು ಸಂಸಾರ ನಡೆಸಿದ್ದೇನೆ ಎನ್ನುತ್ತಾನಲ್ಲ; ಈಕೆಯ ಹಿಸ್ಟರಿ ಕೆದಕ ಹೊರಟ ಟೀವಿಗಳಿಗೆ ಈ ಲಫಂಗನ ಹಿನ್ನೆಲೆಯೇನು, ಆತ ಎಷ್ಟು ಜನರನ್ನು ವಂಚಿಸಿದ್ದಾನೆ, ಆತನಿಗೆ ಬಲಿಯಾದ ಹುಡುಗಿಯರೆಷ್ಟು, ಆತನ ವಿಕೃತಿ ಯೇನು, ಸದಾನಂದಗೌಡರ ಏಜೆಂಟರಿಂದ ಆತ ಪಡೆದ ಹಣವೆಷ್ಟು, ಆತನ ಹಿಂದಿರುವ 'ಡಾನ್' ಯಾರು? ಇತ್ಯಾದಿ ಏನೊಂದೂ ಏಕೆ ಮುಖ್ಯವಾಗುವುದಿಲ್ಲ?

ಕನ್ನಡ ಜನತೆ ಕಳೆದೊಂದು ವಾರದಿಂದ ನಟಿ ಮೈತ್ರೇಯಿಳ ಮೇಲೆ ನಡೆಯುತ್ತಿರುವ ವ್ಯವಸ್ಥಿತ ಅಪಪ್ರಚಾರ,




ಷಡ್ಯಂತ್ರ, ಕಿರುಕುಳಗಳನ್ನು ಮೂಕಪ್ರೇಕ್ಷಕರಾಗಿ ಗಮನಿಸುತ್ತಿದ್ದಾರೆ. ಆಗಸ್ಟ್ 27ರಂದು ಸದಾನಂದ ಗೌಡರ ಮಗ ಕಾರ್ತಿಕ್ ಗೌಡನ ಬರ್ತ್‌ಡೆ ಮತ್ತು ನಿಶ್ಚಿತಾರ್ಥದ ಮೂಲಕ ಸ್ಫೋಟಗೊಂಡಿದ್ದು ನಟಿ ಮೈತ್ರೇಯಿಳ ಪ್ರೇಮ ಪ್ರಸಂಗ. "ಕಾರ್ತಿಕ್ ನನ್ನನ್ನು ಮದುವೆಯಾಗಿದ್ದಾನೆ. ಮಂಗಳೂರಿನಲ್ಲಿ ನನ್ನ ಮೇಲೆ ಅತ್ಯಾಚಾರವೆಸಗಿದ್ದಾನೆ. ನ್ಯಾಯಕೋರಿ ನಾನು ಡಾಟಿ ಸದಾನಂದ ಗೌಡರನ್ನು ಭೇಟಿಯಾಗಿದ್ದೆ ಅವರು ನನ್ನ ಬಾಯಿಯನ್ನೇ ಮುಚ್ಚಿಸಿದರು. ಈಗ ಸ್ವಾತಿ ಅನ್ನೋ ಹುಡುಗಿ ಜೊತೆ ಕಾರ್ತಿಕ್ ನಿಶ್ಚಿತಾರ್ಥ ಮಾಡಿಕೊಂಡು ನನಗೆ ಅನ್ಯಾಯ ಮಾಡಿದ್ದಾನೆ...!"

ಇದು ನಟಿ ಮೈತ್ರೇಯಿ ಟೀವಿಗಳ ಮುಂದೆ ತನ್ನ ಗೋಳು ಹೇಳಿಕೊಂಡ ರೀತಿ. ನಿಜಕ್ಕೂ ಅತ್ಯಾ... ನಡೆದಿದೆಯೋ ಇಲ್ಲವೋ ಬಲ್ಲವರಿಲ್ಲ, ಮದುವೆಯ ... ಮಾಡಿ ಅನುಭವಿಸಿದ್ದು ಸಹಜವಾಗೇ ಅತ್ಯಾ... ಎನಿಸಿಕೊಳ್ಳುತ್ತದೆ ಎಂಬ ಆಕೆಯ ವಾದದಲ್ಲಿ ಹುರುಳಿಲ್ಲ... ಕಾರ್ತಿಕ್ ಮತ್ತು ತನ್ನ ಸಂಬಂಧದ ಬಗ್ಗೆ ಆಕೆ... ಹೇಳಿಕೊಳ್ಳುವಂಥ ಸಾಕ್ಷ್ಯಾಧಾರಗಳೂ ಇರಲಿಲ್ಲ, ಆ... ಇದ್ದ ಫೋಟೋಗಳಂತೂ ಸತ್ಯ ಹೇಳುತ್ತಿದ್ದವು. ಕಾರ್ತಿ... ಗೌಡ ಮೈತ್ರಿಯಾಳನ್ನು ಅಪ್ಪಿ ಹಿಡಿದದ್ದು, ಮು... ಕೊಡುತ್ತಿರುವುದು, ಪರಸ್ಪರ ಫೋನ್ ಸಂಭಾಷಣೆಗ... ಸಾಂದರ್ಭಿಕ ಸಾಕ್ಷ್ಯಾಧಾರಗಳೆಲ್ಲವೂ ಒಂದು ಸಂಗತಿಯನ್ನ... ಸಾರಿ ಹೇಳುತ್ತಿದ್ದವು. ಅದು ಕಾರ್ತಿಕ್ ಗೌಡನ ಹೆಣ್ಣುಬಾ... ಮತ್ತು ಐಷಾರಾಮಿ ಜೀವನ.

ಕಾರ್ತಿಕ್ ಖಯಾಲಿಗಳು

ಆ ಪ್ರಕಾರವೇ ಇಡೀ ಪ್ರಕರಣವನ್ನು ನೋಡುವುದಾ... ಕಾರ್ತಿಕ್ ಗೌಡ ಅನೇಕ ಹೆಣ್ಣುಮಕ್ಕಳ ಬದು... ಆಟವಾಡಿದ್ದ. ಆತನ ಸ್ನೇಹಿತರು, ಲೈಫ್‌ಸ್ಟೈ... ಖಯಾಲಿಗಳು, ಶೋಕಿಗೆಂದೇ ಇದ್ದ ಫ್ಲಾಟುಗಳು, ರ... ಪಾರ್ಟಿಗಳು, ಕಾಫಿಡೇ, ಸ್ಕೈಬಾರ್, ಗೋದ್ರೆ... ಅಪಾರ್ಟ್‌ಮೆಂಟ್, ಮಾಡೆಲ್ ಹುಡುಗಿಯರು ಸಿನಿ... ಬೆಡಗಿಯರು; ಎಲ್ಲವೂ ಸದಾನಂದಗೌಡರ ಮಗನ '... ಬದುಕನ್ನೇ ಎತ್ತಿ ತೋರಿಸುತ್ತಿದ್ದವು.

ಒಬ್ಬ ಮಾಜಿ ಮುಖ್ಯಮಂತ್ರಿ, ಹಾಲಿ ಕೇಂದ್ರ ಮಂ...


ರೇಪ್ ನಡೆದ ಗೋದ್ರೆಜ್ ಅಪಾರ್ಟ್‌ಮೆಂಟ್


ಕಾರ್ತಿಕ್ ಶೋಕಿ ಅಡ್ಡೆ ಸ್ಕೈಬಾರ್



ಕಾರ್ತಿಕ್‌ಗೌಡನ ರಾತ್ರಿಗಳೂ ಪಾರ್ಟಿಗಳೂ ಹುಡುಗಿಯರು!

ಇಲ್ಲಿಗೆ ಮೂರು ವರ್ಷದ ಹಿಂದಿನ ಮಾತು. ಆರೆಸ್ಸೆಸ್‌ನ ಹಿರಿಯ ಮುಖಂಡರ ಮಗಳೊಬ್ಬಳೊಂದಿಗೆ ಭಾನಗಡಿ ಮಾಡಿಕೊಂಡ ಕಾರ್ತಿಕ್ ಗೌಡನಿಗೆ ಆಕೆಯನ್ನು ಮದುವೆಯಾಗಲೇಬೇಕಾದ ಪಜೀತಿ ಎದುರಾಗಿತ್ತು, ಈ ಹಂತದಲ್ಲಿ ತಾಯಿ ಡಾಟಿ ಸದಾನಂದಗೌಡ ಅಖಾಡಕ್ಕಿಳಿದು ಹುಡುಗಿಯ ಮನೆಯವರ ಬಾಯಿ ಮುಚ್ಚಿಸಿಬಿಟ್ಟರು!

ಅವತ್ತು ಇನ್ನೇನು ಆರೆಸ್ಸೆಸ್ ಮುಖಂಡರ ಮಗಳ ಜೊತೆ ಕಾರ್ತಿಕ್ ಮದುವೆ ನಿಕ್ಕಿ ಎಂದೇ ಸುದ್ದಿ ಹಬ್ಬಿತ್ತು; ಅದು ಕಾರ್ತಿಕ್ ಗೌಡನ ಹೆಣ್ಣುಬಾಕತನದ ಕುರಿತಂತೆ ಹಬ್ಬಿದ ಮೊದಲ ಸುದ್ದಿಯಾಗಿತ್ತು, ಸದಾನಂದ ಗೌಡರ ಇಬ್ಬರು ಗಂಡು ಮಕ್ಕಳ ಪೈಕಿ ಹಿರಿಯವನು ಕೌಶಿಕ್ ಗೌಡ. ಆ ಕಾಲಕ್ಕೇ ಮಂಗಳೂರು ಡಿಸ್ಕೋ ಅಡ್ಡೆಗಳಲ್ಲಿ ಇಟ್ಯಾಡಿಕೊಂಡಿದ್ದ. ನಡುರಾತ್ರಿ ತನಕ ಐಷಾರಾಮಿ ಡಿಸ್ಕೋಗಳಲ್ಲಿ ಪಾರ್ಟಿ ಮಾಡುವುದು, ಕಂಠಮಟ್ಟ ಕುಡಿದು ಹಾವಳಿಯಿಡುವುದು ಗೊತ್ತಿದ್ದೂ ಈ ಬಗ್ಗೆ ಸದಾನಂದ ಗೌಡರು ತಲೆ ಕೆಡಿಸಿಕೊಳ್ಳಲಿಲ್ಲ.

ಏಕೆಂದರೆ ತಾಯಿ ಡಾಟಿಯೇ ಮಕ್ಕಳನ್ನು ಅತೀ ಸಲುಗೆಯಿಂದ ಬೆಳೆಸಿದ್ದರು. ಹಾಗೆ ನಡುರಾತ್ರಿ ಪಾರ್ಟಿಯಲ್ಲಿ ಚಿತ್ತಾಗಿ ತನ್ನ ಬೈಕನ್ನೇರಿ ಪುತ್ತೂರಿಗೆ ಬರುತ್ತಿದ್ದಾಗಲೇ ಕೌಶಿಕ್ ಲಾರಿಯೊಂದಕ್ಕೆ ಬೈಕು ಗುದ್ದಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ. ಅದು 2003ರ ಕಾಲ. ಇದ್ದ ಇಬ್ಬರು ಮಕ್ಕಳ ಪೈಕಿ ಹಿರಿಯ ತನ್ನ ಶೋಕಿಗೇ ಬಲಿಯಾಗಿದ್ದು ಸದಾನಂದ ಗೌಡರ ಕಣ್ಣು ತೆರೆಸಬೇಕಿತ್ತು, ಇದ್ದೊಬ್ಬ ಮಗ ಕಾರ್ತಿಕ್‌ನನ್ನಾದರೂ ಹದ್ದುಬಸ್ತಿನಲ್ಲಿ ಬೆಳೆಸಬೇಕಿತ್ತು, ಹಾಗಾಗಲಿಲ್ಲ.

ಬಿಜೆಪಿ ಅಧಿಕಾರಕ್ಕೆ ಬಂದು ಸದಾನಂದ ಗೌಡ ಮುಖ್ಯಮಂತ್ರಿಯಾಗಿದ್ದೇ ತಡ, ಕಾರ್ತಿಕ್ ಗೌಡನ ಖಯಾಲಿಗಳು ಉಲ್ಬಣಗೊಂಡವು. ನಾಮಕಾವಸ್ತೆಗಷ್ಟೆ ಕಾರ್ತಿಕ್ ಇಂಜಿನಿಯರ್. ವಾಸ್ತವದಲ್ಲಾತ ಎಲ್ಲೂ ಕೆಲಸ ಮಾಡುವುದಿಲ್ಲ ಮಾಡಬಾರ. ಆತನ ದಿನಚರಿಯೇ ಸದಾನಂದ ಗೌಡರ ಬೇನಾಮೀ ಆಸ್ತಿಯನ್ನು ನೋಡಿಕೊಳ್ಳುವುದು, ಅವುಗಳ ಉತ್ಪತ್ತಿಯನ್ನು ನಿಭಾಯಿಸುವುದು!


ಪುಂಡ ಪುತ್ರನ ನಿಶ್ಚಿತಾರ್ಥ

ಬಾಗಲೂರು ರಸ್ತೆಯಲ್ಲಿರುವ ಬಂಗಲೆ, ಡಾಲರ್ಸ್ ಕಾಲನಿಯ ಮತ್ತೊಂದು ಬಂಗಲೆ, ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಕಟ್ಟಿಸುತ್ತಿರುವ ಕಾಂಪ್ಲೆಕ್ಸ್, ಮಂಗಳೂರಿನ ಕೊಟ್ಟಾರ ಹೈವೇಯಲ್ಲಿರುವ ಕಮರ್ಷಿಯಲ್ ಕಾಂಪ್ಲೆಕ್ಸ್‌ನ ಬಾಡಿಗೆ ವಸೂಲಿ, ಕಲ್ಲಡ್ಕದಲ್ಲಿರುವ ಡಿವಿಎಸ್ ಗೌಡ ಶಿಕ್ಷಣ ಸಂಸ್ಥೆಗಳ ನಿರ್ವಹಣೆ, ಬೆಂಗಳೂರಿನ ಬೇನಾಮೀ ಕಾಂಪ್ಲೆಕ್ಸುಗಳ ಉತ್ಪತ್ತಿ ಜೊತೆಗೆ ರಿಯಲ್ ಎಸ್ಟೇಟ್ ದಂಧೆ; ಇತ್ಯಾದಿಗಳನ್ನು ನಿಭಾಯಿಸುವುದೇ ಕಾರ್ತಿಕ್ ಗೌಡನ ದಿನಚರಿ. ಬೇನಾಮಿ ದಂಧೆ, ಬೇಕಾಬಿಟ್ಟಿ ದುಡ್ಡು ಮತ್ತು ಹೊತ್ತು ಗೊತ್ತಿಲ್ಲದ ಓಡಾಟಗಳ ಬಗ್ಗೆ ತಂದೆತಾಯಿಗಳೇ ತಲೆಕೆಡಿಸಿಕೊಳ್ಳುವುದಿಲ್ಲ ಎಂದಮೇಲೆ ಮಗ ಕೇಳಬೇಕೆ?

ಹಗಲು ಕಾಫಿ ಡೇ, ರಾತ್ರಿಯಾಯಿತೆಂದರೆ ಸ್ಕೈಬಾರ್, ಇನ್‌ಸೋಮ್ನಿಯಾ, ವಿಂಡ್ಸರ್ ಮ್ಯಾನರ್. ತನ್ನ ರಿಯಲ್ ಎಸ್ಟೇಟ್ ದಂಧೆ ಮತ್ತು ಬಿಸಿನೆಸ್ಸಿಗೆಂದು ಅಪ್ಪನ ಗೋದ್ರೆಜ್ ಅಪಾರ್ಟ್‌ಮೆಂಟ್ ಅನ್ನು ಬಳಸಿಕೊಳ್ಳುತ್ತೇನೆಂದು ತಾಯಿಯನ್ನು ನಂಬಿಸಿದ. ಪ್ರಾರಂಭದಲ್ಲಿ ಬಿಹಾರಿ ಇಂಜಿನಿಯರಿಂಗ್ ಹುಡುಗಿಯೊಬ್ಬಳನ್ನು ಗೋದ್ರೇಜ್ ಅಪಾರ್ಟ್‌ಮೆಂಟಿಗೆ ಕರೆದೊಯ್ಯುತ್ತಿದ್ದ. ಕ್ರಮೇಣ ಆಕೆಯನ್ನು ತೊರೆದು ಮಂಗಳೂರು ಮೂಲದ ಕ್ರಿಶ್ಚಿಯನ್ ಯುವತಿಯ ಸಂಗಕ್ಕೆ ಬಿದ್ದ. ಆಕೆಗೆ ಸ್ವಿಫ್ಟ್ ಕಾರೊಂದನ್ನು ಗಿಫ್ಟ್ ಕೊಟ್ಟು ರಾತ್ರಿ ಪಾರ್ಟಿಗ... ಬಳಸುತ್ತಿದ್ದ. ತದನಂತರ ಕೋರಮಂಗಲದ ಮಾಡೆಲ್ ಬಬಿತಾ (ಹೆ... ಬದಲಿಸಿದೆ) ಜೊತೆ ಸುತ್ತಾಡುತ್ತಿದ್ದ. ಕೆಲ ದಿನಗಳ ಕಾಲ ಉದಯೋನ್ಮು... ನಟಿಯೊಬ್ಬಳಿಗೆ ಗಾಳ ಹಾಕಿದ.

ಇಷ್ಟೆಲ್ಲ ಹೆಣ್ಣು ಬಾಕತನದ ಮಧ್ಯೆ ಕಾರ್ತಿಕ್ ಮನಸೋತಿದ್ದು ಮೈತ್ರೇಯಿ... ಸಿನಿಮಾ, ಫ್ಯಾಷನ್ ಷೋ, ಆ್ಯಡ್‌ಗಳೆಂದು ಓಡಾಡಿಕೊಂಡಿದ್ದ ಮೈತ್ರೇಯಿ... ಕುಶಾಲ್ ಗೌಡ ಎಂಬಾತ ಪರಿಚಯವಾಗಿದ್ದ. ಆತನೇ ಕಾಫಿ ಡೇಯ... ಕಾರ್ತಿಕ್ ಗೌಡನಿಗೆ ಪರಿಚಯಿಸಿಕೊಟ್ಟಿದ್ದ. ಮೊದಲ ಭೇಟಿಯಲ್ಲೇ ಕಾರ್ತಿ... ಆಕೆಯ ಮೊಬೈಲ್ ನಂಬರನ್ನು ಪಡೆದುಕೊಂಡವನು ಕ್ರಮೇಣ ಲವ್ ಮೆಸೇ... ಕಳಿಸತೊಡಗಿದ. ಪದೇಪದೇ ಪಾರ್ಟಿಗೆ ಕರೆಸಿಕೊಂಡ. ಬೇಕಾದಾಗಲೆಲ್ಲ ಅ... ಗೋದ್ರೇಜ್ ಅಪಾರ್ಟ್‌ಮೆಂಟಿಗೆ ಕರೆದೊಯ್ದು ಮೋಜು ಮಾಡಿದ.

ಪಾಪ, ಮೈತ್ರೇಯಿ ತಾನೇ ಆಸೆ ಪಡೆದೇ ಇನ್ನೇನು? ಎಷ್ಟೆಂದ... ಮಾಜಿ ಮುಖ್ಯಮಂತ್ರಿಯ ಮಗ. ಜೊತೆಗೆ ಆಸ್ತಿವಂತ. ಪ್ರತಿಯೊಬ್ಬ ಹೆ... ಮಕ್ಕಳೂ ಇದನ್ನೇ ತಾನೇ ಬಯಸುವುದು? ಮೈತ್ರೇಯಿ ಕೂಡ ಪ್ರಾಮಾಣಿಕವಾ... ಕಾರ್ತಿಕ್‌ನನ್ನು ಪ್ರೀತಿಸಿದ್ದಾಳೆ. ಆತನೊಂದಿಗೆ ಮದುವೆಯ ಕನಸು ಕಂಡಿದ್ದ... ತನಗೆ ಅನ್ಯಾಯವಾಯಿತೆಂದಾಗ ಬೀದಿಗಿಳಿದಿದ್ದಾಳೆ. ಈಗ ಈಕೆಯ ಕ್ಯಾರೆಕ್ಟ... ಸರಿ ಇಲ್ಲ, ಸಿನಿಮಾ ನಟಿ, ಯಾರ್ಯಾರದೋ ಜೊತೆ ಸಂಬಂಧ; ಇತ್ಯಾದಿ ... ಕಟ್ಟಿ ತೇಜೋವಧೆಗಿಳಿದ ಸದಾನಂದ ಗೌಡರಿಗೆ ಒಂದು ಪ್ರಶ್ನೆ-

ನಿಮ್ಮ ಮಗನ ಕ್ಯಾರೆಕ್ಟರ್ ಸರಿ ಇದೆಯಾ? ಆತ ಕೈಕೊಟ್ಟ ಹುಡುಗಿಯ... ಸಂಖ್ಯೆಗೆ ಹೋಲಿಸಿದರೆ ನೀವೇ ಆರೋಪಿಸುವಂತೆ ಮೈತ್ರೇ... ವಂಚಿಸಿರಬಹುದಾದ ಹುಡುಗರ ಸಂಖ್ಯೆ ಯಾವ ಮಹಾ? ಬಳಸಿಕೊಳ್ಳುವಾ... ಮೋಜು ಮಾಡುವಾಗ, ಲವ್ ಮೆಸೇಜ್ ಕಳಿಸುವಾಗ, ನಂಬಿಸುವಾಗ ಆಕೆ... ಕ್ಯಾರೆಕ್ಟರ್ ನಿಮ್ಮ ಮಗನಿಗೆ ಮುಖ್ಯವಾಗಲಿಲ್ಲ ಎಂದಮೇಲೆ ಮದುವೆ... ವಿಷಯ ಬಂದಾಗ ಮಾತ್ರ ಕ್ಯಾರೆಕ್ಟರ್ ಮುಖ್ಯವಾಯಿತೆ?

ನಿಮ್ಮ ಮಗ ಮನಸಾರೆ ಪ್ರೀತಿಸಿದನಲ್ಲ ಅಂಥ ಹೆಣ್ಣೊಬ್ಬಳಿಗೆ ನ್ಯಾ... ಗೌರವ ನೀಡಲಾಗದಷ್ಟು ಸಣ್ಣ ಮನಸ್ಸು ನಿಮ್ಮದು?

ಇನ್ನು ನೊಂದ ಹೆಣ್ಣು ಮಕ್ಕಳಿಗೆ ನೀವು ಇನ್ನೆಂಥ ನ್ಯಾಯ ಕೊಡಬಲ...

ತ್ನ ಭಾರತೀಯ ಸಂಸ್ಕೃತಿ, ಭಾರತ ಮಾತೆ, ಧರ್ಮ,
ಪರಂಪರೆ, ನ್ಯಾಯ, ನಿಷ್ಠೆ ಎಂದೆಲ್ಲ ಭಾಷಣ
ವ ಸದಾನಂದ ಗೌಡ ತನ್ನ ಮಗನನ್ನು ಯಾವ
ಟ್ಟುಕೊಂಡು ಬೆಳೆಸಿದ್ದಾರೆ ಮತ್ತು ಕಾರ್ತಿಕ್ ಗೌಡ
ಪರಿಯೇನು ಎಂಬುದೇ ಕುತೂಹಲಕರ
ಾಗಬೇಕಿತ್ತು, ನ್ಯೂಸ್ ಚಾನಲ್ಲುಗಳು ಕಾರ್ತಿಕ್
ಇತಿಹಾಸಕ್ಕೆ ಕೈಯಿಟ್ಟದ್ದರೆ ಈತನಿಂದ ಮೋಸ
ಹುಡುಗಿಯರ ಪಟ್ಟಿಯೇ ರೆಡಿಯಾಗುತ್ತಿತ್ತು.
ತನಗೆ ವಂಚನೆಯಾಗಿದೆ ಎಂದು ಒಬ್ಬ ಹೆಣ್ಣು
ಬಹಿರಂಗವಾಗಿ ಕಣ್ಣೀರಿಡುತ್ತಾಳೆಂದರೆ, ಆಕೆಯ
ಷದಲ್ಲಿ ಸತ್ಯವಿದೆಯೆಂ ಎಂಬ ಕನಿಷ್ಠ
ನ್ನಾದರೂ ಮೀಡಿಯಾಗಳು ಪ್ರದರ್ಶಿಸಬೇಕಿತ್ತು.
ೊದಲು ಮೈತ್ರೇಯಿಳ ಪರ ವಹಿಸಿಯೇ
ಗಳು ಮರುಕ ನಟಿಸಿದವು. ನಿಶ್ಚಿತಾರ್ಥದ ಸ್ಥಳಕ್ಕೆ
ರ್ತಿಕ್‌ನನ್ನು ಮಾತಿಗೆಳೆದ ವರದಿಗಾರರಿಗೆ ಆತ
ನನಗೆ ಟೆನ್ಷನ್ ಕೊಡ್ತೀರಲ್ಲಾ...?" ಎಂದು ಹಾರಿಕೆ
ಕೊಟ್ಟು ಪರಾರಿಯಾಗಿದ್ದ.

ಗೆ ಕಾರ್ತಿಕ್ ಗೌಡನ ಖಾಸಗಿ ಬದುಕಿನ ಸುತ್ತ
ಮೀಡಿಯಾಗಳ ಆಸಕ್ತಿ ಕೆರಳಬೇಕು?

ಹರೆ ನಡೆದದ್ದೇ ಬೇರೆ. ಮೊದಲೆರಡು ದಿನ
ಳ ಪರ ಮೊಸಳೆ ಕಣ್ಣೀರಿಟ್ಟ ಟೀವಿಗಳು ಮೂರನೇ
ಇದ್ದಕ್ಕಿದ್ದಂತೆ ಉಲ್ಟಾ ಹೊಡೆದವು. ಮಂಡ್ಯದಲ್ಲಿ
ದ ಗೌಡರ ಬೆಂಬಲಿಗನೊಬ್ಬ ತನಗೆ
ವಿಲ್ಲದಿದ್ದರೂ ಮೈತ್ರೇಯಿ ಪ್ರಕರಣದ ಬಗ್ಗೆ ತನಿಖೆ
ಎಂದು ಪೊಲೀಸರಿಗೆ ದೂರು ಕೊಟ್ಟದ್ದನ್ನೇ ದೊಡ್ಡ
ಗಿಸಲಾಯಿತು. ಇದ್ದಕ್ಕಿದ್ದಂತೆ ಮೈತ್ರೇಯಿಳ ಖಾಸಗಿ
ತ್ತ ಸುದ್ದಿ ಕೇಂದ್ರೀಕರಿಸಲಾಯಿತು. ಆಕೆಯ ತಂದೆ-
ಯಾರು? ತಂಗಿ ಏನು ಮಾಡುತ್ತಾಳೆ? ಆಕೆಯ
ಫ್ರೆಂಡ್ಸ್ ಯಾರ್‍ಯಾರು? ಯಾವ್ಯಾವ ಸಿನಿಮಾದಲ್ಲಿ
ಟಿಸಿದ್ದಾಳೆ? ಶೂಟಿಂಗ್ ಸಮಯದಲ್ಲಿ ಆಕೆಯ
ಕೆ ಹೇಗಿತ್ತು? ಹೀಗೆ ಮೀಡಿಯಾಗಳ ಕುತೂಹಲ
ರೂಪ ತಳೆದಿತ್ತು.

ಲಡ್ಡು ನಾಗರಾಜ!

ಗೆ ಮೈತ್ರೇಯಿ ಪರವಾಗಿದ್ದ ಟೀವಿಗಳೆಲ್ಲ
ಾತ್ರಿ ಸದಾನಂದಗೌಡ ಪರ ತಿರುಗಿದ್ದು ಸ್ಪಷ್ಟವಾಗಿತ್ತು.
ದೇ ಚಾನಲ್ಲುಗಳನ್ನು ಮೈತ್ರೇಯಿಳ ವಿರುದ್ಧ ಛೂ
ಯಿತು. ನಾಲ್ಕನೇ ದಿನದ ಹೊತ್ತಿಗೆ ಕಾರಸ್ಥಾನ
ದರೆ ಏಕಾಏಕಿ ರುಷಿ ಎಂಬ ಹೆಸರಿನ ಸಿನಿಮಾ
ನೊಬ್ಬ ತಾನು ನಟಿ ಮೈತ್ರೇಯಿಳ ಜೊತೆ
ವೆಯಾಗಿದ್ದೇನೆ, ಆಕೆ ನನ್ನ ಎರಡು ಲಕ್ಷ
ಯಿಗಳನ್ನು 10 ವರ್ಷದ ಹಿಂದೆ ಕದ್ದು
ಯಾಗಿದ್ದಾಳೆ, ಹತ್ತು ವರ್ಷಗಳ ಹಿಂದೆ ನಾನು
ನ್ನು ಗಾಂಧರ್ವ ವಿಧಿಯಿಂದ ಮದುವೆಯಾಗಿ
ಮೋ ಲಡಾಸು ಲಾಡ್ಜಿನಲ್ಲಿ ನಾಲ್ಕು ತಿಂಗಳು ಸಂಸಾರ
ದ್ದೇನೆ ಎಂದು ಕೋರ್ಟಿಗೊಂದು ಅರ್ಜಿ ಸಲ್ಲಿಸಿದ್ದ.
ವನ್ನು ಟೀವಿಗಳು ಅದೆಷ್ಟು ಲಜ್ಜೆಗೆಟ್ಟು ಇಡೀ
ಚರ್ಚೆಗಿಳಿದವೆಂದರೆ ಕಾರ್ಯಕ್ರಮ ವೀಕ್ಷಿಸುತ್ತಿದ್ದವರೇ
ು ಕಂಡು ಕ್ಯಾಕರಿಸುತ್ತಿದ್ದರು. ಇಷ್ಟಕ್ಕೆ ಷಡ್ಯಂತ್ರ
ಮುಗಿಯಲಿಲ್ಲ. ರುಷಿಯ ನಂತರ ಇದ್ದಕ್ಕಿದ್ದಂತೆ ನಿಹಾಲ್
ಎಂಬ ಮತ್ತೊಬ್ಬ ಲಫಂಗ ಟೀವಿಗಳ ಪರದೆಯಲ್ಲಿ
ದ. ಮೈತ್ರೇಯಿ ನನಗೂ ಮದುವೆಯಾಗುತ್ತೇನೆಂದು
ಮಾಡಿದ್ದಾಳೆ, ನಾನು ಕೂಡ ಆಕೆಯ ಜೊತೆ
ದ್ದೇನೆ ಎಂದು ಪಕ್ಕಾ ಕಳ್ಳನಂತೆ ನಿಹಾಲ್ ಗೌಡ
ಕೆ ಬಿಡುತ್ತಿದ್ದರೆ ಟೀವಿಗಳು ಅದನ್ನೇ ಪರಮ
ಬಂತೆ ಸುದ್ದಿ ಬಿತ್ತರಿಸತೊಡಗಿದವು. ಯಾವ ಟೀವಿ
ಮಾಡಿದರೂ ಮೈತ್ರೇಯಿಳ ತೇಜೋವಧೆಯದ್ದೇ
ು ರಾಶಿ. ಸಾಲದ್ದಕ್ಕೆ ದಿನಕ್ಕೊಬ್ಬ ವಕೀಲರು,
ದಗೌಡರ ಬೆಂಬಲಿಗರನ್ನು ಟೀವಿಗಳು ಕರೆಸಿಕೊಂಡು
ಯಿಳ ವಿರುದ್ಧವೇ 'ಉಪನ್ಯಾಸ' ಕೊಡಿಸತೊಡಗಿದವು.
ು, ಮೈತ್ರಿಯಾ ನಡತೆಗೆಟ್ಟವಳು, ಗತಿಗೆಟ್ಟವಳು
ಇಟ್ಟುಕೊಳ್ಳೋಣ. ಹಾಗೆಂದ ಮಾತ್ರಕ್ಕೆ ಯಾರು
ದರೂ ಏನು ಬೇಕಾದರೂ ಮಾಡಬಹುದೆ?
ನಳೊಡನೆ ಕಾರ್ತಿಕ್ ಚಕ್ಕಂದ ಆಡಿದ್ದೇಕೆ?
ದ್ದೇಕೆ? ಹಾಗಾದರೆ ಕಾರ್ತಿಕ್ ಗೌಡನದ್ದೇನೂ
ನೆ? ಏಕೆ ಮಾಧ್ಯಮಗಳು ಆತನನ್ನು ಏನನ್ನೂ
ತ್ತಿಲ್ಲ? ಕೇವಲ ಮೈತ್ರಿಯಾಳನ್ನೇ ಟಾರ್ಗೆಟ್
ತ್ತಿರುವುದೇಕೆ?

ದುಬೈ ಡಾನ್ ಎಂಟ್ರಿ

ದು ಸದಾನಂದ ಗೌಡರ ತಾಕತ್ತು ಮತ್ತು ಅಧಿಕಾರದ
ತ್ರಿ ಶುರುವಿನಲ್ಲಿ ನನ್ನ "ಮಗನ ವಿಷಯದಲ್ಲಿ ಕಾನೂನು
ಕ್ರಮ ಬೇಕಾದರೂ ಜರುಗಿಸಲಿ, ನಾನು ಹಸ್ತಕ್ಷೇಪ
ುವುದಿಲ್ಲ' ಎಂದು ಸಾಚಾ ಗತ್ತಿನಲ್ಲೇ ಮಾತಾಡಿದ್ದ
ು ಯಾವಾಗ ಆರ್.ಟಿ. ನಗರ ಪೊಲೀಸ್ ಠಾಣೆಯಲ್ಲಿ
ವಿರುದ್ಧ ದೂರು ದಾಖಲಾಯಿತೋ ಬೇರೆಯದೇ
ಶಿಸಿದರು. ಗೌಡ ಜನ್ಮತಃ ಪಕ್ಕಾ ಜಿಪುಣ ಮತ್ತು
ರಾಜಕೀಯದಲ್ಲಿ ಎಂಜಲು ಕೈಯಲ್ಲಿ ಕಾಗೆಯನ್ನೂ



ಓಡಿಸುವುದಿಲ್ಲ.

ಆದರೆ ಮಗನ ಪ್ರಶ್ನೆ ಬಂದಿದ್ದೇ ತಡ ಮೊದಲು ಫೋನಾಯಿಸಿದ್ದು ತನ್ನ ಆ ಕಾಲದ ಗೆಳೆಯ ದುಬೈ ರಿಟರ್ನ್ ಬಿಡದಿ ಭೂಗತ ದೊರೆಗೆ. ಮಂಗಳೂರು ಮೂಲದ ಸದ್ಯ ಬಿಡದಿಯನ್ನೇ ತನ್ನ ಕಾರಸ್ಥಾನವಾಗಿಸಿಕೊಂಡ ಆ ಭೂಗತ ದೊರೆ ಇಂಥಾ ಸಂದರ್ಭದಲ್ಲಿ ನೆರವಿಗೆ ಬರದಿದ್ದರೆ ಹೇಗೆ. ಅಲ್ಲಿಂದ ಶುರುವಾಗಿದ್ದು ಮೈತ್ರಿಯಾ ವಿರುದ್ಧದ ಕಾರ್ಯಾಚರಣೆ. ಸದಾನಂದಗೌಡರ ಪಕ್ಕಾ ಬೆಂಬಲಿಗ ಗೋಲ್ಡ್‌ಫಿಂಚ್ ಪ್ರಕಾಶ್ ಶೆಟ್ಟಿ, ದಿನಪತ್ರಿಕೆಯೊಂದರ ಚೆಡ್ಡಿ ಸಂಪಾದಕ, ಕೇರಳ ಮೂಲದ ಕನ್ನಡ ಸುದ್ದಿ ವಾಹಿನಿಯೊಂದರ ಕ್ರೈಂ ರಿಪೋರ್ಟರ್, ಕಳ್ಳರ ದುಡ್ಡಲ್ಲೇ ಚಾನಲ್ ಆರಂಭಿಸಿ ವೃತ್ತಿನಿಷ್ಠ ಪತ್ರಕರ್ತರ ಚಾನೆಲ್ಲೆಂದು ವಂಚನೆಗಿಳಿದ ಆಸಾಮಿ, ನಟ ಮಹೇಂದರ್ ಸಂಸಾರಕ್ಕೇ ಕೊಳ್ಳಿಯಿಟ್ಟ ಪತ್ರಕರ್ತನ ವೇಷದ ಹೆಣ್ಣು ಬಾಕ ಕಲ್ಯಾಚಾರಿ, ಮಂಗಳೂರು ಮೂಲದ ಮತ್ತೊಬ್ಬ ಬಿಲ್ಡರ್- ಹೀಗೆ ಒಂದು ಹಿಂಡು ಡೀಲರುಗಳೆಲ್ಲ ಮೈತ್ರೇಯಿಳ ವಿರುದ್ಧ ಕಾರ್ಯಾಚರಣೆಗಿಳಿದರು.

ಮೈತ್ರೇಯಿ ವಿರುದ್ಧ ಯಾವುದೇ ಚಾನಲ್ ಅರ್ಧ ಗಂಟೆ ಅಪಪ್ರಚಾರದ ಕಾರ್ಯಕ್ರಮ ಬಿತ್ತರಿಸಿತೆಂದರೆ ಅದಕ್ಕೆ 5 ಲಕ್ಷ. ಇಡೀ ದಿನ ಅಪಪ್ರಚಾರ ನಡೆಸಿದರೆ ಅದಕ್ಕೆ 25 ರಿಂದ 50 ಲಕ್ಷದ ವಿಶೇಷ ಪ್ಯಾಕೇಜ್. ಆಕೆಯ ವಿರುದ್ಧ ಏನೇ ಮಾನಹಾನಿಯ ಹೊಸ ಮಾಹಿತಿ ಪ್ರಕಟಿಸಿದರೂ ಅದಕ್ಕೆ ಭಕ್ಷೀಸು 5 ಲಕ್ಷ. ಹೀಗೆ ಅವರವರ ತೂಕಕ್ಕೆ ತಕ್ಕಂತೆ ಡೀಲು ಕುದುರಿಸಲಾಯಿತು. ಮೈತ್ರಿಯಾ ಕೊಟ್ಟ ದೂರನ್ನು ಆಕೆಯ ವಿರುದ್ಧವೇ ತಿರುಗಿಸಿದರೆ ಅದಕ್ಕೆ 10 ಕೋಟಿಯ ಪ್ಯಾಕೇಜೊಂದನ್ನು ಪೊಲೀಸ್ ಅಧಿಕಾರಿಯೊಬ್ಬರಿಗೆ ಆಫರ್ ಮಾಡಲಾಯಿತು.

ಒಂದೆಡೆ ಚಾನಲ್ಲುಗಳನ್ನು ಸಾರಾಸಗಟಾಗಿ ಖರೀದಿಸುತ್ತಿದ್ದಂತೆ ಮತ್ತೊಂದೆಡೆ ಆಕೆಯ ಚಾರಿತ್ರ್ಯಹರಣಕ್ಕೆ ಪ್ರತ್ಯೇಕ ಪಡೆ ಸಜ್ಜಾಯಿತು. ಹಾಗೆ ಚಾರಿತ್ರ್ಯಹರಣಕ್ಕೆಂದು ಮೊದಲು ಸಿಕ್ಕವನು ಲಡ್ಡು ನಾಗರಾಜ ಉರ್ಫ್ ರುಷಿ ಎಂಬ ಹುಟ್ಟಾ ಲಂಪಟ ಮತ್ತು ವಂಚಕ. ಲಂಕೇಶ್ ಪತ್ರಿಕೆಯ ಹೆಸರಲ್ಲಿ ಸಿಕ್ಕಸಿಕ್ಕವರನ್ನು ಬ್ಲಾಕ್‌ಮೇಲ್ ಮಾಡಿ ಹಣ ಸುಲಿಯುವುದನ್ನೇ ಕಾಯಕ ಮಾಡಿಕೊಂಡ ಚಿತ್ರ ನಿರ್ದೇಶಕ ಮಹೇಂದರ್ ಸಂಸಾರವನ್ನೇ ಬೀದಿಗೆ ತಂದ ಕಲ್ಯಾಚಾರಿಯ ಮೂಲಕ ಲಡ್ಡು ನಾಗನಿಗೆ 25 ಲಕ್ಷ ನೀಡಿದ್ದನ್ನು ಖುದ್ದು ಲಡ್ಡು ನಾಗನೇ ಹೇಳಿಕೊಂಡಿದ್ದ.

ನಿಹಾಲ್‌ಗೌಡ?

ತನ್ನ ಅಸಲೀ ಹೆಸರನ್ನೇ ಮುಚ್ಚಿಟ್ಟು ಯಾವುದೋ ಕಾಲ್ಪನಿಕ ಹೆಸರಲ್ಲಿ ಕೋರ್ಟ್ ಮೆಟ್ಟಲೇರಿದ ಲಡ್ಡು ರುಷಿ ಹತ್ತು ವರ್ಷದ ಹಿಂದೆ ತಾನು ಮದುವೆಯಾಗಿದ್ದೇನೆಂದು ಹೇಳಿದ್ದೇ ಕುಚೇಷ್ಟೆಯಾಗಿತ್ತು, ಅದು ಗೊತ್ತಿದ್ದೂ ದಿನಗಟ್ಟಲೇ ಆತನನ್ನು ಟೀವಿಗಳು ಕೂರಿಸಿ ಚರ್ಚೆಗಿಳಿದವು. ಬೆನ್ನಲ್ಲೇ ನಿಹಾಲ್ ಗೌಡ ಎಂಬ ಅನಾಮಿಕನೊಬ್ಬ ಪ್ರತ್ಯಕ್ಷನಾದ. ತಾನು ಯಾವುದೋ ಕಾಲಕ್ಕೆ ಮೈತ್ರೇಯಿಳ ಜೊತೆ ಸಂಬಂಧ ಹೊಂದಿದ್ದೆ ಎಂದು ಟೀವಿಗಳಲ್ಲಿ ಬುರುಡೆ ಬಿಟ್ಟ ಈತ ಇದ್ದಕ್ಕಿದ್ದಂತೆ ತನ್ನ ಫೋನ್ ಆಫ್ ಮಾಡಿಕೊಂಡು ನಾಪತ್ತೆಯಾದ.

ದುಡ್ಡು ಏನೆಲ್ಲಾ ಅನಾಹುತ ಮಾಡಬಹುದೋ ಅದೆಲ್ಲವೂ ಲಜ್ಜೆಗೆಟ್ಟು ನೆರವೇರತೊಡಗಿತ್ತು. ಸುಳ್ಳು ಭರವಸೆ ಕೊಟ್ಟು ಮೈತ್ರೇಯಿಳನ್ನು ಚರ್ಚೆಗೆ ಕರೆಸಿಕೊಂಡ ಚಾನಲ್ಲುಗಳು ಆಕೆಯನ್ನು ಚಿತ್ರವಿಚಿತ್ರ ಪ್ರಶ್ನೆ ಹಾಕಿ ಅಳಿಸಿ ಗೋಳಾಡಿಸಿ ಸಾಗ ಹಾಕುತ್ತಿದ್ದವು. ಅಷ್ಟಕ್ಕೂ ಆಕೆಯ ತಪ್ಪೇನೆಂಬುದಕ್ಕೆ ಯಾರಲ್ಲೂ ಉತ್ತರವಿರಲಿಲ್ಲ. ಅನುಕೂಲಸ್ಥರ ಮನೆ ಹುಡುಗನನ್ನು ಮದುವೆಯಾಗಬೇಕೆಂಬ ಬಯಕೆ ಯಾವ ಹೆಣ್ಣು ಮಗಳಿಗಿಲ್ಲ? ಅರಿಶಿನ ಕೊಂಬು ಕಟ್ಟಿ ತನ್ನನ್ನು ಭೋಗಿಸಿದನೆಂದು ಬಾಯಿಬಿಟ್ಟದ್ದೇ ಮಹಾಪರಾಧ ಎನ್ನುವುದಾದರೆ ಆಕೆಯನ್ನು ತಬ್ಬಿಕೊಂಡು ಫೋಟೋ ತೆಗೆಸಿಕೊಂಡನಲ್ಲ ಕಾರ್ತಿಕ್ ಗೌಡ; ಆತನದ್ದೇನೂ ತಪ್ಪಿಲ್ಲವೆ?

ಏಕೆ ಮೀಡಿಯಾಗಳು ಕಾರ್ತಿಕ್ ಹಿನ್ನೆಲೆಯನ್ನು ಕೆದಕುತ್ತಿಲ್ಲ? ಏಕೆ ತಾಯಿ ಡಾಟಿ ಮತ್ತು ತಂದೆ ಸದಾನಂದ ಗೌಡರಿಗೆ ಯಾರೂ ಪ್ರಶ್ನೆ ಹಾಕುವುದಿಲ್ಲ?

ಅನುಮಾನವೇ ಬೇಕಿಲ್ಲ, ಸದಾನಂದಗೌಡ ತನ್ನ ಮಗನ ಕಾಮುಕತೆಯನ್ನು ಮುಚ್ಚಿಹಾಕಲು 25 ಕೋಟಿಗಿಂತ ಕಮ್ಮಿ ಸುರಿದಿಲ್ಲ ಮತ್ತು ಮೀಡಿಯಾಗಳು ತೇಜೋವಧೆ ಮಾಡಿದ ಮಾತ್ರಕ್ಕೆ ಹೆಣ್ಣು ಮಗಳೊಬ್ಬಳು ಹಾಳಾಗುವುದಿಲ್ಲ.

● ರಾ. ಸೋಮನಾಥ್

ವೃತ್ತಿಶೀಲತೆ ಮತ್ತು ಸೃಜನಶೀಲತೆ

ಇದೇ ಸೆಪ್ಟೆಂಬರ್ 2ರ ವಿಜಯ ಕರ್ನಾಟಕದಲ್ಲಿ ಪ್ರಸನ್ನ ಅವರು ಪ್ರಸ್ತುತ ಕಾಲಂನಲ್ಲಿನ ಶೀಲವಿರದೆ ಸೃಜನಶೀಲತೆಯುಂಟೆ? ಎಂಬ ಅಂಕಣ ಬರಹ ಆಧುನಿಕ ಮಾನವರ ಮುಖಕ್ಕೆ ಹಿಡಿದ ಕನ್ನಡಿಯಾಗಿದೆ.

ಕಲಾವಿದರು, ಬುದ್ಧಿಜೀವಿಗಳು, ನರ್ತಕಿಯರು, ಸಾಹಿತಿಗಳು, ಸಿನಿಮಾ ತಾರೆಯರು, ಟಿವಿ ಸ್ಟಾರುಗಳು ಇತ್ಯಾದಿ ಸೃಜನಶೀಲ ವ್ಯಕ್ತಿಗಳ ನೆರವಿಗಿದೆ ಇಂದಿನ ಸಮಾಜ. ರೈತರು, ಶ್ರಮಜೀವಿಗಳು, ಸಹಜಪ್ರಕೃತಿ, ಪ್ರಾಣಿಪಕ್ಷಿಗಳು ಕಣ್ಮರೆಯಾಗುತ್ತಿವೆ. ಅವುಗಳ ಚಿತ್ರಗಳು, ಅವುಗಳ ಕಥೆಗಳು,



ಸಿನಿಮಾ ನಾಟಕ ಸೀರಿಯಲ್ಲುಗಳು ವಿಜೃಂಭಿಸತೊಡಗಿವೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಶಶಿಧರ ಹೆಮ್ಮಾಡಿ ಅವರು ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ರಾಜಕಾರಣಿಗಳು ವೋಟಿನ ಆಸೆಗಾಗಿ ವಿವಿಧ ಜಾತಿ ಧರ್ಮಗಳವರನ್ನು ಓಲೈಸುವುದನ್ನು ಪ್ರಶ್ನಿಸಿದ್ದಾರೆ. ಕೆಲ ನಿರ್ದಿಷ್ಟ ಜಾತಿಯವರು ಸಂಘಟಿಸಿದ ಸಮಾರಂಭಗಳಿಗೆ ಹೋಗಿ ಸಮಾಜಕ್ಕೆ ನಿಮ್ಮ ಕೊಡುಗೆ ದೊಡ್ಡದು ಎಂದು ಹೇಳುತ್ತ ಚಪ್ಪಾಳೆ ಗಿಟ್ಟಿಸುತ್ತಾರೆ. ಆದರೆ ಮಂಗಳೂರು ಬೆಂಗಳೂರಿನಂಥ ನಗರಗಳನ್ನೇ ನಿರ್ಮಿಸುತ್ತಿರುವ ಕಟ್ಟಡ ಕಾರ್ಮಿಕರನ್ನು ಇವರಾರೂ ಹೊಗಳುವುದಿಲ್ಲ ಎಂಬ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ಹೀಗೆ ಅವರು ಜಾತಿಗಳನ್ನು ಮೀರಿದ ವರ್ಗಪ್ರಜ್ಞೆ ಮೂಡಿಸುತ್ತಾರೆ.

ಇಷ್ಟೊಂದು ಸ್ಪಷ್ಟವಾಗಿ ಏಳುತ್ತಿರುವ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಪಡೆಯುವುದರಲ್ಲೇ ಭಾರತದ ಭವಿಷ್ಯ ಅಡಗಿದೆ. ದುಡಿಯುವವರನ್ನು ಜಾತಿಯ ವಲಯಗಳಿಂದ ಹೊರತಂದು ಅವರನ್ನು ಒಂದು ವರ್ಗವಾಗಿಸಿ ಅವರ ವೃತ್ತಿಶೀಲತೆಯ ಮೂಲಕ ಹೊರಹೊಮ್ಮುವ ಸೃಜನಶೀಲತೆಯ ಕುರಿತು ಕಣ್ಣು ತೆರೆಯಿಸುವ ಮಾತುಗಳು ಇವು.

ಹುಲ್ಲು ಮಾರುತ್ತಿದ್ದ ಲದ್ದೆಯ ಸೋಮಣ್ಣ ಬಸವಣ್ಣನವರ ಸಮಕಾಲೀನ ಶರಣ. ಆವ ಕಾಯಕವಾದರೂ ಸ್ವಕಾಯಕವನ್ನಾಗಿಸುವ ಕುರಿತು ಆತ ತಿಳಿಸಿದ್ದಾನೆ. ನಾವು ನಮ್ಮ ಕೆಲಸದಲ್ಲಿ ತಲ್ಲೀನರಾಗದೆ ಅನ್ಯರಾಗಿ ಉಳಿದಾಗ ವೃತ್ತಿಯು ಸೃಜನಶೀಲವಾಗದು. ನಮ್ಮ ಕಾಯಕದಲ್ಲಿ ನಾವು ಇಲ್ಲದೆ ಇರುವ ಅವಸ್ಥೆಗೆ ಏಲಿಯನೇಟಿಂಗ್ ಎಂದು ಮಾರ್ಕ್ಸ್ ಕರೆಯುತ್ತಾರೆ. ಈ ಹೊರಗಾಗುವಿಕೆಯಿಂದ ಮಾಡುವ ಕೆಲಸ ಎಂಬುದು ಕಾಯಕ ಆಗುವುದಿಲ್ಲ.

ಮೇಲಿನ ಇಬ್ಬರು ಗೆಳೆಯರು ಕಾಯಕದ ಕುರಿತು ಮಾತನಾಡುತ್ತಿದ್ದಾರೆ. ಈ ಕಾಯಕಜೀವಿಗಳು ವೃತ್ತಿಶೀಲರಾಗಿರುವುದರಿಂದ ಅವರು ಸೃಜನಶೀಲರೂ ಆಗಿದ್ದಾರೆ. ಸೃಜನಶೀಲತೆಯ ಮೂಲವಾದ ವೃತ್ತಿಶೀಲತೆಯನ್ನೇ ಮರೆಯುವುದು. ನಂತರ ಸೃಜನಶೀಲತೆಯನ್ನೇ ವಿಜೃಂಭಿಸುತ್ತ ದುಡಿಯುವ ವರ್ಗವನ್ನು ಕಡೆಗಣಿಸುವುದು. ತದನಂತರ ಸೃಜನಶೀಲತೆಯನ್ನು ವೃತ್ತಿಯಾಗಿಸಿಕೊಂಡವರ ಒಂದು ವರ್ಗವನ್ನೇ ಸೃಷ್ಟಿಸುವುದು. ಆ ಮೂಲಕ ಕಲೆಗಾಗಿ ಕಲೆ ಎಂಬ ಪ್ರತಿಪಾದನೆಯೊಂದಿಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವೃತ್ತಿಶೀಲತೆಯನ್ನು ನಿರಾಕರಿಸಿ ದುಡಿಯುವ ವರ್ಗದ ಮಹತ್ವವನ್ನೇ ಕಡೆಗಣಿಸುವ ಮೂಲಕ ಅವರೆಲ್ಲ ಅಸಹಾಯಕರಾಗಿ ಬದುಕುವಂತೆ ಮಾಡುವ ಹುನ್ನಾರವನ್ನು ಪ್ರಸನ್ನ ಅವರು ಬಯಲಿಗೆಳೆದಿದ್ದಾರೆ. ಬಹುಶಃ ಕನ್ನಡದಲ್ಲಿ ಬಸವಣ್ಣನವರ ನಂತರ ಇಷ್ಟು ತೀಕ್ಷ್ಣವಾಗಿ ಈ ಷಡ್ಯಂತ್ರವನ್ನು ಗುರುತಿಸಿದವರೆಂದರೆ ಪ್ರಸನ್ನ ಅವರೇ ಇರಬೇಕು.

ವೇದಶಾಸ್ತ್ರ ಆಗಮಂಗಳನೋದಿದವರು
ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ
ಡೊಂಬನೇನು ಕಿರಿಯನೆ?
ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರಧರ್ಮ ಕೂಡಲಸಂಗನ ಶರಣರು
ಸಾಧಿಸಿದ ಹಿರಿಯತನ.


ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ಸದಾ ಶೋಷಣೆಗೆ ಒಳಗಾಗುವ ದುಡಿಯುವ ವರ್ಗ ತನ್ನ ದುಡಿಮೆಯ ಮೂಲಕ ಈ ಭೂಮಿಯನ್ನು ಹೆಚ್ಚು ಹೆಚ್ಚು ಸುಂದರಗೊಳಿಸುವಲ್ಲಿ ತಲ್ಲೀನವಾಗಿದೆ. ಮಾನವರೆಲ್ಲ ಸಕಲ ಸೌಲಭ್ಯಗಳೊಂದಿಗೆ ಬದುಕುವಂಥ ವ್ಯವಸ್ಥೆ ಮಾಡುವಲ್ಲಿ ಕಾಯಕಜೀವಿಗಳ ಪಾತ್ರ ಹಿರಿದಾಗಿದೆ. ಆದರೆ ವೃತ್ತಿಶೀಲತೆಯಿಂದ ಪಡೆದುಕೊಂಡ ಅವರ ಸೃಜನಶೀಲತೆಗೆ ಮಾತ್ರ ಬೆಲೆ ಇಲ್ಲವಾಗಿದೆ. ದುಡಿಮೆಯ ಅನುಭವದಿಂದ ಪಡೆದ ಜ್ಞಾನವು ವೃತ್ತಿಶೀಲತೆಯನ್ನು ರೂಪಿಸುತ್ತದೆ. ಅದುವೆ ಸತತ ಕ್ರಿಯಾಶೀಲತೆಯಿಂದಾಗಿ ಸೃಜನಶೀಲವಾದಾಗಲೇ ಜಗತ್ತಿನ ಎಲ್ಲ ಉತ್ಪಾದನೆಗಳು ಗೋಚರಿಸತೊಡಗುತ್ತವೆ. ಜಗತ್ತಿನ ಎಲ್ಲ ಅದ್ಭುತಗಳು ದುಡಿಯುವ ವರ್ಗದ ಸೃಜನಶೀಲತೆಯ ಉತ್ಪನ್ನಗಳಾಗಿವೆ. ಮೈಸೂರು ಅರಮನೆಯಲ್ಲಿನ ದುಡಿಯುವ ವರ್ಗದ ಸೃಜನಶೀಲತೆಯನ್ನು ಕಳೆದರೆ ಕಲ್ಲು ಮಣ್ಣು ಕಟ್ಟಿಗೆ ಇಟ್ಟಿಗೆ ಲೋಹಗಳು ಮಾತ್ರ ಉಳಿಯುತ್ತವೆ!

ಜ್ಞಾನವನ್ನು ಕ್ರಿಯೆಗೆ ಇಳಿಸುವವರಿಗಿಂತ ಜ್ಞಾನದ ಕುರಿತು ಮಾತನಾಡುವವರೇ ಈ ಸಮಾಜದಲ್ಲಿ ಸಕಲ ಸೌಲಭ್ಯಗಳನ್ನು ಪಡೆಯುತ್ತಾರೆ. ಸೂಕ್ಷ್ಮ ಮತಿಗಳಾದ ಬಸವಣ್ಣನವರು ಈ ಬೌದ್ಧಿಕ ಮತ್ತು ದೈಹಿಕ ತಾರತಮ್ಯವನ್ನು ಗಮನಿಸಿದರು. ಹೊಟ್ಟೆಪಾಡಿಗಾಗಿ ಬೀದಿಯಲ್ಲಿ ಅದ್ಭುತವಾಗಿ ನರ್ತಿಸುತ್ತ ಜನಮನವನ್ನು ಸೂರೆಗೊಳ್ಳುವ ನರ್ತಕಿ, ಬಾಣವನ್ನು ಪ್ರಯೋಗಿಸುವ ಗುರಿಕಾರ, ವಾಕ್ಚಾತುರ್ಯದಿಂದ ಜನರನ್ನು ನಗೆಗಡಲಲ್ಲಿ ಮುಳುಗಿಸುವ ಹಾಸ್ಯಗಾರ ಮತ್ತು ದೈಹಿಕ ಕಸರತ್ತಿನೊಂದಿಗೆ ಜಾಣ್ಮೆಯನ್ನು ಪ್ರದರ್ಶಿಸುತ್ತ ಬದುಕಿನ ಸಮತೋಲನ ತತ್ತ್ವವನ್ನು ಸಾರುವ ಡೊಂಬ ಅದು ಹೇಗೆ ಕಿರಿಯರಾಗುತ್ತಾರೆ ಎಂಬುದು ಬಸವಣ್ಣನವರ ಸವಾಲಾಗಿದೆ.

ವೇದಾಗಮಗಳನ್ನು ಓದಿದವರು ಅದು ಹೇಗೆ ದೊಡ್ಡವರಾಗುತ್ತಾರೆ? ಕವಿಗಳು, ಗಮಕಿಗಳು, ವೇದ, ಪುರಾಣ ಮತ್ತು ಮಹಾಕಾವ್ಯಗಳ ವ್ಯಾಖ್ಯಾನಕಾರರು ಮತ್ತು ಮಾತಿನ ಚಾತುರ್ಯದಿಂದಲೇ ಬದುಕುವ ವಾಕ್ಪಟುಗಳು ಅದು ಹೇಗೆ ದೊಡ್ಡವರಾಗುತ್ತಾರೆ? ಎಂಬುವು ಬಸವಣ್ಣನವರು ಸಮಾಜದ ಮುಂದೆ ಇಟ್ಟ ಪ್ರಶ್ನೆಗಳಾಗಿವೆ.

ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವ ಕಾಲ ಇದಾಗಿದೆ. ಜನಸಮುದಾಯವನ್ನು ಮರಳುಗೊಳಿಸುವ ಮಾತುಗಳನ್ನೇ ನಂಬಿ ಒಳ್ಳೆಯದಿನಗಳ ಭ್ರಮೆಯಲ್ಲಿ ಜೀವ ಹಿಡಿದುಕೊಂಡು ಕುಳಿತರೆ ಸಾಮ್ರಾಜ್ಯಶಾಹಿ ದೇಶಗಳ ಸುಲಿಗೆಯ ಸೃಜನಶೀಲತೆ ನಮ್ಮ ವೃತ್ತಿಶೀಲತೆಯನ್ನು ಮತ್ತು ಆ ಮೂಲಕ ಹೊರಹೊಮ್ಮುವ ಸೃಜನಶೀಲತೆಯನ್ನು ಕಾಲ ಕಸವಾಗಿಸುವ ದಿನಗಳು ದೂರವಿಲ್ಲ.



● ರಂಜಾನ್ ದರ್ಗಾ



ಸಗಣಿ ಸ್ವಾಮಿಯ ಕಾಮ ಕಥಾ!!



"ಇದು ತಪ್ಪೇನಲ್ಲ... ಗುರುಪೀಠಕ್ಕೆ ನಿನ್ನನ್ನು ಸಮರ್ಪಿಸಿಕೊಳ್ಳಬೇಕಾದ ಕರ್ತವ್ಯವಿದೆ... ಇದರಿಂದ ರಾಮನಿಗೆ ಖುಷಿಯಾಗುತ್ತದೆ...." ಎಂದು ಪ್ರೇಮಲತಾರನ್ನು ಮರಳು ಮಾಡಿ ಮಿಲನೋತ್ಸವ ಮುಗಿಸುತ್ತಾನೆ. ಸ್ವಾಹಾ ಮುಗಿದ ಬಳಿಕ "... ಈ ಪವಿತ್ರ ಕಾರ್ಯ ನಿನ್ನಿಂದಲೇ ಆಗಬೇಕಿತ್ತು... ಅದಕ್ಕೆಂದೇ ರಾಮ ನಿನ್ನ ಆಯ್ಕೆ ಮಾಡಿದ್ದಾನೆ... ನಿನ್ನ ಹಾಗೆ ಭಕ್ತಿಯಿಂದ ಬರುವ ಎಷ್ಟೋ ಶಿಷ್ಯೆಯರಿದ್ದಾರೆ... ಆದರೆ ಈ ಅವಕಾಶ ನಿನಗೆ ಮಾತ್ರ ಲಭ್ಯವಾಗಿದೆ..." ಎಂದು ಹೇಳುತ್ತ ಆಕೆಯನ್ನು ತಂದು ರಾಮನ ವಿಗ್ರಹದ ಮುಂದೆ ನಿಲ್ಲಿಸುತ್ತಾನೆ. ಈ ಮಿಲನ ಯಾರಿಗೂ ಹೇಳಬಾರದು. ಹೇಳಿದರೆ ರಾಮನ ಶಾಪ ನಿನಗೂ-ನಿನ್ನ ಕುಟುಂಬಕ್ಕೂ ಕಾಡುತ್ತದೆ ಎಂದು ಹೆಂಗಸರ ಕೌಟುಂಬಿಕ ವಾತ್ಸಲ್ಯದ ದೌರ್ಬಲ್ಯದ ದುರ್ಲಾಭ ಪಡೆಯುವ ಟ್ರಿಕ್ಕು ಮಾಡುತ್ತಾನೆ ಈ ಮೂರನೇ ದರ್ಜೆ ಅತ್ಯಾಚಾರಿ. ಹೀಗೆ ರಾಮನ ಮೇಲೆ ಆಣೆ ಮಾಡಿದ ಜೋಧಪುರದಲ್ಲಿದ್ದ ನಾಲ್ಕೂದಿನ ಜುಮ್ಮ-ಜಕ್ಕ ನಡೆಸುತ್ತಾನೆ ಈ ಗೂಳಿ ಸಾಧು.


ರಾಮ ಕಥಾ. ಹರೆಯ ಹೆಂಗಸರಿಗೂ ಧರ್ಮದ ಮೇನಿಯಾ ಹಿಡಿಸಿ ಕುಣಿಸಿ ಖುಷಿಗೊಳ್ಳುವ ರಾಘವ ಸ್ವಾಮಿ. ಒಟ್ಟಿನಲ್ಲಿ ಇದು ಧಾರ್ಮಿಕ ಕಾರ್ಯಕ್ರಮವೋ? ಅಥವಾ ಲೌಕಿಕ ಮೋಜು-ಮಸ್ತಿಯೋ? ಎಂಬುದೇ ಜನರಿಗೆ ಅರ್ಥವಾಗದೇ ದಿಗಿಲು ಬಿದ್ದಿದ್ದಾರೆ.

ಈ ಕೋಟ್ಯಂತರ ದುಡ್ಡು ಚೌಕಗ್ರಾಮ (ಮಾಡಗೇರಿ-ನವಿಲುಗೋಣ-ಕಡತೋಕಾ ಮತ್ತು ಕೆಕ್ಕಾರ)ದ ಬಡ ಹೈಗರ ಹೈರಾಣದ ಬದುಕಿಗೆ ನೆರವಾಗುವಂತೆ ಸ್ವಾಮಿ ಬಳಸಬಹುದಿತ್ತು. ಈ ಹಳ್ಳಿಗಳಲ್ಲಿ ರಸ್ತೆ-ವಿದ್ಯುತ್-ಶಿಕ್ಷಣ-ಸಾರಿಗೆ ಯಾವುದೂ ಸುಸೂತ್ರವಾಗಿಲ್ಲ. ಇತರ ಜಾತಿಯ ಜನರು ಬಿಡಿ, ರಾಘವನ ಮಠದ ಅನುಯಾಯಿಗಳಾದ ಹವ್ಯಕ ತೋಟಿಗರೇ ನೀರಾವರಿಗೆ ಸರಿಯಾದ ವಿದ್ಯುತ್ ವ್ಯವಸ್ಥೆಯಿಲ್ಲದೆ ಒದ್ದಾಡುತ್ತಿದ್ದಾರೆ. ಘಳಿಗೆಗೊಮ್ಮೆ ವಿದ್ಯುತ್ ಕೈಕೊಡುತ್ತಿದೆ. ಟ್ರಾನ್ಸ್‌ಫರ್ಮ್‌ಗಳು ಸುಟ್ಟು ಹೋಗುತ್ತಿವೆ.

ಸಮಸ್ತ ಹವ್ಯಕ ಬ್ರಾಹ್ಮಣ ಸಮುದಾಯ ನಾಚಿಕೆ-ಅವಮಾನ-ಅಸಹ್ಯದಿಂದ ತಲೆತಗ್ಗಿಸಿ ನಿಂತಿದೆ! ತಮ್ಮ ಪರಮ ಪೂಜ್ಯ ರಾಮಚಂದ್ರಾಪುರ ಮಠಕ್ಕೆ ತೊಡಿಸಿರುವ ಕಾವಿಯೊಳಗೆ ಅಸಹಾಯಕ ಮಾನಿನಿಯರ ಮಾನದ ಮಾರಣ ಹೋಮ ಮತ್ತು ನರಬಲಿ ನಡೆದಿರುವುದು ಕಂಡು-ಕೇಳಿ ಈ ಬ್ರಾಹ್ಮಣ ಬಳಗ ಬೆಚ್ಚಿ ಬಿದ್ದಿದೆ!! ಗುರು ಪೀಠಾಧಿಪತಿ ರಾಘವೇಶ್ವರ ಭಾರತಿಯ ರಗಳೆ-ರಾದ್ಧಾಂತ-ರಂಗೀಲಾ ದಿನಕ್ಕೊಂದರಂತೆ ಎದ್ದೆದ್ದು ಬಂದು ಎದೆಗೆ ಬಡಿಯುತ್ತಿರುವುದರಿಂದ ಈ 'ಜಾಣ ಜಾತಿ' ಅನುಭವಿಸುತ್ತಿರುವ ಮುಜುಗರ ಹೇಳತೀರದು. ಮಠಾಧಿಪತಿಯಾಗಿ ತಾವು ಪ್ರತಿಷ್ಠಾಪಿಸಿಕೊಂಡಿರುವುದು ಪಕ್ಕಾ ಬೀದಿ ಬಸವ ಎಂಬುದು ಖಾತ್ರಿಯಾಗುತ್ತಿರುವಂತೆಯೇ ರಾಮಚಂದ್ರಾಪುರ ಮಠದ ಅನುಯಾಯಿಗಳು ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ!

ಚಪಲ ಚಾತುರ್ಮಾಸ್ಯ

ರಗಳೆ ರಾಘವ ಈ ಬಾರಿ ಚಾತುರ್ಮಾಸ್ಯ ವ್ರತಕ್ಕೆ ಕುಂತಿರುವುದು ಹೊನ್ನಾವರದ ಕೆಕ್ಕಾರ ಎಂಬ ಗ್ರಾಮದ ಶಾಖಾಮಠದಲ್ಲಿ. ಕೋಟಿ-ಕೋಟಿಯ ಈ ಎರಡು ತಿಂಗಳ ಚಾತುರ್ಮಾಸದಲ್ಲಿ ರಾಘವ ಪಕ್ಕಾ ಧಾರ್ಮಿಕ ಪುಢಾರಿಯಂತೆ ಪೋಸು ಕೊಡುತ್ತಿದ್ದಾನೆ. ದಿನಕ್ಕೊಂದು ರೀತಿಯ ಭೂರಿಭೋಜನ; ದಿನಕ್ಕೊಂದು ಧ(ಕ)ರ್ಮ ಸಭೆ, ತಾಸಿಗೊಂದು ವಿವಿಧ ವಿನೋದಾವಳಿ. ಎರಡು ಕಂತಿನ



ರಾಘವನ ಕರ್ಮಕಾಂಡ!

ಕಾವಿ ತೊಟ್ಟುಕೊಂಡು ಗುರುಪೀಠ ಏರುವವನು ಹೆಣ್ಣು-ಹೊನ್ನು-ಮಣ್ಣಿನ ಸಹವಾಸದಿಂದ ದೂರವಿರಬೇಕೆಂಬುದು ಸನ್ಯಾಸತ್ವದ ಪ್ರಾಥಮಿಕ ನಿಬಂಧನೆ. ಆದರೆ ರಸಿಕ ಸ್ವಾಮಿ ರಾಘವೇಶ್ವರ ಭಾರತಿ ಈ ತ್ರಿವಿಧ ವ್ಯಾಮೋಹಗಳ ಮೇಲೆಯೇ ತನ್ನ ರಾಮಚಂದ್ರಾಪುರ ಮಠದ ಸಾಮ್ರಾಜ್ಯ ವಿಸ್ತರಿಸುತ್ತಿದ್ದಾನೆ. ಕುರಿ ಸಿಗಿದು ಯಜ್ಞಕುಂಡಕ್ಕೆ ಹಾಕಿ ಯಾಗ ಮಾಡಿದಾಗ ಬುರ್ನಾಸ್ ಸುದ್ದಿ ಶೂರನಾದ ರಾಘವನ ತೆವಲು-ತೀಟೆಗಳು ಜಗಜ್ಜಾಹೀರಾದದ್ದು ಬಾಲಿವುಡ್ ಬಿಚ್ಚಮ್ಮ ಮಲ್ಲಿಕಾ ಶರಾವತ್‌ಳ ಪಕ್ಕವೇ ಕೂತು ಸಾರ್ವಜನಿಕವಾಗಿ ಲಲ್ಲೆಗರೆದಾಗ!

ಗೋಕರ್ಣದ ಅಪಾರ ಚರ-ಸ್ಥಿರ ಸಂಪತ್ತಿನ ಮಹಾಬಲೇಶ್ವರ ದೇವಾಲಯವನ್ನು



ಅಂದು ಸಿಎಂ ಆಗಿದ್ದ ಯಡ್ಡಿ ಮಹಾತ್ಮನ ಕೃಪೆಯಿಂದ ಜೋಳಿಗೆ ಇಳಿಸಿಕೊಂಡಾಗ ಶುರುವಾದ ರಾಘವನ ರಗಳೆಗಳು ಪುಂಖಾನುಪುಂಖವಾಗಿ ಇವತ್ತಿಗೂ ನಡೆಯುತ್ತಲೇ ಇದೆ. ಸೆಕ್ಸ್ ಸಿಡಿಯಿಂದಲೂ ಈತನ ಮಹಿಮೆ ಹೆಚ್ಚಾಯ್ತು. ಮಠ ಉದ್ಧಾರ ಮಾಡುವ ನೆಪದಲ್ಲಿ ಕಾಡು ಲೂಟಿ ಮಾಡಿದ. ಗೋ ಸಮ್ಮೇಳನದ ಹೆಸರಲ್ಲಿ ದರೋಡೆ ಮಾಡಿದ. ಈತನ ಭಾವ ಜಗದೀಶ್ ಶರ್ಮಾ ತನ್ನ ಶಾಲೆಯ ಅಮಾಯಕ ವಿದ್ಯಾರ್ಥಿನಿಯರನ್ನು ಹಸಿ-ಹಸಿಯಾಗೇ ಮುಕ್ಕುತ್ತಿರುವುದು ದೊಡ್ಡ ಭಾನಗಡಿಯಾಯ್ತು. ಈತನ ಪರಿವಾರದವರೇ ಮಹಾಬಲೇಶ್ವರನ ಹುಂಡಿ ಕದ್ದಾಗ ವರ್ಷಗಟ್ಟಲೆ ತನಿಖೆಯೇ ಆಗದೆ ಪುಟಗೋಸಿ ಕಳ್ಳನೊಬ್ಬನನ್ನು ಈಗ ಈ ಕೇಸಲ್ಲಿ ಫಿಕ್ಸ್ ಮಾಡಲಾಗಿದೆ.

ರಾಮಚಂದ್ರಾಪುರ ಮಠ ಮತ್ತದರ ಶಾಖಾ ಮಠಗಳು ಹಾಗೂ ಇನ್ನಿತರ ಮಠ ಸಂಬಂಧಿ ಸಂಸ್ಥೆಗಳಲ್ಲಿ ಕಾಮಕಾಂಡ ನಡೆಯುತ್ತಿರುವ ಸುದ್ದಿ ಆಗಾಗ ಬಿತ್ತರವಾಗುತ್ತಲೇ ಇದೆ. 2009 ರಲ್ಲಿ ಉತ್ತರ ಕರ್ನಾಟಕದಲ್ಲಾದ ನೆರೆ ಹಾವಳಿಯಿಂದ ನೊಂದವರಿಗೆ ಮನೆ ಕಟ್ಟಿಕೊಡುತ್ತೇನೆಂದು ಹೊರಟ ರಾಘವ ಹುಬ್ಬಳ್ಳಿಯಲ್ಲೊಂದು ಭರ್ಜರಿ "ರಾಗ ಸಂಗಮ" ಏರ್ಪಡಿಸಿದ್ದ ನಟ ವಿಷ್ಣುವರ್ಧನ್‌ರಂಥವರನ್ನು ಕರೆಸಿದ್ದ ರಾಘು ಕೋಟಿ-ಕೋಟಿ ಕೂಡಿಸಿದನೇ ವಿನಃ ಒಂದೇ ಒಂದು ಮನೆಯನ್ನು ನೊಂದವರಿಗೆ ಕಟ್ಟಿಸಿ ಕೊಡಲಿಲ್ಲ. ಗೋತಳಿ ಉಳಿಸಿ ಬೆಳೆಸುತ್ತೇನೆಂದು ನಬಾರ್ಡ್‌ನಿಂದ 60 ಕೋಟಿ ತರಿಸಿಕೊಂಡು ತಿಂದಿದ್ದಾನೆ. ವಿದೇಶದಿಂದ ಹಣ ತರಿಸಿಕೊಂಡ ಈತನ "ಧರ್ಮಚಕ್ರ" ಟ್ರಸ್ಟ್ ಈಗ ಬ್ಲಾಕ್-ಲಿಸ್ಟ್‌ನಲ್ಲಿದೆ. ತನಿಖೆಗೆ ಈಡಾಗಿದೆ. ಹಾಗೆ- ಹೀಗೆಂದು ರಾಘವನ ಮಠದಲ್ಲಿ 300 ರಿಂದ 400 ಕೋಟಿ ಅವ್ಯವಹಾರವಾಗಿರುವ ಒಂದು ಅಂದಾಜಿದೆ!

ಅಧಿಕಾರಸ್ಥರ ಹಿಡಿದು ತನ್ನ ವಿರುದ್ಧದ ಕೇಸುಗಳನ್ನೆಲ್ಲ ಖುಲಾಯಿಸುತ್ತಿರುವ ರಗಳೆ ರಾಘವ ತನ್ನ ಎದುರಾಳಿ ಗೋಕರ್ಣ ಹಿತರಕ್ಷಣಾ ಸಮಿತಿಯವರಿಗೆ ಪೊಲೀಸರಿಂದ-ಅಧಿಕಾರಿಗಳಿಂದ ತೋಳ್ಬಲದ ಸ್ಥಳೀಯ ಗೂಂಡಾಗಳಿಂದ ಕೊಡುತ್ತಿರುವ ಹಿಂಸೆ ಹೇಳತೀರದು. ರಾಘವನ ಸುತ್ತಲೀಗ ದೋ ನಂಬರ್ ದಂಧೆದಾರರು, ರೌಡಿಗಳೇ ಠಳಾಯಿಸುತ್ತಿದ್ದಾರೆ. ಈತನ ಕರ್ಮಕಾಂಡ-ಕಾಮಕಾಂಡಕ್ಕೆ ಕಡಿವಾಣ ಹಾಕುವ ತಾಕತ್ತು ಸಿದ್ದು ಸರ್ಕಾರಕ್ಕೆ ಇದೆಯಾ?

ಕಾಡಲ್ಲಿ ಹಾದುಬಂದಿರುವ ವಿದ್ಯುತ್ ಲೈನ್ ಎಲ್ಲೆಲ್ಲೋ ಡ್ರಾಪ್ ಆಗುತ್ತಿವೆ. ಹಳ್ಳಿಗಳು ವಾರಗಟ್ಟಲೆ ಕತ್ತಲಲ್ಲಿ ಕಳೆಯುತ್ತಿವೆ. ವಿದ್ಯಾರ್ಥಿಗಳಿಗೆ ಸರಿಯಾದ ಬಸ್ ವ್ಯವಸ್ಥೆಯಿಲ್ಲ ಸಂಕ-ದಾರಿಗಳಿಲ್ಲದ ಏರಿಯಾಗಳದೆಷ್ಟೋ ಇದೆ. ಇದೆ ಸರಿಪಡಿಸಲು ರಾಘವ ತನ್ನ ಕಾವಿ ಖದರು ಬಳಸಿದ ಅಜರಾಮರನಾಗುತ್ತಿದ್ದ. ಇಂಥ ರಚನಾತ್ಮಕ ಕೆಲಸ ಬಿಟ್ಟು ಆತ ದಿನಕ್ಕೊಂದು ಶೂದ್ರ ಜಾತಿಗಳಿಂದ ಪಾದಪೂಜೆ (ಮುಟ್ಟಿಸಿಕೊಳ್ಳದೆ) ಮಾಡಿಸಿಕೊಂಡು ಹುಂಡಿ ತುಂಬಿಸಿ ಕೊಳ್ಳುತ್ತಿದ್ದಾನೆ. ಧಾರ್ಮಿಕ ರಾಜಕೀಯ ಮಾಡುತ್ತಿದ್ದಾನೆ

ರಾಘವನ ಚಾತುರ್ಮಾಸ್ಯದ ಸ್ಕೆಚ್ ಏನೇ ಇರಲಿ ಆರಂಭದ ದಿನದಿಂದಲೂ ಈ ವ್ರತ ಅದ್ಯಾಕೋ ಅನೈತಿಕತೆಯ ಗಬ್ಬು ಹೊರಸೂಸತೊಡಗಿತ್ತು. ಕುದುರೆ ಸಾರೋಟಿನ ಮೇಲೆ ಪುರ ಪ್ರವೇಶ ಮಾಡಿದ್ದ ಈ ಅಭಿನವಶ್ರೀ ರಾಮಚಂದ್ರ "ಸೀತೆ" ಬಿಟ್ಟುಬಂದಿದ್ದಾನೆಂದು ಭಕ್ತಾದಿಗಳು ಗುಸಗುಸತೊಡಗಿದ್ದರು. ಈ ಬಾರಿ ಸ್ವಾಮಿ ಪರಿವಾರದಲ್ಲಿ 'ರಾಮಕಥಾ'ದ ಮುಖ್ಯ ಹಾಡುಗಾತಿ ಪ್ರೇಮಲತಾ ಶಾಸ್ತ್ರಿ ಇರಲಿಲ್ಲ. ಗುರುಗಳ ಪರಮಾಪ್ತೆ 'ಲತಾ' ಕಾಣದಿದ್ದಾಗಲೇ ಜನರಿಗೆ ಅರ್ಥವಾಗಿತ್ತು- ಸ್ವಾಮಿ 'ಸಂಬಂಧ'ದಲ್ಲಿ ಏನೋ ಎಡವಟ್ಟಾಗಿದೆ ಎಂದು. ಇದ ಮಠದ ವ್ಯವಸ್ಥೆ ಕೊಡುತ್ತಿದ್ದ ಸಮಜಾಯಿಷಿ- "ಈ ಬಾ ಸ್ಥಳೀಯ ಕಲಾವಿದರಿಗೆ ಪ್ರಾಶಸ್ತ್ಯ"

ಬೋಗಸ್ ಬ್ಲಾಕ್‌ಮೇಲ್

ಅಂತೂ ಚಾತುರ್ಮಾಸ್ಯ ವ್ರತ ಅಂತಿಮ ಹಂತ

...ಗಳೆ ರಾಘವನ ಪೀಠಕ್ಕೆ ನರಬಲಿ!

...ಬಲ-ದೇವರ ಭೀತಿ-ಗುರುಪೀಠದ ಶಾಪ ಬಲ ಬಳಸಿ ತಮ್ಮ ...ನ ಮುಗ್ಧ ಹೆಂಗಸನ್ನು ರಾಮಚಂದ್ರಾಪುರ ಮಠಾಧೀಶ ರಗಳೆ ...ರ್ಬಳಕೆ ಮಾಡಿಕೊಂಡ ಬಗ್ಗೆ ಪುತ್ತೂರಿನ ಕೆದಿಲದ ಹೆಸರಾಂತ ...ಶಾಸ್ತ್ರಿ ಮನೆತನದಲ್ಲಿ ದೊಡ್ಡ ಮಟ್ಟದ ಆಕ್ರೋಶ ...ದೆ! ಹೊನ್ನಾವರದ ಕೆಕ್ಕಾರ ಎಂಬಲ್ಲಿ ಚಾತುರ್ಮಾಸ್ಯಕ್ಕೆ ...ವ ರಾಘವನಿಗೆ ಈ ಬಗ್ಗೆ ತರಾಟೆಗೆ ತೆಗೆದುಕೊಂಡ ...ವಾರದವರು ನೇರ ಮುಖಕ್ಕೆ ಉಗಿದೂ ಬಂದಿದ್ದರು. ... ಹಾಕುವ ಮಾತೂ ಹೇಳಿದ್ದರು.

...ಂದ ಬೆದರಿದ ರಾಘವ ಮತ್ತವನ ಬಳಗ ಗಾಯಕಿ ... ಮತ್ತಾಕೆಯ ಗಂಡ ದಿವಾಕರ ಮತ್ತು ನಾರಾಯಣ ...ಮೇಲೆ ಸುಳ್ಳು ಬ್ಲಾಕ್‌ಮೇಲ್ ಕೇಸ್ ಹಾಕಿಸಿ ...ಹಾಕಿಸಿಬಿಟ್ಟಿತು. ಇದರಿಂದ ಕೆರಳಿದ ದಿವಾಕರ ...ತಮ್ಮ ಶ್ಯಾಮ ಶಾಸ್ತ್ರಿ "ಏಕಾಂತ ದರ್ಶನ" ಎಂಬ ... ಕಾಮಕಥಾ ಹಂದರ ಬಿಚ್ಚಿಬಿಟ್ಟಿದ್ದರು. ತನ್ನ ಅಣ್ಣನ ...ನ್ನು ರಾಘವ ಅತ್ಯಾಚಾರ ಮಾಡಿದ್ದಾನೆಂದು ...


ಶ್ಯಾಮ ಶಾಸ್ತ್ರಿ

...ಶಾಸ್ತ್ರಿ ಸಜ್ಜನ ಕೃಷಿಕ. ರಾಮಚಂದ್ರಾಪುರ ಮಠದ ...ಯಾಯಿ. ಒಂದು ಚಾತುರ್ಮಾಸ್ಯವಂತೂ ಆತನ ...ದಲ್ಲೇ ಅದ್ದೂರಿಯಾಗಿ ನಡೆದಿತ್ತು. ಇಂಥ ಶ್ಯಾಮ ಶಾಸ್ತ್ರಿ ರಾಘವನ ...ಕತನ ಕಂಡು ತಿರುಗಿಬಿದ್ದಿದ್ದರು. ಇದರಿಂದ ಕಂಗಾಲಾದ ರಾಘವ ... ಆತನನ್ನು ಪಳಗಿಸಲು ಸಾಮ-ಭೇದ-ದಂಡ ಪ್ರಯೋಗಕ್ಕೆ ಸ್ಕೆಚ್ ...ಲಾರಂಭಿಸಿತ್ತು. ಆತನಿಗೆ ಸ್ವಾಮಿ ಹಿಂಬಾಲಕರಿಂದ ಬೆದರಿಕೆ ಫೋನ್ ... ಬರಲಾರಂಭಿಸಿತ್ತು. ಬ್ರಾಹ್ಮಣ ಸಮುದಾಯದಿಂದ ಸಾಮಾಜಿಕ ...ನಿನ್ನ ಕುಟುಂಬಕ್ಕೆ ಹಾಕಲಾಗುವುದೆಂಬ ಸಂದೇಶ ಕಳಿಸಲಾಗಿತ್ತು. ...ಗೆ ಶರಣಾಗಿ ಕ್ಷಮೆ ಕೇಳಬೇಕು ಮತ್ತು ಅಣ್ಣ-ಅತ್ತಿಗೆಯರಿಗೆ ಯಾವ ... ನೆರವಾಗಬಾರದೆಂಬ ಒತ್ತಡ ಹವ್ಯಕ ಸಮಾಜದಿಂದ ಆತನಿಗೆ ...ಗಿತ್ತು.

...ಡೆ ಅಣ್ಣ-ಅತ್ತಿಗೆ ಸುಖಾಸುಮ್ಮನೆ ಜೈಲುಪಾಲಾಗಿದ್ದಾರೆ. ಕುಟುಂಬದ ...ಬಿದ ಗುರುವಿನಿಂದಲೇ ಬೀದಿ ಪಾಲಾಗಿದೆ. ಕುಟುಂಬದ ಸೊಸೆ ...ತಿ ಸ್ವಾಮಿಯೇ ನಿರಂತರವಾಗಿ ಅತ್ಯಾಚಾರ ಮಾಡಿದ್ದಾನೆ. ನೊಂದ ...ಬ್ಲಾಕ್‌ಮೇಲರಗಳೆಂಬ ಪಟ್ಟ ಕಟ್ಟಲಾಗುತ್ತಿದೆ. ಸಹಾಯಕ್ಕೆ-ನ್ಯಾಯ ...ಕ್ಕೆ ಜಾತಿ ಬಂಧುಗಳಾರೂ ಬರದೇ ಕಳ್ಳ ಸ್ವಾಮೀ ಪರವೇ ನಿಂತು ...ರೆ. ಇಂಥ ಸನ್ನಿವೇಶದಲ್ಲಿ ಅಸಹಾಯಕರಾಗಿದ್ದ ಶ್ಯಾಮ ಶಾಸ್ತ್ರಿಗೆ ...ಮಠಕ್ಕೆ ಹೋಗಿ ರಾಘುಸ್ವಾಮಿ ಪಾದಕ್ಕೆ ಬೀಳುವಂತೆ ಮಾನಸಿಕ ...ಬರತೊಡಗಿತ್ತು.

...ಊ "ರಾಜಿ" ಪಂಚಾಯ್ತಿಗೆ "ಕೋಕೊ ಗುರು ಎಣ್ಣೆ" ಉದ್ಯಮಿಯೂ, ...ಸ್ವಾಮಿಯ ಪರಮಾಪ್ತ ಹಣವಂತ ಹವ್ಯಕನೂ ಆಗಿರುವ ಪುತ್ತೂರಿನ ಶಿವಶಂಕರ ಭಟ್ ಮುಂದಾಗಿದ್ದರು. 31.8.2014 ರಂದು ಮಧ್ಯಾಹ್ನ 2 ರ ಹೊತ್ತಿಗೆ ಹೊನ್ನಾವರಕ್ಕೆ ತನ್ನೊಡನೆ ಹೊರಡುವಂತೆ ಶ್ಯಾಮ ಶಾಸ್ತ್ರಿಗೆ ಭಟ್ ಹೇಳಿದ್ದರು. ಆತ ಅರೆಮನಸ್ಸಿನಿಂದ ರೆಡಿಯಾಗಿದ್ದರು. ಆದರೆ ಅಂದು ಸಂಘ ಪರಿವಾರದ ಕರಾವಳಿ ಡಾನ್ ಡಾ. ಕಲ್ಲಡ್ಕ ಪ್ರಭಾಕರ ಭಟ್ "ನೀನು ಸ್ವಾಮಿಗೆ ಶರಣಾಗದಿದ್ದರೆ ಮುಗಿಸುವ ಬೆದರಿಕೆ" ಹಾಕಿದ್ದನೆಂಬ ಊಹಾಪೋಹ ಈಗ ಎದ್ದಿದೆ. ಆ ಕರೆಯ ನಂತರ ಶ್ಯಾಮ ಶಾಸ್ತ್ರಿ ದಿಕ್ಕು ತೋಚದಂತಾಗಿದ್ದರು. ಗೂಳಿ ಸ್ವಾಮಿ ಹಿಂಬಾಲಕರಂತೂ ಕಾಡುತ್ತಲೇ ಇದ್ದರು.

ಇದರಿಂದ ನೊಂದ ಶ್ಯಾಮ ಶಾಸ್ತ್ರಿ ಮೊದಲೇ ಒಂದು ಡೆತ್‌ನೋಟ್ ರೆಡಿ ಮಾಡಿಟ್ಟುಕೊಂಡು ಊಟಕ್ಕೆ ಕುಂತಿದ್ದರು. ಇದ್ದಕ್ಕಿದ್ದಂತೆ ಊಟ ತಟ್ಟೆಯಿಂದ ಎದ್ದವರೇ ಒಳಕೋಣೆಗೆ ಹೋಗಿ ನಾಡ ಕೋವಿಯಿಂದ ಗುಂಡು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಇದು ರಾಮಚಂದ್ರಾಪುರ ಮಠದ ಕಾಮ ಕಾಂಡಕ್ಕಾದ ನರಬಲಿ. ನೈತಿಕವಾಗಿ ಇದಕ್ಕೆ ನೇರ ಹೊಣೆ ರಾಘುಸ್ವಾಮಿಯೇ! ಆತನ ಹಿಂಬಾಲಕರು ಗುರುವಿನ ನಿರ್ದೇಶನದಂತೆಯೇ ಶ್ಯಾಮ ಶಾಸ್ತ್ರಿಗೆ ಪೀಡಿಸಿದ್ದು ನಿಸ್ಸಂಶಯ. ತನ್ನ ಹಿಂಬಾಲಕರನ್ನು ನಿಯಂತ್ರಿಸಲಾಗದವ ಅದೆಂಥ ಮಠಾಧೀಶ? ಕ್ರಿಮಿನಲ್ ಪಾತಕಕ್ಕೆ ರಾಘವನೇ ಆಪ್ತ ಅನುಯಾಯಿಗಳಿಗೆ ಸ್ಫೂರ್ತಿ ಸೆಲೆ. ಈಗಾಗಬೇಕಾಗಿರುವುದು ರಗಳೆ ರಾಘವ ಸ್ವಾಮಿಯ ಬಂಧನ. ಈತನೇ ರೇಪ್ ಮತ್ತು ಸೂಸೈಡ್ ಕೇಸ್‌ನ ನಂಬರ್ ಒನ್ ಆರೋಪಿ. ನಿರಪರಾಧಿಗಳನ್ನು ಜೈಲಿಗೆ ಕಳಿಸಿರುವ ಅಸಲಿ ಪಾಪಿ ರಾಘವ!


ಶ್ಯಾಮ ಶಾಸ್ತ್ರಿಯ ಡೆತ್‌ನೋಟ್ ರಾಘುಸ್ವಾಮಿ, ಕಲ್ಲಡ್ಕ ಭಟ್ಟ ಮತ್ತು ಮಠದ ದುರಭಿಮಾನಿಗಳ ಬಣ್ಣ ಬಯಲಾಗಿಸುವುದು ಗ್ಯಾರಂಟಿ. ತನಿಖೆ ಈ ನೆಲದ ಕಾನೂನಿನಂತೆ ನಡೆಯಬೇಕಷ್ಟೇ! ಕಾಮದ ಕೊಳೆ ಮೆತ್ತಿಕೊಂಡಿದ್ದ ರಾಮಚಂದ್ರಾಪುರ ಮಠವೀಗ ನರ ರಕ್ತದ ಕಲೆಯಿಂದ ರಂಗಾಗಿದೆ. ಎಷ್ಟೊತ್ತಿಗೆ ಪೊಲೀಸ್ ದಾಳಿಯಾಗುವುದೋ ಎಂಬ ಭಯದಲ್ಲಿ ರಾಘವ ಪರಿವಾರ ಚಾತುರ್ಮಾಸ ಕಳೆದರೆ ಸಾಕೆಂದು ಚಡಪಡಿಸುತ್ತಿದೆ. ಚಾತುರ್ಮಾಸ್ಯ ಮುಗಿದ ತಕ್ಷಣ ರಾಘು ಸ್ವಾಮಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಹಿಮಾಲಯಕ್ಕೆ ತಪಸ್ಸಿಗೆ ಹೋಗುವ ಊಹಾಪೋಹ ಎದ್ದಿದೆ. ಸ್ವಾಮಿ ಪರಿವಾರದ ಆಪ್ತರು ಪೊಲೀಸರ ಕೈಗೆ ಸಿಗಬಾರದೆಂದು ಕಾವಿ ಕಿತ್ತೆಸೆದು ಜೀನ್ಸ್ ಪ್ಯಾಂಟ್-ಟೀ ಶರ್ಟ್‌ನಲ್ಲಿ ವೇಷ ಬದಲಿಸಿಕೊಂಡಿದ್ದಾರೆ, ಪಾಪ!

ಗಮನಿಸಬೇಕಾದ ಅಂಶವೆಂದರೆ ಪ್ರೇಮಲತಾರ ಜೀವಕ್ಕೂ ಗಂಡಾಂತರ ಕಾದಿದೆ ಎಂಬ ವರ್ತಮಾನ ಮಠದ ಮೂಲದಿಂದ ಬರುತ್ತಿದೆ. ಆಕೆಯನ್ನು ಖತಮ್ ಮಾಡಿದರೆ ರೇಪ್ ಕೇಸ್ ನೈಸರ್ಗಿಕ ಅಂತ್ಯ ಕಾಣುತ್ತದೆಂಬ ಲೆಕ್ಕಾಚಾರ ಸ್ವಾಮಿಯ ಗೂಂಡಾಗಳದು. ಇತ್ತ ಸಂಬಂಧಿಸಿದ ಪೊಲೀಸರ ಗಮನ ಇರಲಿ. ಆ ಹೆಂಗಸಿಗೆ ತೊಂದರೆ ಆಗದಿರಲಿ. ನ್ಯಾಯ ಸಿಗಲಿ.









... ಎನ್ನುವಾಗ ರಾಮಕಥಾ ರಹಸ್ಯ ಬಟಾಬಯಲಾಗಿ ...! ರಾಘವನ ಸನ್ಯಾಸತ್ವಕ್ಕೆ ದೊಡ್ಡ ಮಟ್ಟದ ...ಶ್ ಇಮೇಜು ತಂದುಕೊಟ್ಟದ್ದೇ ರಾಮಕಥಾದ ... ಆಕರ್ಷಣೆಯಾಗಿದ್ದ ಪ್ರೇಮಲತಾ ಶಾಸ್ತ್ರೀಯ ... ಹಾಡುಗಾರಿಕೆಯ ಗಾಯನವಾಗಿತ್ತು. ಇಂಥಾ ...ತಾ ಮತ್ತು ಆಕೆಯ ಪತಿ ದಿವಾಕರಶಾಸ್ತ್ರಿ ಮೂರು ...ಬೇಡಿಕೆಯಿಟ್ಟು ಮಠದ ವ್ಯವಸ್ಥೆಗೆ ಬ್ಲಾಕ್‌ಮೇಲ್ ...ದ್ದಾರೆಂಬ ದೂರೊಂದು 17.08.2014ರಂದು ...ರ ಪೊಲೀಸ್ ಠಾಣೆಯಲ್ಲಿ ದಾಖಲಾಗುತ್ತದೆ. ...ದೂರು ಕೊಟ್ಟಿರುವಾತ ತಾನು ರಾಮಕಥಾದ ...ಜಕನೆಂದು ಹೇಳಿಕೊಂಡಿರುವ ಬಿ.ಆರ್. ...ಬರ್. ವಾಸ್ತವವಾಗಿ ಈ ಉಂಡಾಡಿ ಪುಂಡ ...ರ್ಮಾಸ್ಯ ಪೆಂಡಾಲಿನ ಯಾವ ಗೇಟ್‌ಕೀಪರನೂ ಅಲ್ಲ, ...ಕೊಡುವ ಧೈರ್ಯವಿಲ್ಲದ ಮಠದ ದಂಡಪಿಂಡ ...ರಿ ಭೂಪರು ಈ ಪವಾಣಿಯನ್ನು ...ದಿದ್ದಾರಷ್ಟೇ. ಈ ದೂರಿಗೆ ಸಾಕ್ಷಿಯಾಗಿರುವವರಲ್ಲಿ ... ರಗಳೆ ರಾಘವನ ಹಿತಾಸಕ್ತಿ ರಕ್ಷಣೆಗೆ ಆಗಾಗ ...ಸುತ್ತಿರುವ ಪೊಲೀಸ್ ದೂರುಗಳ ಕಾಯಂ ವಿಟ್ನೆಸ್‌ದಾರರು!

ಇದ್ದಕ್ಕಿದ್ದಂತೆ ಪ್ರೇಮಲತಾ-ದಿವಾಕರ್ ದಂಪತಿಗಳ ಮೇಲೆ ಬ್ಲಾಕ್‌ಮೇಲ್ ದೂರು ದಾಖಲಾಗಲು ಅನೈತಿಕ ಕಾರಣ ಒಂದಿತ್ತು. ರಾಘವನ ಚರ್ಮ ಚಪಲದ ಡಿಂಗ್-ಡಾಂಗ್ ಕಥನ ಪ್ರದರ್ಶನಕ್ಕೆ ಮುಹೂರ್ತದ ಹುಡುಕಾಟ ನಡೆದಿತ್ತು. ಇದು ರಾಘವನಿಗೂ ಗೊತ್ತಾಗಿತ್ತು. ತಾನು ವರ್ಷಾನುಗಟ್ಟಲೆ ದುರ್ಬಳಕೆ ಮಾಡಿಕೊಂಡಿದ್ದ ಗಾಯಕಿ ಪ್ರೇಮಲತಾ ಲೈಂಗಿಕ ಕಿರುಕುಳ ಮತ್ತು ಸತತ ಅತ್ಯಾಚಾರದ ಕೇಸು ದಾಖಲಿಸಲು ರೆಡಿಯಾಗುತ್ತಿದ್ದಾರೆಂಬುದು ರಾಘವನ ನಿದ್ದೆ ಗೆಡಿಸಿಬಿಟ್ಟಿತ್ತು.

ಪ್ರೇಮಲತಾ ಅತ್ಯಾಚಾರದ ಕೇಸು ಜಡಿದು ತನ್ನ ಕಾವಿ ಕಿತ್ತೆಸೆದು ಬೆತ್ತಲಾಗಿ ಭಕ್ತರೆದುರು ನಿಲ್ಲಿಸುವ ಮೊದಲೇ ಆಕೆಯ ಮೇಲೆಯೇ ಬ್ಲಾಕ್‌ಮೇಲ್ ಪ್ರಕರಣ ಹಾಕಿಸಲು ರಾಘವ ರೆಡಿಯಾದ. ಇಂಥದೊಂದು ಸಲಹೆ ಆತನಿಗೆ ಮಠದ ಥಿಂಕ್ ಟ್ಯಾಂಕ್ ನೀಡಿತ್ತು. ಈ ದುಷ್ಟಕೂಟದಲ್ಲಿ ಒಬ್ಬ 'ವಿಖ್ಯಾತ' ಪತ್ರಕರ್ತ, ಒಬ್ಬ ಮಾಜಿ ಪೊಲೀಸಪ್ಪ ಒಬ್ಬ ರಾಜಕಾರಣಿ ಇದ್ದಾರೆ. ಇವರು ಯಾವ ಸರ್ಕಾರ ಬಂದರೂ ರಾಘವನ ವಿರುದ್ಧದ ದೂರು ಉಡಾಯಿಸಿ...ನೊಂದವರನ್ನೇ ಪೊಲೀಸರ ಬಲ ಪ್ರಯೋಗಿಸಿ ಹಣಿಯಬಲ್ಲಂಥವರು. ಈ ಪಾಪಿ ಗ್ಯಾಂಗ್‌ಗೆ ಪ್ರೇಮಲತಾ ಮತ್ತಾಕೆಯ ಗಂಡನ ಮೇಲೆ ಬ್ಲಾಕ್‌ಮೇಲ್ ಕೇಸ್ ದಾಖಲಿಸಲು ಪ್ರೇರಣೆಯಾದದ್ದು ಈಚೆಗೆ ನ್ಯಾಯಾಲಯದಲ್ಲಿ ಬಿದ್ದು ಹೋದ ರಾಘವನ ವಿರುದ್ಧದ ಪಿಐಎಲ್. ಈ ಕೇಸ್‌ನಲ್ಲಿ ಚಂದನ್ ಮತ್ತು ಮಲ್ಲಿಕಾರ್ಜುನ್ ಎಂಬ ದಗಲುಬಾಜಿಗಳು ಸೇರಿ ಹಣಕ್ಕೆ ಬ್ಲಾಕ್‌ಮೇಲ್ ಮಾಡಿ ಸಿಕ್ಕಿಬಿದ್ದಿದ್ದರು. ಇದು ರಾಮಚಂದ್ರಾಪುರ ಮಠಾಧಿಪತಿ ರಾಘವನ ಗ್ಯಾಂಗಿನ ಪಾತಕಕ್ಕೆಲ್ಲ ಒಂಥರಾ ಚಾರಿತ್ರ್ಯದ ಸಿಂಧುತ್ವ ಕೊಟ್ಟಂತಾಗಿತ್ತು.

ಇಂಥದ್ದೇ ಬ್ಲಾಕ್‌ಮೇಲ್ ಕಥೆ ಹೆಣೆದು ಪ್ರೇಮಲತಾ ಮತ್ತು ದಿವಾಕರ್ ಶಾಸ್ತ್ರಿ ಮೇಲೆಸೆದರೆ, ಜನ ನಂಬುತ್ತಾರೆಂಬುದು, ಇದರಿಂದ ಬುರ್ನಾಸಾದ ಮಠದ ಘನತೆಗೆ ಹೊಸ ಹೊಳಪು ಬರುತ್ತದೆಂಬುದು ಚಿಂತಕರ ಚಾವಡಿಯ ತೀರ್ಮಾನವಾಗಿತ್ತು. ಈ ಅಸ್ತ್ರ ತೋರಿಸಿ ಪ್ರೇಮಲತಾ ದಂಪತಿಗಳ ಪಳಗಿಸಲು ಮೊದಲು ಶತಪ್ರಯತ್ನ ಮಾಡಲಾಯ್ತು. ರಾಮಕಥಾದ ಕಲಾವಿದರಾದ ಗಜಾನನ ಶರ್ಮಾ, ಶಂಕರಿ ಬಾಳಿಲ ಮತ್ತು ದೀಪಿಕಾ ಎಂಬುವರಿಂದ ಪ್ರೇಮಲತಾ ದಂಪತಿ ಮೇಲೆ ಬೆಂಗಳೂರು, ಸುಳ್ಯ ಮತ್ತು ಹೊನ್ನಾವರದಲ್ಲಿ ಬೆದರಿಕೆ ಕಂಪ್ಲೇಂಟು ಕೊಡಿಸಲಾಯ್ತು. ಈ ಮೂರೂ ದೂರಿನ ಸಾರಾಂಶವೆಂದರೆ, ಕೆಕ್ಕಾರಲ್ಲಿ ನಡೆವ ರಾಮಕಥಾಕ್ಕೆ ಹೋಗಬಾರದು ಮತ್ತು ಸ್ವಾಮಿ ವಿರುದ್ಧ ನಾವು ಹೇಳಿದಂತೆ ಹೇಳಿಕೆ ಕೊಡಬೇಕೆಂಬುದಾಗಿತ್ತು. ಈ ಬೋಗಸ್ ದೂರಿನ ಗುರಿ ರಾಘವ ಸ್ವಾಮಿ ವಿರುದ್ಧ ಮಾತಾಡುವ ಪ್ರಯತ್ನ ಮಾಡಿದರೆ ನಿಮಗೆ ಜೈಲು ಕಾದಿದೆ ಎಂಬ ಸಂದೇಶ ಪರೋಕ್ಷವಾಗಿ ಪ್ರೇಮಲತಾ-ದಿವಾಕರ್ ಕುಟುಂಬಕ್ಕೆ ಮುಟ್ಟಿಸುವುದಾಗಿತ್ತು!

ದಂಪತಿ ದಸ್ತಗಿರಿ

ಸೋಗಲಾಡಿ ಸ್ವಾಮಿ ಪರಿವಾರದ ಯಾವ ಕುತಂತ್ರಗಾರಿಕೆಯ ಒತ್ತಡಕ್ಕೂ ಪ್ರೇಮಲತಾ-ದಿವಾಕರ್ ಜಗ್ಗಲಿಲ್ಲ, ಸ್ವಾಮಿ ಸಂಗಡ ರಾಜಿಗೆ ಸಿದ್ಧರಾಗಲಿಲ್ಲ. ರಾಘವ ಕಾವಿಯಲ್ಲಡಗಿದ ಕಾಮ ತೀರಿಸಿಕೊಳ್ಳಲು ಪ್ರೇಮಲತಾರ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ನಡೆಸಿದ್ದ ಆಕೆಯ ಕುಟುಂಬದಲ್ಲಿ ಆಕ್ರೋಶ ಮೂಡಿಸಿತ್ತು. ಇನ್ನು ಈ ಕೌಪೀನ ಹರುಕನ ಸಹವಾಸ ಸಾಕೆಂಬ ನಿರ್ಧಾರಕ್ಕೆ ಆ ಕುಟುಂಬ ಬಂದಿತ್ತು. ಹೀಗಾಗಿ ಕೆಕ್ಕಾರಿನ ಚಾತುರ್ಮಾಸ್ಯ

ಮುಂದಿನ ಪುಟಕ್ಕೆ....



.....ಹಿಂದಿನ ಪುಟದಿಂದ

ಕಾರ್ಯಕ್ರಮದಲ್ಲಿ ಹಾಡುವ ಗೊಡವೆಗೆ ಪ್ರೇಮಲತಾ ಹೋಗಲಿಲ್ಲ. ಶಾಸ್ತ್ರಿ ಕುಟುಂಬ ಕಕ್ಕಾಬಿಕ್ಕಿಯಾಗಿ ರಾಘವ ಮತ್ತವನ ಸಲಹೆಗಾರರ ಸಮ್ಮುಖದಲ್ಲೇ ಕುಂತು ಲೈಂಗಿಕ ದೌರ್ಜನ್ಯಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಜತೆಗೆ ಕೇಸೂ ಹಾಕುವುದಾಗಿ ಹೇಳಿದ್ದರು.

ಆಗ ಬಚಾವಾಗಲು ಕಪಟ ಸನ್ಯಾಸಿ ರಾಘವ ಬಳಗಕ್ಕೆ ಇದ್ದದ್ದು ಒಂದೇ ಮಾರ್ಗ. ಪ್ರೇಮಲತಾ ದಂಪತಿಗಳ ಮೇಲೆಯೇ ಮೂರು ಕೋಟಿ ಬೇಡಿಕೆಯ ಬ್ಲ್ಯಾಕ್‌ಮೇಲ್ ಕೇಸು ಹಾಕೋದು. ಮೂರು ಕೋಟಿ ಕೊಡದಿದ್ದರೆ ರೇಪ್ ಕೇಸ್ ರಾಘುಸ್ವಾಮಿ ಮೇಲೆ ಹಾಕುವುದಾಗಿ ಪ್ರೇಮಲತಾ, ಆಕೆಯ ಗಂಡ ದಿವಾಕರ್ ಮತ್ತು ದಿವಾಕರ್ ಸಹೋದರ ನಾರಾಯಣ ಶಾಸ್ತ್ರಿ ಬೆದರಿಸುತ್ತಿದ್ದಾರೆಂದು ಹೊನ್ನಾವರ ಠಾಣೆಯಲ್ಲಿ ಕಂಪ್ಲೇಂಟು ದಾಖಲಿಸಲಾಯ್ತು. ಹೊನ್ನಾವರ ಪೊಲೀಸರನ್ನು ಬುಟ್ಟಿಗೆ ಹಾಕಿಕೊಂಡಿದ್ದ ರಾಘವ ಪಟಾಲಮ್ ಈ ಕಂಪ್ಲೇಂಟು ಸುದ್ದಿಯಾಗದಂತೆ ನೋಡಿಕೊಂಡು ಏಕಾಏಕಿ ಪ್ರೇಮಲತಾ-ದಿವಾಕರ್‌ನನ್ನು ಬಂಧಿಸುವ ಸ್ಕೆಚ್ ಹಾಕಿಕೊಂಡಿತ್ತು. ಈ ರಹಸ್ಯ ದೂರಿಗೆ ಮತ್ತೊಂದು ಕಾರಣವೂ ಇತ್ತು. ಪೊಲೀಸರ ಭಯಕ್ಕೆ ಬೆದರಿ 'ರಾಜಿ'ಗೆ ಬಂದರೆ ಬರಲಿ ಎಂಬ ಇರಾದೆಯೂ ಇತ್ತು. ಸಂಧಾನ ಸಾಧ್ಯವಾಗದಿದ್ದಾಗ ದಂಪತಿಗಳ ದಸ್ತಗಿರಿ ಮಾಡಿದ ಪೊಲೀಸರು ಬೆಂಗಳೂರಿಂದ ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಿದರು.

ಕಳ್ಳ ಕಾವಿ ಮೇಲೆ ಕಂಪ್ಲೇಂಟು!

ಅಪ್ಪ-ಅಮ್ಮರನ್ನು ತೆವಲಿನ ಸ್ವಾಮಿಯ ಬಂಟರೊಂದಿಗೆ ಬಂದಿದ್ದ ಹೊನ್ನಾವರ ಪೊಲೀಸರು ಇದ್ದಕ್ಕಿದ್ದಂತೆ ಎತ್ತಾಕಿಕೊಂಡು ಹೋದಾಗ ಶಾಸ್ತ್ರಿ ದಂಪತಿಗಳ ಇಬ್ಬರು ಅಸಹಾಯಕ ಹೆಣ್ಣು ಮಕ್ಕಳಿಗೆ ದಿಕ್ಕೇ ತೋಚದಂತಾಯ್ತು. ಹಿರಿಯ ಮಗಳು ಸೀದಾ ಬನಶಂಕರಿ ಠಾಣೆ ಹೋಗಿ ಕಚ್ಚೆ ಹರುಕಸ್ವಾಮಿ ರಾಘವನ ಮೇಲೆ ಲೈಂಗಿಕ ದೌರ್ಜನ್ಯದ ಕೇಸು ದಾಖಲಿಸುತ್ತಾಳೆ. ರಾಮಚಂದ್ರಾಪುರ ಮಠದ ಮುತ್ಠಾಳ ಸ್ವಾಮಿ ತನ್ನ ತಾಯಿ ಪ್ರೇಮಲತಾರ ಮೇಲೆ ಅತ್ಯಾಚಾರ ಮಾಡಿದ್ದಾನೆ. ಆಕೆ ದೂರು ಕೊಡುವ ಭಯದಿಂದ ಸುಳ್ಳು ಕೇಸು ಹಾಕಿ ಅರೆಸ್ಟ್ ಮಾಡಿಸಿದ್ದಾನೆಂಬುದು ಆಕೆಯ ದೂರಿನ ತಿರುಳು.

ಚಡಪಡಿಕೆಗೆ ಬಿದ್ದ ಪಾತಕಿ ರಾಘವ ಮತ್ತವನ ಸಲಹೆಗಾರ ಪ್ರಭೃತಿಗಳು ಶಾಸ್ತ್ರಿ ಕುಟುಂಬದ ಮೇಲೆ ಸಾಮಾಜಿಕ ಬಹಿಷ್ಕಾರದಂಥ ಅಮಾನುಷ-ಕಾನೂನುಬಾಹಿರ ಒತ್ತಡ-ಬೆದರಿಕೆ ಹಾಕಿ ಮುಖ ಉಳಿಸಿಕೊಳ್ಳಲು ಹವಣಿಸುತ್ತಿದೆ. ಅತ್ತ ಬೆಂಗಳೂರಿನ ಬನಶಂಕರಿ ಠಾಣೆಯಲ್ಲಿ ದಗಲುಬಾಜಿ ಕಾವಿ ಜೇವಿ ರಾಘವನ ವಿರುದ್ಧ 354ಎ, 506 ಸೆಕ್ಷನ್‌ಗಳ ಪ್ರಕರಣದ ಎಫ್‌ಐಆರ್ ದಾಖಲಾಗಿದೆ. ವಿಪರ್ಯಾಸವೆಂದರೆ, ಪ್ರೇಮಲತಾ ದಂಪತಿಗಳ ಬಂಧನವಾದಷ್ಟೇ ಬಿರುಸಿನಿಂದ ಪಾಪಿ ರಾಘವ ಜೈಲು ಪಾಲಾಗುತ್ತಿಲ್ಲ. ರಾಘವನ ಚಾತುರ್ಮಾಸ್ಯ ವ್ರತ ಮುಗಿಸುವುದು ಸೆಪ್ಟೆಂಬರ್ 9ರಂದು. ಅಲ್ಲಿತನಕ ಸಿದ್ದು ಸರ್ಕಾರ ರಾಘವನಿಗೆ ರಿಯಾಯಿತಿ ತೋರಿಸಿದೆಯಾ? ಹಾಗಂತ ಹವ್ಯಕರೇ ಮಾತಾಡಿ ಕೊಳ್ಳುತ್ತಿದ್ದಾರೆ.

ರಾಮ ಪ್ರೇಮ ರಾಘು ಕಾಮ

ಇತ್ತ ಹೊನ್ನಾವರ ನ್ಯಾಯಾಲಯಕ್ಕೆ ಹಾಜರುಪಡಿಸಲಾದ ಪ್ರೇಮಲತಾ ದಂಪತಿಗಳನ್ನು ಸೆಪ್ಟೆಂಬರ್ 10ರ ತನಕ ನ್ಯಾಯಾಂಗ ಕಸ್ಟಡಿಗೆ ನೀಡಲಾಗಿದೆ. ನ್ಯಾಯಾಲಯದಲ್ಲಿ ಪ್ರೇಮಲತಾ ಹವ್ಯಕರ ಹರಾಮಿ ಸ್ವಾಮಿಯಿಂದ ತನಗಾದ ಅನ್ಯಾಯ-ಹಲ್ಲೆ-ದೌರ್ಜನ್ಯ ಬಿಚ್ಚಿಟ್ಟಿದ್ದಾರೆ. ಆಕೆಯ ಹೇಳಿಕೆ ನ್ಯಾಯಾಲಯ ಸ್ವೀಕರಿಸಿದೆ. ಅಷ್ಟೇ ಅಲ್ಲ, ರಾಘವೇಶ್ವರ ಭಾರತೀಸ್ವಾಮಿಯಿಂದ 2011 ರಿಂದ ತನ್ನ ಮೇಲಾದ ಅತ್ಯಾಚಾರ, ದೇವರ ಹೆಸರಲ್ಲಿ ನಡೆದ ಲೈಂಗಿಕ ಕುಚೋದ್ಯ, ದೈಹಿಕ ಹಲ್ಲೆ, ಪಡ್ಡೆ ಹುಡುಗನಂತೆ ಕಾವಿ ಜೇವಿ ತನ್ನ ಹಿಂದೆ ಬಿದ್ದು ಕಾಡಿದ್ದು, ಮೋಡಿ ಮಾಡಿದ್ದು, ರಾಮನ ಪ್ರಸಾದವೆಂದು ಅಮಲು ಪದಾರ್ಥ ಕೊಟ್ಟಿದ್ದು... ಹೀಗೆ ಎಳೆಎಳೆಯಾಗಿ ರಾಘವನ ಕಾಮ ವಿಕಾರ ವಿಷಾದಪಡಿಸಿದ ದೂರೊಂದನ್ನು ಕೊಟ್ಟಿದ್ದಾರೆ.

ಪ್ರೇಮಲತಾರ ಗಂಡನ ಕುಟುಂಬಕ್ಕೂ ರಾಮಚಂದ್ರಾಪುರ ಮಠಕ್ಕೂ ಇರುವ ಸಂಬಂಧ ತೀರಾ ಹಳೆಯದು. ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದ ದಕ್ಷಿಣ ಕನ್ನಡದ ಪುತ್ತೂರು ತಾಲ್ಲೂಕಿನ ಕಬಿಲ ಮೂಲದ ಸಿ.ಎಂ. ಈಶ್ವರಶಾಸ್ತ್ರಿ ಚಕ್ರಕೋಡಿ ಶಾಸ್ತ್ರಿಗಳೆಂದೇ ಜನಜನಿತರಾಗಿದ್ದರು. ಶೃಂಗೇರಿ ಮಠ, ರಾಮಚಂದ್ರಾಪುರ ಮಠ ಮುಂತಾದ ಬ್ರಾಹ್ಮಣ ಮಠಗಳಲ್ಲಿ ಚಕ್ರಕೋಡಿ ಶಾಸ್ತ್ರಿಗಳಿಗೆ ವಿಶೇಷ ಗೌರವವಿತ್ತು, ರಗಳೆ ರಾಘವನನ್ನು ರಾಮಚಂದ್ರಾಪುರ ಮಠಾಧೀಶನಾಗಿ ಆಯ್ಕೆ ಮಾಡಿದ ಸಮಿತಿಯಲ್ಲೂ ಚ.ಮೂ. ಈಶ್ವರಶಾಸ್ತ್ರಿಗಳಿದ್ದರು. ಇವರ ಮಗನೇ ದಿವಾಕರ ಶಾಸ್ತ್ರಿ ಅಂದರೆ ರಾಘವನ ಲೈಂಗಿಕ ಸಂತ್ರಸ್ತೆ ಪ್ರೇಮಲತಾರ ಪತಿ.

ದಿವಂಗತ ಈಶ್ವರ ಶಾಸ್ತ್ರಿಗಳ ಹಿರಿಯ ಮಗ ಚ.ಮೂ. ಕೃಷ್ಣಶಾಸ್ತ್ರಿ ಆರೆಸ್ಸೆಸ್‌ನ 'ಸಂಸ್ಕೃತ ಭಾರತಿ' ವಿಭಾಗದ ಅಖಿಲ ಭಾರತ ಸಂಯೋಜಕರು. ಮತ್ತೊಬ್ಬರು ನೊಸ್ಸೆ ರಾಘವನ ಮಠಪೀಠದ ಕಾಮಕಾಂಡಕ್ಕೆ ಆಹುತಿಯಾದ ಶ್ಯಾಮಶಾಸ್ತ್ರಿ. ಕೊನೆಯ ಮಗ ನಾರಾಯಣ ಶಾಸ್ತ್ರಿ ಸಾಗರದ ಹೊಸಗುಂದ ದೇವಸ್ಥಾನ ಪುನರುಜ್ಜೀವನ ಸಮಿತಿಯ ಮುಖ್ಯಸ್ಥರಾಗಿದ್ದವರು. ಈತನಿಗೂ- ರಾಘವನಿಗೂ ಜಗಳವಾಗಿ ಆತ ಆ ಜವಾಬ್ದಾರಿಯಿಂದ ತೆಗೆದು ಹಾಕಲ್ಪಟ್ಟಿದ್ದಾರೆ. ಈತನೂ ರಾಘವನ ಬಂಡಲ್ ಬ್ಲ್ಯಾಕ್‌ಮೇಲ್ ಕೇಸ್‌ನ ಆರೋಪಿ. ಪ್ರೇಮಲತಾರ ಪತಿ ದಿವಾಕರ ಶಾಸ್ತ್ರಿ ರಾಘವನ ಬೂಟಾಟಿಕೆಯ ವಿಶ್ವ ಗೋ ಸಮ್ಮೇಳನ ಮುಂತಾದ ಮಠ ಪ್ರಣೀತ ಪರಾಕ್ರಮದಲ್ಲಿ ವಿವಿಧ ಸ್ಥಾನ-ಮಾನ ನಿಭಾಯಿಸಿದಾತ. ಪ್ರೇಮಲತಾರಂತೂ ರಾಘವ ಸ್ವಾಮಿಯ ರಸಿಕತೆ ಕೆರಳಿಸಿದ ರಾಮಕಥಾದ ಗಾಯಕಿ. ಹೀಗೆ ಯಾವ ಆ್ಯಂಗಲ್ಲಿನಲ್ಲಿ ನೋಡಿದರೂ ರಾಮಚಂದ್ರಾಪುರ ಮಠ-ರಗಳೆ ರಾಘವ ಸ್ವಾಮಿ ಮತ್ತು ಈಶ್ವರ ಶಾಸ್ತ್ರಿ ಫ್ಯಾಮಿಲಿ ನಡುವೆ ಅಂಟಿದ ನಂಟಿರುವುದು ಗೋಚರಿಸುತ್ತದೆ. ಒಟ್ಟಿನಲ್ಲಿ ಶಾಸ್ತ್ರಿ ಪರಿವಾರ ರಾಘವ ಸ್ವಾಮಿಯೆಂದರೆ ಸಾಕ್ಷಾತ್ ಶ್ರೀರಾಮಚಂದ್ರ ದೇವರೆಂದೇ ನಂಬಿ ನಡೆದುಕೊಂಡು ಬಂದಿರುವ ಕುಟುಂಬ; ಸ್ವಾಮಿ ವಹಿಸಿದ ಕೆಲಸ-ಜವಾಬ್ದಾರಿ ಶಿರಸಾವಹಿಸಿ ಶ್ರದ್ಧೆಯಿಂದ ಮಾಡಿಕೊಂಡು ಬಂದಿರುವ ಫ್ಯಾಮಿಲಿ.

ಇಂಥ ಸಜ್ಜನರ ಕುಟುಂಬದ ಸೊಸೆ ಪ್ರೇಮಲತಾರ ಮೇಲೆ ಗೂಳಿ ಗುಣಧರ್ಮದ ರಾಘವನ ಕಾಮದ ಕಣ್ಣು ಯಾವ ಘಳಿಗೆಯಲ್ಲಿ ಬಿತ್ತೋ ಆ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನೇ ಬಲ್ಲ! ರಾಘವನಿಗೆ ತನ್ನ ಧಾರ್ಮಿಕ ಪರ್ಯಟನಕ್ಕೆ ರಾಮಕಥಾ ಎಂಬ ಗೀತ-ಸಂಗೀತ-ನೃತ್ಯ-ಚಿತ್ರ ರೂಪಕದ ಪರಿಕಲ್ಪನೆ ಹೊಳೆದಾಗ ಮೊಟ್ಟ ಮೊದಲು ಪ್ರೇಮಲತಾರ ಸಾಂಗತ್ಯ ಸಿಗುತ್ತದೆ! ಆಕೆಯನ್ನು ರಾಮಕಥಾದ ಪ್ರಮುಖ ಗಾಯಕಿಯಾಗಿ 'ನಾಮಿನೇಟ್' ಮಾಡುವ ರಾಘವ ಆಕೆಯಿಂದ ಮೊದಲು ಹಾಡಿಸಿದ್ದು 2010ರ ರಾಮನವಮಿ ಸಂದರ್ಭದಲ್ಲಿ. ಅದಾದದ್ದು ಹೊಸನಗರದ ಮೂಲ ಮಠದಲ್ಲಿ. ಅದೇ ವರ್ಷ ಕೊಲ್ಕತ್ತಾದಲ್ಲಿ ನಡೆದ ರಾಮಕಥಾದಲ್ಲೂ ಪ್ರೇಮಲತಾ ಹಾಡುತ್ತಾರೆ.



ರಾಮಚಂದ್ರಾಪುರ ಮಠ

2011ರ ಚಾತುರ್ಮಾಸ್ಯ ಗೋಕರ್ಣದ ಅಶೋಕೆಯಲ್ಲಿ ಏರ್ಪಾಡಾಗಿರುತ್ತದೆ. ಆ ಸಂದರ್ಭದಲ್ಲಿ ರಾಮಕಥಾ ಗಾಯನದಲ್ಲಿ ಪ್ರೇಮಲತಾ ಭಾಗವಹಿಸಿರುತ್ತಾರೆ. ಕೊನೆಯ ದಿನ ರಾಮನ ಮೂರ್ತಿಯ ಮೆರವಣಿಗೆ. ಅದರಲ್ಲಿ ಪ್ರೇಮಲತಾ ಉತ್ತರ ಭಾರತ ಶೈಲಿಯಲ್ಲಿ ಸೀರೆಯುಟ್ಟುಕೊಂಡು ಮೆರವಣಿಗೆಯ ಹಿಂಭಾಗದಲ್ಲಿ ನೃತ್ಯ ಮಾಡುತ್ತಿರುತ್ತಾರೆ. ಆಕೆಯನ್ನು ಕಂಡ ಸ್ವಯಂಘೋಷಿತ ಸರ್ವಸಂಗ ಪರಿತ್ಯಾಗಿಯೂ, ಕಾಮ-ಮೋಹರಹಿತನೂ ಆಗಿರುವ ರಾಘವ ತಲೆಯಲ್ಲಿ ಮನ್ಮಥ ಮುಲುಗುಟ್ಟುತ್ತಾನೆ! ಅಂದೇ ರಾತ್ರಿ 11ರ ವೇಳೆಗೆ ರಾಘವ ಆಕೆಯನ್ನು 'ಏಕಾಂತ ದರ್ಶನಕ್ಕೆ' ಕರೆಸುತ್ತಾನೆ.

ಪ್ರೇಮಲತಾ ಕೋಣೆಯೊಳಗೆ ಬರುತ್ತಲೇ ರಾಘವ ತಾನೇ ಕಿಟಕಿ ಮತ್ತು ಬಾಗಿಲಿನ ಕದಗಳನ್ನು ಮುಚ್ಚುತ್ತಾನೆ. ಆಕೆಯ ಗಾಯನದ ಗುಣಗಾನ ಶುರು ಹಚ್ಚಿಕೊಂಡು ವಿರಹಿಯಂತೆ ಬಡಬಡಿಸುತ್ತಾನೆ. ".... ನೀನು ದಿವ್ಯಳು... ನಿನ್ನಲ್ಲಿ ಅಪೂರ್ವ ಪ್ರತಿಭೆಯಿದೆ.... ಬಹಳ ಭಕ್ತಿಯಿಂದ ಈ ರಾಮನನ್ನು ಹಾಡಿ ಸಂತೋಷ ಪಡಿಸಿರುವೆ... ಗಾಯನದಿಂದ ನಿನ್ನನ್ನು ಬಹಳ ಹಚ್ಚಿಕೊಳ್ಳುತ್ತಾ ಇದ್ದೇವೆ... ನಿನ್ನಲ್ಲಿ ನಾವು ನೋಡದೇ ಇರುವ ಸುಮಾರು ವಿಷಯಗಳಿವೆ..." ಎಂದು ಬೆದೆಗೆ ಬಂದ ಹೋರಿಯಂತೆ ಆಕೆಯನ್ನು ಅಪಾದಮಸ್ತಕ ಓರೆಗಣ್ಣಿಂದ ಆಸ್ವಾದಿಸಿ ಕಾಮುಕ ನಗೆ ಚೆಲ್ಲುತ್ತಾನೆ ಈ ಕಾವಿ ಕ್ರಿಮಿ.

ಅಷ್ಟಕ್ಕೆ ರಾಘವನ ತಹತಹ ತಣಿಯುವುದಿಲ್ಲ. "... ಈ ದಿನಗಳಲ್ಲಿ ಒಂದು ಬಹು ವಿಶೇಷ ಅನುಭೂತಿಯಾಗಿದೆ... ಯಾವ ಸಂತರಿಗೂ ಆಗದಿರುವ ದಿವ್ಯ ಅನುಭೂತಿಯದು..." ಎಂದು ಹೇಳುತ್ತ ಆಕೆಯ ಅಂಗಸಂಗ ಸುಖಕ್ಕೆ ಹಾತೊರೆಯುತ್ತಾನೆ. ಹಾಗೇ ನಗುತ್ತ ಬೇರೆ ಕೊಠಡಿಗೆ ದುರ್ದಾನ ಪಡೆದಂತೆ ಹೋಗುತ್ತಾನೆ. ಸ್ವಾಮಿಗಳಿಂದ ಕಿಟ್ಟದ್ದು ನಿರೀಕ್ಷಿಸದ ಮುಗ್ಧ ಪ್ರೇಮಲತಾ ದಂಗಾಗುತ್ತಾರೆ.

ಮುಚ್ಚಿದ ಬಾಗಿಲ ಮೀಟಿಂಗು

ರಾಮಕಥಾದ ಪೂರ್ವಭಾವಿ ತಯಾರಿಗಾಗಿ ಆಯ್ದ ಕಲಾವಿದರೊಂದಿಗೆ ರಾಘವ ಕ್ಲೋಸ್ಡ್‌ಡೋರ್ ಮೀಟಿಂಗ್ ಮಾಡುವುದು ಮಾಮೂಲು. ಕಲಾವಿದರನ್ನು ಹಂತ-ಹಂತವಾಗಿ ಕಳಿಸಿದ ನಂತರ ಪ್ರೇಮಲತಾರೊಬ್ಬರನ್ನೇ ಈ ಪೋಲಿ ಕೋಣೆಯಲ್ಲಿ ಉಳಿಸಿಕೊಳ್ಳುತ್ತಿದ್ದ. ಇದು ಪರಿಪಾಠದಂತಾಗಿಹೋಗಿತ್ತು. 2011ರ ಅಕ್ಟೋಬರ್‌ನಲ್ಲಿ ಆಯೋಜಿಸಲಾಗಿದ್ದ ಜೋಧಪುರ ರಾಮಕಥಾ ತಯಾರಿ ಬೆಂಗಳೂರಿನ ಗಿರಿನಗರದ ಶಾಖಾ ಮಠದಲ್ಲಿ ನಡೆದಿತ್ತು. ಕಲಾವಿದರ ಮೀಟಿಂಗ್ ಮುಗಿದ ನಂತರ "ಎರಡು ನಿಮಿಷ ಇರು... ನಿನ್ನಲ್ಲಿ ಸ್ವಲ್ಪ ಮಾತಾಡೋದಿದೆ..." ಎಂದು ಪ್ರೇಮಲತಾರನ್ನು ಹೋಗಲು ಬಿಡುವುದಿಲ್ಲ ಆಕಳ ಸ್ವಾಮಿ. ಕೊಠಡಿಯಲ್ಲಿ ಪ್ರೇಮಲತಾ ಬಿಟ್ಟರೆ ಮತ್ಯಾರೂ ಇರುವುದಿಲ್ಲ.

ಕಾಮಾತುರದಿಂದ ಲಜ್ಜೆಯನ್ನೇ ಬಿಟ್ಟಿದ್ದ ಈ ಸ್ವಾಮೀಜಿ ಮತ್ತದೆ ಮರುಳು ಮಾತಿನ ಆಲಾಪ ಶುರು ಹಚ್ಚಿಕೊಳ್ಳುತ್ತಾನೆ. ಪ್ರೇಮಲತಾರ ಗಾಯನ ಹೊಗಳುತ್ತಾನೆ. "ನಿನ್ನ ಭಾವದ ಮಟ್ಟ ತುಂಬ ಎತ್ತರದ್ದು... ತುಂಬಾ ಅನುಭವಿಸಿ ಹಾಡುತ್ತೀಯಾ... ನಿಶ್ಚಯವಾಗಿಯೂ ನಿನ್ನ ಮೇಲೆ ರಾಮನ ವಿಶೇಷ ಒಲುಮೆಯಾಗಿದೆ. ಮುಂದೆ ಇನ್ನೂ ಹೆಚ್ಚಿನ ಒಲುಮೆಯಾಗಲಿದೆ... ನಮಗೆ ನೀನು ಸಂಪೂರ್ಣ ಬೇಕು..." ಎಂದು ಹಲಬುತ್ತ ಆಕೆಯ ಮೈಮೇಲೆಲ್ಲ ಕಣ್ಣಾಡಿಸುತ್ತಾನೆ. ಆಕೆಯಿಂದ ಕಾಮ ತಣಿಕೆ ನಿರೀಕ್ಷಿಸುವವನಂತೆ ಕಲ್ಲಾಗಿ ಆಕೆಯನ್ನೇ ನೋಡುತ್ತ ನಿಂತುಬಿಡುತ್ತಾನೆ. ಇದರಿಂದ ಹೆದರಿದ ಪ್ರೇಮಲತಾ ಅಲ್ಲಿಂದ ಹೊರಗೋಡಿಬರುತ್ತಾರೆ.

ಜೋಧಪುರ ಕಾರ್ಯಕ್ರಮಕ್ಕಾಗಿ ಮೂರು ದಿನಗಳ ಬಳಿಕ ಮತ್ತೆ ಮುಚ್ಚಿದ ಬಾಗಿಲ ಮೀಟಿಂಗ್ ನಡೆಯುತ್ತದೆ. ಆ ಮೀಟಿಂಗ್ ನಂತರ ರಾಘವ ಪ್ರೇಮಲತಾರ ಮುಂದೆ ಅಕ್ಷರಶಃ ಅಂಗಲಾಚುತ್ತಾನೆ. ಮೂರು ದಿನದಿಂದ ತನಗೆ ನಿದ್ದೆಯಿಲ್ಲ. ಇಂದು ನಿನ್ನ ಉತ್ತರ ಬೇಕೇಬೇಕೆಂದು ಚಡಪಡಿಸುತ್ತಾನೆ. ಆಕೆ ಏನೂ ಮಾತಾಡದೆ ಕಂಗಾಲಾಗಿ ನಿಂತಿರುತ್ತಾರೆ. ಆಗಾತ ತನ್ನ ಮಲಗುವ ಕೋಣೆಗೆ ಕರೆದೊಯ್ಯುತ್ತಾನೆ. ಅಲ್ಲಿ ಶ್ರೀರಾಮನ ವಿಗ್ರಹದ ಮುಂದೆ ನಿಲ್ಲಿಸಿ ಪ್ರಾರ್ಥಿಸುವಂತೆ ಹೇಳುತ್ತಾನೆ. ಆ ಅಮಾಯಕಿ ಭಕ್ತಿಯಿಂದ ಪ್ರಾರ್ಥಿಸುತ್ತಾಳೆ.

ಆಕೆ ದೇವರ ಮುಂದೆ ನಿಂತು ಪ್ರಾರ್ಥನೆ ಮಾಡುತ್ತಿದ್ದಾಗ "ನೀನು ದಿವ್ಯಳು... ನಿನ್ನ ಮೇಲೆ ಶ್ರೀರಾಮನ ವಿಶೇಷ ಕರುಣೆಯಾಗಿದೆ... ನಮಗೆ ರಾಮನೊಂದಿಗೆ ಸಂಭಾಷಣೆ ನಡೆಸುವ ಕ್ರಮವಿದೆ... ನಮ್ಮೆಲ್ಲ ಕರುಣೆ-ಪ್ರೀತಿ ನಿನ್ನೆಡೆಗೆ ಹರಿಸುವಂತೆ ರಾಮನ ಪ್ರೇರಣೆ ಆಗಿದೆ... ಇದು ನಿನ್ನ ಸೌಭಾಗ್ಯ... ಶ್ರೀರಾಮನ ಪ್ರೇರಣೆಯಂತೆ ನೀನು ನಿನ್ನನ್ನು ಸಂಪೂರ್ಣವಾಗಿ ನನಗೆ ಸಮರ್ಪಿಸಿಕೊಳ್ಳಬೇಕು... ಇಲ್ಲಿ ಏನು ನಡೆದರೂ ಅದು ರಾಮನ ಇಚ್ಛೆಯಂತೆ ನಡೆಯುತ್ತದೆ.... ನೀನು ಏನನ್ನೂ ಪ್ರಶ್ನಿಸಲೂಬಾರದು... ನೀನು ನಮ್ಮನ್ನು ರಾಮನೆಂದೇ ನಂಬಬೇಕು.... ನಿನ್ನ ತನು-ಮನ ನಮಗೆ ಅಂದರೆ ರಾಮನಿಗೆ ಸಮರ್ಪಿಸಿಕೋ... ಇದನ್ನು ನೀನು ತಪ್ಪೆಂದು ಭಾವಿಸಬೇಡ... ನೀನು ನಮ್ಮನ್ನು ಸಂತೋಷಪಡಿಸಿ ಆ ಮೂಲಕ ರಾಮನನ್ನು ಸೇರು...." ಎಂದು 'ದೈವಿಕ' ಪರಿಭಾಷೆಯಲ್ಲಿ ರಾಘವ ಪುಸಲಾಯಿಸುತ್ತಾನೆ.

ಆ ನಂತರದ ಆತನ ಮಾತುಗಾರಿಕೆ ಭಾವನಾತ್ಮಕ ಬ್ಲ್ಯಾಕ್‌ಮೇಲ್‌ನಂತೆ ನಡೆಯುತ್ತದೆ. ".... ನೀನು ನನಗೆ ಸಮರ್ಪಿಸಿಕೊಂಡರೆ ನಿನ್ನ ಕುಟುಂಬಕ್ಕೆ ಶ್ರೇಯಸ್ಸಾಗುತ್ತದೆ... ನೀನು ಗಾಯನ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರುತ್ತೀಯಾ... ಈ ವಿಷಯ ನಮ್ಮಿಬ್ಬರನ್ನು ಹೊರತುಪಡಿಸಿ ನಿ... ಗಂಡನಿಗೂ, ಬೇರೆ ಯಾರಿಗೂ ಗೊತ್ತಾಗಬಾರದು... ಗೊತ್ತಾದರೆ ಅದರ ಫಲಾಫಲಗಳು ನಿನ... ದೊರೆಯುವುದಿಲ್ಲ...." ಎಂದೆಲ್ಲ ಹೇಳಿ ರಾಮನಮೂ... ಮುಂದೆ ಆಣೆ-ಭಾಷೆ ಪಡೆಯುತ್ತಾನೆ. ಗಾಬರಿಗೊಂ... ನಿಂತಿದ್ದ ಆಕೆಯ ಮೈ-ಕೈ ಮುಟ್ಟಿ ಏನೇನೋ ಮಾಡುತ್ತಾ... "ಇದು ರಾಮನ ಪ್ರೇರಣೆಯ ಕೆಲಸ..." ಎಂದು ರಮಿಸುತ್ತಾ...

ಮೊದಲ ಮಿಲನ

ಜೋಧಪುರದ 'ರಾಮಕಥಾ'ಕ್ಕೆಂದು ಗೂಳಿ ಸ್ವಾ... ತನ್ನ ಪರಿವಾರದೊಂದಿಗೆ ಗಾಯಕಿ ಪ್ರೇಮಲತಾರನ... ಕರೆದೊಯ್ಯುತ್ತಾನೆ. ಅದು 2011ರ ಅಕ್ಟೋಬರ್ ಎರಡ... ವಾರ. ಒಂದು ಹಾಡುಹಗಲೇ ಸ್ವಾಮಿ ಪ್ರೇಮಲತಾರ... ತನ್ನ ಖಾಸಗಿ ರೂಮಿಗೆ ಕರೆಸಿಕೊಳ್ಳುತ್ತಾನೆ. "ರಾಮ ಪ್ರಸಾ... ಎಂದು ಏನೋ ತಿನ್ನಲು ಕೊಡುತ್ತಾನೆ. ಆಕೆ ಮುಗ್ಧವಾ... ತಿನ್ನುತ್ತಾರೆ. ಆ 'ಪ್ರಸಾದ' ತಿನ್ನುತ್ತಲೇ ಆಕೆಯ ಬುದ್ಧಿ... ಮಂಕು ಕವಿಯುತ್ತದೆ. ಆಕೆ ಅರೆಪ್ರಜ್ಞೆಗೆ ಜಾರುತ್ತಾ... ರಾಘವ ಕಿಟಕಿ-ಬಾಗಿಲು ಮುಚ್ಚುತ್ತಾನೆ. ಒತ್ತಾಯವಾ... ಆಕೆಯನ್ನು ತನ್ನ ತೊಡೆಯ ಮೇಲೆ ಎಳೆದ... ಕೂರಿಸಿಕೊಳ್ಳುತ್ತಾನೆ.

ತಬ್ಬಿಬ್ಬಾದ ಆಕೆಗೆ ಸಮಾಧಾನ ಮಾಡುತ್ತಾ... ಮುದ್ದಿಸುತ್ತಾನೆ. "ಇದು ತಪ್ಪೇನಲ್ಲ... ಗುರುಪೀಠಕ್ಕೆ ನಿನ್ನ... ಸಮರ್ಪಿಸಿಕೊಳ್ಳಬೇಕಾದ ಕರ್ತವ್ಯವಿದೆ... ಇದರಿಂ... ರಾಮನಿಗೆ ಖುಷಿಯಾಗುತ್ತದೆ...." ಎಂದು ಮರಳು ಮಾ... ಮಿಲನೋತ್ಸವ ಮುಗಿಸುತ್ತಾನೆ. ಸ್ವಾಹಾ ಮುಗಿದ ಬಳಿ... "... ಈ ಪವಿತ್ರ ಕಾರ್ಯ ನಿನ್ನಿಂದಲೇ ಆಗಬೇಕಿತ್ತು... ಅದಕ್ಕೆಂದೇ ರಾಮ ನಿನ್ನ ಆಯ್ಕೆ ಮಾಡಿದ್ದಾನೆ... ನಿ... ಹಾಗೆ ಭಕ್ತಿಯಿಂದ ಬರುವ ಎಷ್ಟೋ ಶಿಷ್ಯೆಯರಿದ್ದಾರೆ... ಆದರೆ ಈ ಅವಕಾಶ ನಿನಗೆ ಮಾತ್ರ ಲಭ್ಯವಾಗಿದೆ... ಎಂದು ಹೇಳುತ್ತ ಆಕೆಯನ್ನು ತಂದು ರಾಮನ ವಿಗ್ರಹ... ಮುಂದೆ ನಿಲ್ಲಿಸುತ್ತಾನೆ. ಈ ಮಿಲನ ಯಾರಿಗ... ಹೇಳಬಾರದು. ಹೇಳಿದರೆ ರಾಮನ ಶಾಪ ನಿನಗೂ-ನಿ... ಕುಟುಂಬಕ್ಕೂ ಕಾಡುತ್ತದೆ ಎಂದು ಹೆಂಗಸರ ಕೌಟುಂಬ... ವಾತ್ಸಲ್ಯದ ದೌರ್ಬಲ್ಯದ ದುರ್ಲಾಭ ಪಡೆಯುವ ಟ್ರಿ... ಮಾಡುತ್ತಾನೆ ಈ ಮೂರನೇ ದರ್ಜೆ ಅತ್ಯಾಚಾರಿ. ಹೀ... ರಾಮನ ಮೇಲೆ ಆಣೆ ಮಾಡಿದ ಜೋಧಪುರದಲ್ಲಿ... ನಾಲ್ಕೂದಿನ ಜುಮ್ಮ-ಜಕ್ಕ ನಡೆಸುತ್ತಾನೆ ಈ ಗೂಳಿ ಸಾಧ...

ಮಾಣಿ ಮಠ ಹೊರನಾಡು

ಹೋರಿ ಹಾರಾಟದ ರಾಘವನ ಲೀಲೆ ಒಂದೆರ... ಕಡೆ ನಡೆದಿಲ್ಲ. ತಾನು ಹೋದಲೆಲ್ಲ ಒಂದಲ್ಲ ಒಂ... ನೆಪವೊಡ್ಡಿ ಪ್ರೇಮಲತಾರನ್ನು ಕರೆಸಿಕೊಳ್ಳುತ್ತಿದ್ದ ರಾಘ... ತನ್ನ ತೀಟೆ ತೀರಿಸಿಕೊಂಡು 'ಇದು ರಾಮೇಚ್ಛೆ' ಎಂ... ಕೈ ತಿರುಗಿಸುತ್ತಿದ್ದ. 27.10.2011ರಿಂದ 5.11.2011 ತನಕ ರಗಳೆ ರಾಘವ ಬೆಂಗಳೂರಿನ ಗಿರಿನಗರದ ಮಠದ... ಬಿಡಾರ ಹೂಡಿದ್ದ. ಅಲ್ಲಿ ನಾಲ್ಕೂ ದಿನ ರಾಮ ಹೆಸರ... 'ಪರಕಾಯ ಪ್ರವೇಶ' ಮಾಡಿದ್ದಾನೆ.

ಮುಂಬೈನ ಯಾವುದೋ ಕಂಪನಿಯ ಅಧಿಕಾ... ಗೊಂದು ಸಂಗೀತದ ಮಾಸ್ಟರ್ ಸಿಡಿ ತಲುಪಿಸಬೇಕೆಂ... ನೆಪದಿಂದ 8.11.2011ರಂದು ಪ್ರೇಮಲತಾರನ್ನು ಹೋ... ಸ್ವಾಮಿ ಪುತ್ತೂರಿನ ಪೆರಾಜೆಯ ಮಾಣಿಮಠ... ಕರೆಸಿಕೊಂಡಿದ್ದಾನೆ. 2011ರ ನವೆಂಬರ್ ಎರಡನೇ ವಾರದ... ಚಿಕ್ಕಮಗಳೂರಿನ ಹೊರನಾಡಿಗೆ ಪ್ರೇಮಲತಾರನ್ನು ರಾಘ... ಕರೆಸಿದ್ದ. ಆಕೆ ಹಾಡಿದ ಹಾಡಿನ ನಡು-ನಡುವೆ ತಾ... ಹೇಳಿದ ಶ್ಲೋಕ-ಜೋಡಣೆಯ ಕಾರಣ ಕೆಟ್ಟು ಬರುವಂ... ಮಾಡಿದ್ದ. 2011ರ ನವೆಂಬರ್ 3ನೇ ವಾರದಲ್ಲಿ ... ಸಗಣಿ ಸನ್ಯಾಸಿ ಕೆಕ್ಕಾರ ರಾಮಚಂದ್ರ ಎಂಬ ಶಿಷ್ಯನ ಮನೆಯ... ತಂಗಿದ್ದ. ಮೀಟಿಂಗ್ ನೆಪವೊಡ್ಡಿ ಅಲ್ಲಿಗೆ ಪ್ರೇಮಲತಾ... ಕರೆಸಿಕೊಂಡಿದ್ದ.

ಈ ಮೇಲಿನ ಎಲ್ಲ ಜಾಗದಲ್ಲೂ ಆಕೆಯನ... ಒತ್ತಾಯಪೂರ್ವಕವಾಗಿ, ದೇವರಭೀತಿ ಒಡ್ಡಿ-ಮಠ ಪೀಠ... ಶಾಪದ ಬ್ಲ್ಯಾಕ್‌ಮೇಲ್ ಮಾಡಿ 'ಏಕಾಂತ ದರ್ಶ... ನೀಡಿದ್ದಾನೆ. ಪ್ರೀತಿ ದಾಳಿಯ ಮೊದಲು ರಾಮ... ಪ್ರಸಾದವೆಂದು ಬುದ್ಧಿ ಮಂಕಾವ ತಿನಿಸು ಕೊಟ್ಟಿದ್ದಾ... ಪ್ರತಿಬಾರಿ ಅತ್ಯಾಚಾರ ಮುಗಿದನಂತರ ರಾಮನ ಮೂರ್ತಿಂ... ಮುಂದೆ ನಿಲ್ಲಿಸಿ 'ನಡೆದದ್ದು' ಯಾರಿಗೂ ಹೇಳಿದ... ಶ್ರೀರಾಮನ ಶಾಪ ನಿನಗೆ ಹಾಗು ನಿನ್ನ ಕುಟುಂಬ... ತಟ್ಟುತ್ತದೆ ಎಂದು ಹೆದರಿಸಿದ್ದಾನೆ. ಪೆದ್ದು ಪ್ರೇಮಲ... ಮೋಸ ಹೋಗಿದ್ದಾರೆ. ಶೋಷಣೆ ಮಾಡಿಸಿಕೊಂಡಿದ್ದಾ...

ಹೃಷಿಕೇಶದಲ್ಲಿ ತಂತ್ರಯೋನಿ ಪ್ರಯೋ...

ಹೋರಿ ಸ್ವಾಮಿ ತನ್ನ ತಲಬು ತಣಿಸಿಕೊಳ್ಳ... ಬರ್ಬರ-ಹೇಯ-ಅಮಾನುಷ-ವಂಚಕ-ತಂತ್ರಗಾರಿಕೆ ನಡೆಸಿ... ಒಂದೆರಡಲ್ಲ! ಪಾಪದ ಹೆಣ್ಣು ಪ್ರೇಮಲತಾರನ್ನು ... ಹರಿದು ಮುಕ್ಕಿದ್ದು ಘೋರವಾಗಿದೆ. ರಾಘವ ಏಕ... ಪ್ರತಿ ಬಾರಿಯೂ ಪ್ರೇಮಲತಾರಿಗೆ ತಿನ್ನಲು 'ರಾಮ ಪ್ರಸಾ... ಎಂಬ ಅಮಲು ಪದಾರ್ಥ ಕೊಡುತ್ತಿದ್ದ ಎಲ್ಲ ಮುಗಿದ...

ನಾರಿಯೂ ರಾಮಮೂರ್ತಿಯ ಮುಂದೆ ನಿಲ್ಲಿಸಿ ಆದು ಪ್ರಮಾಣ ಮಾಡಿಸುತ್ತಿದ್ದ ಇದಾತನ ಅತ್ಯಾಚಾರದ ಸೂತ್ರ!

ಪ್ರೇಮಲತಾ 2011ರ ನವೆಂಬರ್ 20ರಂದು ಕನ್ನಡ ಉತ್ಸವದ ಕಾರ್ಯಕ್ರಮಕ್ಕೊಂದು ದಿಲ್ಲಿಗೆ ಹೋಗಿದ್ದರು. ಈ ಕಾವಿ ಹೋರಿ ತಪ್ಪಸ್ಸಿಗೆಂದು ಹೃಷಿಕೇಶದಲ್ಲಿ ಹೂಡಿತ್ತು ದಿಲ್ಲಿಯಲ್ಲಿದ್ದ ಪ್ರೇಮಲತಾರನ್ನು 'ಪೀಠದ ಮುಂದ ಹೃಷಿಕೇಶಕ್ಕೆ ಬರುವಂತೆ ಮಾಡಿದ. ಆತ ನದಿ ತಟದ 'ಪಾರಮಾರ್ಥ ನಿಕೇತನ'ದಲ್ಲಿದ್ದ. ನ ಜಾವವೇ ಗಂಗಾ ಸ್ನಾನ ಮುಗಿಸಿ ತನ್ನ ಬಳಿ ಬುತೆ ಪ್ರೇಮಲತಾಗೆ ಕಟ್ಟಪ್ಪಣೆ ಮಾಡಿದ್ದ. ಗಂಗಾಸ್ನಾನ ಬಳಿಕ ಆಕೆ ಗುರುಗಳ ಸನ್ನಿಧಿಗೆ ಹೋದರು. ಬೆಳಗಿನ ಮುಗಿದ ಬಳಿಕ ತನ್ನ ಏಕಾಂತ ಕೊಠಡಿಗೆ ಕರೆದೊಯ್ದ. ಆಕೆಯ ಕಣ್ಣು ಮುಚ್ಚಿ ರಾಮನಿಗೆ ನಮಸ್ಕರಿಸಲು ಸವಾಯ್ತು. ಮುಚ್ಚಿದ ಕಣ್ಣಿನ ಹೆಣ್ಣಿಗೆ 'ದುರ್ಗಾ ಸಪ್ತಶತಿ' ಬೋಧಿಸಲಾರಂಭಿಸಿದ ಹೋರಿ ಸ್ವಾಮಿ. ಧ್ಯಾನದಲ್ಲಿದ್ದ ಲತಾರ ಮೈ-ಕೈ-ಖಾಸಗಿ ಅಂಗವನ್ನೆಲ್ಲ ಸ್ಪರ್ಶಿಸಿ ಆಕೆಯ ತಪ್ಪಿಸಿಬಿಟ್ಟ. "ಇದು ತಂತ್ರ ಯೋನಿ ಪ್ರಯೋಗ.... ಪರಮಾತ್ಮದಲ್ಲಿ ಸೇರಿಕೊಳ್ಳುವ ಸಾಧನ..." ಮುಂತಾಗಿ ಪಠ ಸುಖ ಪಡೆದುಕೊಂಡ.

ಗೆಳೆ ರಾಘವನ ಕಾವಿಯುಡಿಯಲ್ಲಿ ಅದೆಂಥ ನಾಕ್ ಪೋಲಿ ಆಡಿದ್ದಾನೆಂಬುದಕ್ಕೆ ಇಲ್ಲೊಂದು ನವಿದೆ. ನವೆಂಬರ್ ತಿಂಗಳಲ್ಲಿ ದಿಲ್ಲಿಯಲ್ಲಿ ವಿಪರೀತ ಇರುವುದರಿಂದ ಪ್ರೇಮಲತಾ ಪ್ರಯಾಣದ ಅನುಕೂಲತೆಗಾಗಿ ಜೀನ್ಸ್ ಪ್ಯಾಂಟ್ ತೆಗೆದುಕೊಂಡು ದ್ದರು. ಇದು ಚಪಲಿಗ ರಾಘವನಿಗೆ ಅದ್ವೇಗೋ ಗಿದೆ. ತಂತ್ರಯೋನಿ ಪ್ರಯೋಗದ ಮಾರನೇ ದಿನ ಹಾಕಿಕೊಂಡು ತನ್ನ 'ಶಯ್ಯಾಗೃಹ'ಕ್ಕೆ ಬರುವಂತೆ ಡಿದಿದ್ದಾನೆ. ಆಕೆ ಜೀನ್ಸ್ ತೊಟ್ಟು ಹೋಗಿದ್ದಾಳೆ. ಮುಡುಪಿನಲ್ಲಿ ಇಡೀ ಕೋಣೆ ತುಂಬ ಅತ್ತಿಂದಿತ್ತ ಸುವಂತೆ ಆರ್ಡರ್ ಮಾಡಿದ್ದಾನೆ. ಆಕೆ ತಿರುಗಾಡುವಾಗ ಕದೆ ನೋಡಿ ಪಾವನನಾಗಿದ್ದಾನೆ! ಕೊನೆಗೆ ಎಳೆದು ಯ ಮೇಲೆ ಕೂಡಿಸಿಕೊಂಡು ವಿಕೃತವಾಗಿ ದ್ದಾನೆ. ಜಮಖಾನದ ಮೇಲೆ ಕೆಡವಿ ಅತ್ಯಾಚಾರ ದ್ದಾನೆ! ಹೃಷಿಕೇಶದಲ್ಲಿದ್ದ ಈ ನಾಲ್ಕೈದು ದಿನವೂ ಈ ಕ್ರಿಯಾವಿಧಿ' ಸಾಂಗೋಪಾಂಗವಾಗಿ ನಡೆದಿದೆ.

2011ರ ಡಿಸೆಂಬರ್ 25 ರಾಘವನ ಹೃಷಿಕೇಶದ ನ ಕೊನೆಯ ದಿನವಾಗಿತ್ತು. ಅಂದು ಪ್ರೇಮಲತಾರ ಸಂಗೀತ ಕಾರ್ಯಕ್ರಮ ಆತ ಏರ್ಪಡಿಸಿದ್ದ. ಆಕೆಗೆ ಸನದಲ್ಲಿ ಬರುವ ವ್ಯವಸ್ಥೆ ಮಠದ ಬೊಕ್ಕಸದಿಂದ ಸ್ವಾಮಿ ಮಾಡಿಸಿದ್ದ. ರಾತ್ರಿ ಕಾರ್ಯಕ್ರಮ ಮುಗಿದಾಗ ಮಲತಾರನ್ನು ತನ್ನ ಕೊಠಡಿಗೆ ರಾಘು ಕರೆಸಿಕೊಂಡು ಳಿದ್ದೇ ಹೊಗಳಿದ್ದು. ತನ್ನ ಕಾಮಕಾಂಡಕ್ಕಾಗೇ ಈ ಸಂಗೀತ ಆತ ಆಯೋಜಿಸಿದ್ದ. ಆಕೆ ಹಾಡಿದ ಪ್ರತಿ ಗೀತೆಯ ಶ್ರೀಮಂತ ಭಾಗವನ್ನು ನೆನಪಿಸಿಕೊಂಡು ಪಪಟ್ಟಂತೆ ನಟಿಸಿ ಅದರ ಅಭಿವ್ಯಕ್ತಿ ಎಂಬಂತೆ ದು ಶರೀರವನ್ನು ಲೈಂಗಿಕವಾಗಿ ದುರ್ಬಳಕೆ ಕೊಂಡು ಬಿಟ್ಟ ಗೂಳಿಸ್ವಾಮಿ! ಅಲ್ಲಿದ್ದ ಆ ಎರಡು ಆಕೆ- ಇಂಥದ್ದೇ ಹಿಂಸೆ ಅಸಹಾಯಕವಾಗಿ ಅನುಭವಿಸಬೇಕಾಯ್ತು.

ಮರುದಿನ (ಡಿಸೆಂಬರ್ 26, 2011) ಪ್ರೇಮಲತಾ ಪರಿವಾರದೊಂದಿಗೆ ದಿಲ್ಲಿಗೆ ಬರುತ್ತಾರೆ. ಅಲ್ಲಿ ಪಾಲ್ ಎಂಬ ಭಕ್ತನ ಮನೆಯಲ್ಲಿ ವಾಸ್ತವ್ಯ. ಅಂದು ಬೆಳಗ್ಗೆಯೇ ಗೂಳಿ ಸ್ವಾಮಿಗೆ ಆತುರ. ಪ್ರೇಮಲತಾರನ್ನು ಕೋಣೆಗೆ ಕರೆಸಿಕೊಂಡ ಆತ 'ಸಪ್ತಶತಿ ಪಾರಾಯಣ' ಮಾಡಿದ್ದಾನೆ. ನಂತರ ರಾಮನ ವಿಗ್ರಹದ ಮುಂದೆ ಮಲತಾರನ್ನು ನಿಲ್ಲಿಸಿ ಆಕೆಯ ಕೈ ಜತೆ ತನ್ನದೂ ಇರಿಸಿ 'ಪಾಪ ಪರಿಹಾರ' ಪ್ರಮಾಣ ಮಾಡಿದ್ದಾನೆ!

ಬಸುರಿ ಎಂಬ ಭಯ!!

ಈ ಸರಣಿ ಭಾವನಾತ್ಮಕ ಅತ್ಯಾಚಾರದ ನಂತರ ಪ್ರೇಮಲತಾರ ಆರೋಗ್ಯದಲ್ಲಿ ಏರು-ಪೇರಾಗುತ್ತದೆ. ಋತುಚಕ್ರದಲ್ಲಿ ವ್ಯತ್ಯಾಸವಾಗುತ್ತದೆ. ಸ್ವಾಮಿ ಪಿಂಡ ಬೆಳೆಯುತ್ತಿರುವ ಭಯ ಶುರುವಾಗುತ್ತದೆ. ಹೋರಿ ಸ್ವಾಮಿಗೆ ಹೇಳಿದರೆ "ಡಾಕ್ಟರ್‌ಗೆ ತೋರಿಸು... ಅಂತಹದ್ದೇನೂ ಇದ್ದರೆ ನಾವು ತಿರುಪತಿ ತಿಮ್ಮಪ್ಪನ ದರ್ಶನ ಮಾಡಿಬರೋಣ..." ಎಂದು ಪಲಾಯನ ಮಾಡಿದ. ಆಕೆ ಟೆಸ್ಟ್ ಮಾಡಿಸಿದಾಗ ನೆಗೆಟೀವ್ ಬರುತ್ತದೆ. ಸ್ವಾಮಿ ನಿಟ್ಟುಸಿರು ಬಿಡುತ್ತಾನೆ. 2012ರ ಜನವರಿ ಎರಡನೇ ವಾರದಲ್ಲಿ ಸ್ವಾಮಿ ಪ್ರೇಮಲತಾ- ಆಕೆಯ ಗಂಡ ಮತ್ತು ಮಗಳನ್ನು ತಿರುಪತಿಗೆ ಕರೆದೊಯ್ಯುತ್ತಾನೆ. ತಿಮ್ಮಪ್ಪನ ಸನ್ನಿಧಿಯಲ್ಲೇ ಆತನಿಗೆ ಉಮೇದಿ ಬರುತ್ತದೆ.

ಆಕೆಯ ಗಂಡ-ಮಗಳು ಜತೆಗಿದ್ದರೂ ರಾಮಕಥಾದ ದಿನ ಕಾರ್ಯಕ್ರಮದ ಬಗ್ಗೆ ಚರ್ಚಿಸಬೇಕಿದೆ ಎಂದು ನೆಪದಿಂದ ತನ್ನ ಏಕಾಂತ ದರ್ಶನ ಕೊಠಡಿಗೆ ಕರೆಸಿಕೊಳ್ಳುತ್ತಾನೆ. ಅಲ್ಲೂ 'ಸಿದ್ಧ ಸೂತ್ರ'ದಂತೆ ... ನಡೆಯುತ್ತದೆ. ಆಕೆಯ ... [illegible]

ತನ್ನ ಕರ ಜೋಡಿಸಿ ಪಾಪ ಪರಿಹಾರ-ಗೋಪ್ಯತೆ ವಿಧಿ-ವಿಧಾನ ಯಥಾವತ್ ತಿರುಪತಿಯಲ್ಲೂ ನಡೆಸುತ್ತಾನೆ.

ಶಿವರಾತ್ರಿಯಂದು

2012ರ ಫೆಬ್ರವರಿ ತಿಂಗಳು ಗೋಕರ್ಣದಲ್ಲಿ ಶಿವರಾತ್ರಿ ಸಂಭ್ರಮ. 'ಗಂಗೆ-ಗೌರಿ' ಉಪನಾಮದ 8 ದಿನಗಳ ರಾಮಕಥಾ. ಮಹಾಬಲೇಶ್ವರ ದೇವಾಲಯದ ಪಕ್ಕದಲ್ಲೇ ಕಲಾವಿದರಿಗೆ ಮತ್ತು ಸ್ವಾಮಿ ಪರಿವಾರಕ್ಕೆ ಪ್ರತ್ಯೇಕ ವಸತಿ ವ್ಯವಸ್ಥೆ ಮಾಡಲಾಗಿತ್ತು. ಮೊದಲ ದಿನವೇ ಸಾಂಪ್ರದಾಯಿಕ ಪದ್ಧತಿಯಂತೆ ಅತ್ಯಾಚಾರ ಆಯ್ತು. ಅದೇ ಮಾತು- ಅದೇ ಕತೆ- ಅದೇ ಆಣೆ- ಅದೇ ದೇವರ ಶಾಪದ ಭೀತಿ.

ಶಿವರಾತ್ರಿ ದಿನವೂ ಈತನ ಕಾಮದಾಟ ನಿಲ್ಲಲಿಲ್ಲ. ಶಿವರಾತ್ರಿಯಂದು ಎಂಥ ಕೆಟ್ಟ ಸಂಸಾರಿಯಾದರೂ ತ್ರಿಕರಣ ಶುದ್ಧಿಯಿಂದಿರಲು ಪ್ರಯತ್ನಿಸುತ್ತಾನೆ. ಆದರೆ ಊರಿಗೆಲ್ಲ ನೀತಿ ಬೋಧಿಸುವ ಗೂಳಿ ಸ್ವಾಮಿ ಚಟ ತೀರಿಸಿಕೊಂಡಿದ್ದಾನೆ. ಮಟ-ಮಟ ಮಧ್ಯಾಹ್ನವೇ ಪ್ರೇಮಲತಾರನ್ನು ರೂಮಿಗೆ ಕರೆಸಿಕೊಂಡ ಕಾವಿ ಕೊಳಕ ಶಿವರಾತ್ರಿ ಮಹಿಮೆ ಬಗ್ಗೆ ಒಂದಿಷ್ಟು ಮಾತಾಡಿ ಅತ್ಯಾಚಾರ ಮಾಡಿದ್ದಾನೆ. ಅಷ್ಟೇ ಅಲ್ಲ "ರಾತ್ರಿ ನಮ್ಮಲ್ಲಿಗೆ ಬಾ... ಶಿವರಾತ್ರಿಯ ರಾತ್ರಿ ಆಧ್ಯಾತ್ಮಿಕ ಸಾಧನೆಗೆ ಬಹುಮುಖ್ಯವಾದ ಮಂತ್ರ ನಿನಗೆ ಹೇಳಿ ಕೊಡುತ್ತೇನೆ..." ಎಂದ್ಹೇಳಿ ರಾತ್ರಿಯೂ ದೌರ್ಜನ್ಯ ಮಾಡಿದ್ದಾನೆ.

ಮುಟ್ಟಾದರೂ ಬಿಡಲಿಲ್ಲ

ಗುಲ್ಬರ್ಗಾದ ಗಂವಾರ್‌ನಲ್ಲಿ 2012ರ ಜನವರಿ ಮೂರನೇ ವಾರದಲ್ಲಿ 'ಶಿವಕಥೆ' ನಡೆದಿತ್ತು. ಅಲ್ಲಿ ಸ್ವಾಮಿ

25.4.2012ರಿಂದ ನಾಲ್ಕು ದಿನ ಶಂಕರ ಪಂಚಮಿ ಸಮಯದಲ್ಲಿ ರಾಮಕಥಾ ನಡೆದಿತ್ತು. ಆಗ 3 ದಿನ ಗೂಳಿ ಸ್ವಾಮಿ ಹಾವಳಿ ಮಾಡಿದೆ! 2012ರ ಮೇ 12ರಿಂದ ನಾಲ್ಕು ದಿನ ಮಂಗಳೂರಿನ ಮುಡಿಪ್ಪು-ಕೈ ರಂಗಳದಲ್ಲಿ ರಾಮಕತೆ ನಡೆದಿತ್ತು. ಅಲ್ಲಿ ಎಲ್ಲ ದಿನವೂ ಕಾಮ ಕತೆ ರಾಘವ ಹೇಳಿದ್ದಾನೆ!

ಪ್ರೇಮಲತಾರನ್ನು ಗೂಳಿ ಸ್ವಾಮಿ ಪೀಠ ಮಹಿಮೆಯಿಂದ ಅದ್ಯಾವ ಪರಿ ಕಬ್ಜಾ ಮಾಡಿಕೊಂಡಿದ್ದರೆಂದರೆ, ಆಕೆ ಕೈಗೆ ಸಿಗದಿದ್ದಾಗ ಲೈಂಗಿಕ ಕಾಮನೆಯ ಕಿರಾತಕನಂತೆ ಎಗರಾಡುತ್ತಿದ್ದ. ಒಮ್ಮೆ ಮೈಸೂರಲ್ಲಿ (2012ರ ಜೂನ್ 2ರಿಂದ 7ರವರೆಗೆ) ರಾಮಕಥಾ ನಡೆದಿತ್ತು. ಆಗ ಪ್ರೇಮಲತಾ ತನ್ನ ಗಂಡನ ಅಕ್ಕನ ಮನೆಯಲ್ಲಿ ಉಳಿದುಕೊಂಡಿದ್ದರು. ಇದರಿಂದ ಬುರ್ನಾಸ್ ಯತಿಗೆ ದೊಡ್ಡ ಕೋಪವೇ ಬಂದಿತ್ತು. ಮರುದಿನ ತಾನು ಉಳಿದುಕೊಂಡಿದ್ದ ರಾಜೀವ್ ಎಂಬವರ ಮನೆಗೆ ಆಕೆಯನ್ನು ಕರೆಸಿಕೊಳ್ಳುತ್ತಾನೆ. ಕೊಠಡಿಯ ಬಾಗಿಲ ಬಳಿಯೇ ಆಕೆಯ ಕೈಹಿಡಿದು ಕರೆದುಕೊಂಡು ಹೋಗಿ ರಾಮನ ಮೂರ್ತಿ ಮುಂದೆ ನಿಲ್ಲಿಸಿ 'ಪರಿಪಾಠ' ಮುಗಿಸುತ್ತಾನೆ. ತನ್ನ ಕುತ್ತಿಗೆಯಲ್ಲಿರುವ ಸ್ಫಟಿಕದ ಸರ ಆಕೆಯ ಕುತ್ತಿಗೆಗೆ ಹಾಕುತ್ತಾನೆ. ಮಿಲನೋತ್ಸವ ಮುಗಿದಾಕ್ಷಣ ಆ ಸರ ಆಕೆಯ ಕೈಯಿಂದ ತನ್ನ ಕೊರಳಿಗೆ ಹಾಕಿಸಿಕೊಳ್ಳುತ್ತಾನೆ. ಮೈಸೂರಲ್ಲಿದ್ದ ಎಲ್ಲ ದಿನವೂ ಸ್ಫಟಿಕ ಸರ ಬದಲಾಯಿಸುವ ಹೊಸ ಪದ್ಧತಿಯಂತೆ ಅತ್ಯಾಚಾರ ನಡೆದಿದೆ.


ಹೈರಾಣಾಯಿತು ಲತೆ!

ಆಕಳ ಸ್ವಾಮಿಯ ಗೂಳಿ ದಾಳಿಯಿಂದ ಪ್ರೇಮಲತಾ

ವಾಸ್ತವ ಹೇಳಿದರು. ಇಷ್ಟು ಹೇಳಿದರೂ ರಾಘವನ ಹಲುಬು ಮಾತ್ರ ತಣಿಯಲಿಲ್ಲ. ಅಲ್ಲಿದ್ದ ನಾಲ್ಕು ದಿನ ಮತ್ತು ಆ ನಂತರದ ಸಂತೂರಿ ರಾಮಕಥಾದ ಐದು ದಿನವೂ ಆಕೆಯ ಮೇಲೆ ಅತ್ಯಾಚಾರ ನಡೆಯಿತು!!

ಜೋಧಪುರದಲ್ಲಿ 2013 ಫೆಬ್ರವರಿ 1ರಿಂದ 7ರ ತನಕ ರಾಮಕಥಾ ನಡೆಯಿತು. ಆಗ ಪ್ರೇಮಲತಾರ ಆರೋಗ್ಯ ಸರಿಯಿರಲಿಲ್ಲ. ಆದರೂ ಸ್ವಾಮಿ ಒತ್ತಾಯ ಮಾಡಿ ವಿಮಾನದಲ್ಲಿ ಆಕೆಯನ್ನು ಕರೆಸಿಕೊಂಡ. ಈತನಿಗೆ ಆಕೆ ರಾಮಕಥಾದ ಹಾಡುಗಾರಿಕೆಗಿಂತ ಹೆಚ್ಚಾಗಿ ತನ್ನ ಕಾಮ ಕಥನಕ್ಕೆ ಬೇಕಾಗಿದ್ದಳು. ಜೋಧಪುರದಲ್ಲಿ ಆ ನಿತ್ರಾಣಗೊಂಡಿದ್ದ ಹೆಣ್ಣಿನ ಮೇಲೆ ಈ ಕಾವಿ ಕಿರಾತಕ ನಿರಂತರ 7 ದಿನವೂ ಅತ್ಯಾಚಾರ ನಡೆಸಿದ್ದಾನೆ. ಬೆಂಗಳೂರಿಗೆ ಬಂದಾಗ ಆಕೆ ಆಸ್ಪತ್ರೆಯಲ್ಲೇ ಪ್ರಜ್ಞೆ ತಪ್ಪಿಬಿದ್ದರು. ಬರೋಬ್ಬರಿ ಮೂರು ತಿಂಗಳ ಯಾತನೆ ನಂತರ ಚೇತರಿಸಿಕೊಂಡರು.

ಆಕೆ ಚೇತರಿಸಿಕೊಂಡದ್ದೇ ರಾಘವ ಪೀಡೆ ಶುರುವಾಯ್ತು. 2012 ಏಪ್ರಿಲ್‌ನಲ್ಲಿ ಕುಮಟಾದ ಗೋರೆ ಗುಡ್ಡದ ಮೇಲಾದ ರಾಮಕಥಾಕ್ಕೆ ಬರುವಂತೆ ಪೀಠಾಜ್ಞೆ ಮಾಡಿಬಿಟ್ಟ! ಆಕೆ ಅನಿವಾರ್ಯವಾಗಿ ಭಾಗವಹಿಸಿದ್ದರು. "ನೀನು ರಾಮನ ದಯೆಯಿಂದ ಗುಣಮುಖಳಾಗಿ ಬಂದೆ...." ಎಂದು ಲಲ್ಲೆಗರೆದ ರಾಘವ ರಾಮಕಥೆಯ ಎಲ್ಲ ದಿನವೂ ಕಾಮಕಾಂಡ ನಿರಂತರವಾಗಿ ನಡೆಸಿದ!! 2013ರ ಏಪ್ರಿಲ್ 25ರಿಂದ 28ರ ತನಕ ಸಿಗಂದೂರಿನಲ್ಲಿ ಮತ್ತದೇ ರಾಮಕಥಾ ನಡೆಯಿತು. ಆರೋಗ್ಯ ಸರಿ ಇಲ್ಲದಿದ್ದರೂ ಪ್ರೇಮಲತಾ ಮಗಳನ್ನು ಧೈರ್ಯಕ್ಕೆ ಜತೆಯಲ್ಲಿಟ್ಟುಕೊಂಡು ಹೋದರು. ಆಕೆಯನ್ನು ಕಂಡಿದ್ದೇ ರಾಘವ ಉರಿದು ಬಿದ್ದಿದ್ದಾನೆ. ಹಿಂದಿನ



ಗೋಸ್ವಾಮಿ

ಗಾಯಕಿ ಪ್ರೇಮಲತಾ

ಆದೇಶದಂತೆ ಪ್ರೇಮಲತಾ ಮುಖ್ಯ ಗಾಯಕಿಯಾಗಿ ಭಾಗವಹಿಸಿದ್ದರು. ಅಲ್ಲಾಕೆಯ ಮೇಲೆ ಗೂಳಿ ಬರ್ಬರವಾಗಿ ಎರಗಿದೆ; ಮಂಗಳೂರಲ್ಲಿ ಜನವರಿ ಕೊನೆಯ ವಾರದಲ್ಲಿ ರಾಮಕಥಾ. ಅಲ್ಲಿಯ ಐದು ದಿನದಲ್ಲಿ ನಾಲ್ಕು ದಿನ ರಾಘು ಕಾಮ ಕಥಾ ನಡೆಸಿದ್ದಾನೆ. ಮೊದಲ ದಿನ ಮತ್ತು ಮೂರನೇ ದಿನ ಪ್ರೇಮಲತಾರ ಜತೆ ಆಕೆಯ ಗಂಡ-ಮಕ್ಕಳಿದ್ದರಿಂದ ಸ್ವಾಮಿ ಸಮಯ ಸಾಧಿಸಲಾಗಲಿಲ್ಲ. ಇದರಿಂದಾಗಿ ಗೂಳಿಗೆ ದಿವಾಕರ ಶಾಸ್ತ್ರಿ ಕಂಡರೆ ಕಡು ಕೋಪ ಉಕ್ಕುತ್ತಿತ್ತು. ಆತನ ಕಂಡಾಗಲೆಲ್ಲ ಸಿಡಿಮಿಡಿಗೊಳ್ಳುತ್ತಿದ್ದ.

ಗೋಕರ್ಣದ ಶಿವರಾತ್ರಿಯ ಸಂದರ್ಭದಲ್ಲಿ ಒಂದು ದಿನ ಪ್ರೇಮಲತಾರಿಗೆ ವಿಪರೀತ ರಕ್ತಸ್ರಾವ ಮತ್ತು ತಲೆನೋವು. ಆದರೂ ಆಕೆ ಸ್ವಾಮಿ ಆಣತಿಯಂತೆ ಆತನ ಕೊಠಡಿಗೆ ಹೋಗಬೇಕಾಗಿ ಬರುತ್ತದೆ. ಆಕೆ ತನ್ನ ಅನಾರೋಗ್ಯ ಹೇಳಿಕೊಳ್ಳುತ್ತಾಳೆ. ತನ್ನನ್ನು ಸುಮ್ಮನೆ ಬಿಟ್ಟು ಬಿಡಿ ಎಂದು ಬೇಡುತ್ತಾಳೆ. ಆದರೆ ಅದ್ಯಾವುದೂ ಕಾಮಪಿತ್ಥ ನೆತ್ತಿಗೇರಿದ ರಾಘವನಿಗೆ ಅರ್ಥವೇ ಆಗುವುದಿಲ್ಲ. ಕೆರಳಿದ ಕಾಮುಕನಂತೆ ಬರ್ಬರ ಅತ್ಯಾಚಾರ ನಡೆಸುತ್ತಾನೆ ಮುಟ್ಟಾದ ಹೆಂಗಸಿನ ಮೇಲೆ!! ಆಕೆ ಆಘಾತಗೊಳ್ಳುತ್ತಾಳೆ.

ಹೊಸನಗರದ ಮಠದಲ್ಲಿ 2012ರ ಮಾರ್ಚ್ 20ರಿಂದ ಏಪ್ರಿಲ್ 2ರ ತನಕ ರಾಮನವಮಿ ಸಡಗರ. ಆ ದಿನಗಳಲ್ಲಿ ಪ್ರೇಮಲತಾರ ಆರೋಗ್ಯ ಸಂಪೂರ್ಣ ಹದಗೆಟ್ಟಿರುತ್ತದೆ. ಅತೀ ರಕ್ತಸ್ರಾವ, ಮಂಡಿ-ಸೊಂಟ ನೋವು ಬಾಧಿಸುತ್ತಿತ್ತು. ಆಕೆಯ ಅನಾರೋಗ್ಯ ಗೊತ್ತಿದ್ದೂ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಹಠ ಹಿಡಿಯುತ್ತಾನೆ ಗೂಳಿ ಸ್ವಾಮಿ. ಅಲ್ಲಿದ್ದ ಎಲ್ಲ ದಿನವೂ ಪ್ರಾರ್ಥನೆ-ಪ್ರಸಾದ ಸೇವನೆ -ಆಣೆ-ಪ್ರಮಾಣದ ವಿಧಿ-ವಿಧಾನದಂತೆ ಹೇಯ ಅತ್ಯಾಚಾರ ನಡೆಸುತ್ತಾನೆ. ಆಕೆಯ ಆರೋಗ್ಯ ಹಾಳಾಗುತ್ತದೆ. ಸಾಗರದ ಲಕ್ಷ್ಮೀಹೆಗಡೆ ಮತ್ತು ಬೆಂಗಳೂರಿನ ಗಿರಿನಗರದ ವಿದ್ಯಾಭಟ್‌ರಿಂದ ಚಿಕಿತ್ಸೆ ಪಡೆಯುತ್ತಾರೆ.

ಕಿತ್ತೂರು ದೇವಿ ಮನೆಯ ದುರ್ಗಾ ದೇವಸ್ಥಾನದಲ್ಲಿ ಪ್ರೇಮಲತಾರ ಸಂಗೀತ ಕಾರ್ಯಕ್ರಮ ಇರುತ್ತದೆ. ಆಗ ಅಲ್ಲೇ ಟೆಂಟ್ ಹಾಕಿದ್ದ ಗೂಳಿ ಸ್ವಾಮಿ. ಉಪಾಯವಾಗಿ ತನ್ನಲ್ಲಿಗೆ ಪ್ರೇಮಲತಾರನ್ನು ಕರೆಸಿಕೊಳ್ಳುವ ಆತ "ನಿನ್ನ ಕಾರ್ಯಕ್ರಮ ನಾನೇ ಆಯೋಜಿಸಿದ್ದು" ಎಂದು ಒಲಿಸಲು ನೋಡುತ್ತಾನೆ. ಅಂದೂ ಅತ್ಯಾಚಾರ ನಡೆಸುತ್ತಾನೆ.

ಹೈರಾಣಾಗಿ ಹೋದರು. ಆಕೆಯ ಜೀವ ಯಾತನೆ ಅನುಭವಿಸುವಂತಾಯ್ತು. ಕಾಮಾತುರದಲ್ಲಿ ರಾಕ್ಷಸನಂತಾಗಿದ್ದ ರಾಘವನಿಗೆ ಆಕೆಯ ಯಾವ ಅಳಲೂ ಅರ್ಥವಾಗಲೇ ಇಲ್ಲ. ಆದರೂ ಆಕೆ ಪೀಠ ಭಯದಿಂದ ಮನಸ್ಸಿಲ್ಲದಿದ್ದರೂ ರಾಮಕತೆಯಲ್ಲಿ ಭಾಗಿಯಾಗುತ್ತಿದ್ದರು. ಅರ್ಥಾತ್ ರಾಘವನ ಕಾಮ ಕತೆಗೆ ಅಸಹಾಯಕಳಾಗಿ ಸಹಕರಿಸುತ್ತಿದ್ದರು.

ಮುಂಬೈನ ಕೋಲಾಡದಲ್ಲಿ ಮುಂಬರುವ ಚಾತುರ್ಮಾಸ್ಯದ ರಾಮಕಥಾ ತಾಲೀಮು 2012ರ ಜೂನ್ 13ರಿಂದ 26ರ ತನಕ ನಡೆದಿತ್ತು. ಅಲ್ಲಿಗೆ ಬರಲಾರೆನೆಂದು ಪ್ರೇಮಲತಾ ಪರಿಪರಿಯಾಗಿ ಹೇಳಿದರೂ ಸ್ವಾಮಿ ಕೇಳಲಿಲ್ಲ. ಅಷ್ಟೇ ಅಲ್ಲ, ವಿಪರೀತ ನಿಶ್ಶಕ್ತಿ-ರಕ್ತಸ್ರಾವ ಮತ್ತು ತಲೆನೋವಿಂದ ಬಳಲುತ್ತಿದ್ದ ಆಕೆಯ ದೇಹವನ್ನು ಸ್ವಾಮಿ ತಿಂದು ಹಾಕಿಬಿಟ್ಟ! ಎರಡು ದಿನವೂ ಆಕೆಯನ್ನೂ ರಾಮನೆಂದು ತನ್ನನ್ನೂ ಆರೋಪಿಸಿಕೊಳ್ಳುವ ರಾಘವ ಸಮರ್ಪಿಸಿಕೊಂಡು ಧನ್ಯನಾಗಿದ್ದಾನೆ. ಇದೇ ರೀತಿ 2012ರಲ್ಲಿ ಬೆಂಗಳೂರಿನಲ್ಲಿ ಚಾತುರ್ಮಾಸ ನಡೆದಿತ್ತು. ಆಗ ರಾಮಕಥಾ ನಡೆದ ಪ್ರತಿ ದಿನವೂ ರಾಘವ ಅತ್ಯಾಚಾರ ಮಾಡಿದ್ದಾನೆ. ಶಿರಸಿಯ ಅಂಬಾಗಿರಿಯಲ್ಲಿ ನಡೆದ ಅಂಬಾ ಕಥಾ ದಿನಗಳಲ್ಲಿ ಕುಮಟಾದ ಮೂರೂರಿನ ರಾಮಕಥಾ ತಯಾರಿ ಗಿರಿನಗರದ ಶಾಖಾಮಠದಲ್ಲಿ ನಡೆದಾಗ ಮತ್ತು ಮಾರೂರಲ್ಲಿ ಕಥಾ ನಡೆದಾಗ (2012 ಡಿಸೆಂಬರ್ 9 ರಿಂದ 12) ರಾಘವ ಲೈಂಗಿಕ ದಾಳಿ ಮಾಡಿ ಪ್ರಸನ್ನನಾಗಿದ್ದಾನೆ. ಆಕೆ ಅನಾರೋಗ್ಯದ ಬಗ್ಗೆ ಏನೇ ಹೇಳಿದರೂ ಆ ಕಾಮಪಿಪಾಸುನ ಮನ ಕರಗಲಿಲ್ಲ.

2013ರ ಜನವರಿಯಲ್ಲಿ ಮಂಗಳೂರಿನ ಮುಡಿಪು-ಕೈ ರಂಗಳದಲ್ಲಿ ರಾಮಕಥಾ ಹಮ್ಮಿಕೊಳ್ಳಲಾಗಿತ್ತು. ಪ್ರೇಮಲತಾರ ಆರೋಗ್ಯ ತುಂಬ ಹದಗೆಟ್ಟಿದ್ದ ದಿನಗಳವು. ರತ್ನಮಾಲಾ ಪ್ರಕಾಶ್ ಮತ್ತಿಬ್ಬರು ಗಾಯಕಿಯರು ಬಂದು ಹಾಡುವಂತೆ ಪ್ರೇಮಲತಾ ನೋಡಿಕೊಂಡರು. ಇದರಿಂದ ಕೆರಳಿದ ಸ್ವಾಮಿ ಆಕೆಯ ಮೇಲೆ ಎಗರಾಡಿದ. ಆಗ ಇದ್ದೆಲ್ಲ ಧೈರ್ಯ ಒಟ್ಟುಗೂಡಿಸಿಕೊಂಡು ಪ್ರೇಮಲತಾ ತಿರುಗಿ ಬಿದ್ದರು. "ಇದೆಲ್ಲ ಹೀಗೆ ನಡೆಯುವುದು... ಮುಂದುವರಿಯುವುದು ನನಗೆ ಸರಿ ಕಾಣಿಸುತ್ತಿಲ್ಲ... ಮನೆಯಲ್ಲಿ ಮಕ್ಕಳು-ಗಂಡನ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲ... ಅವರಿಗೆ ನಾನು ಕಾಳಜಿ ತೋರಿಸುತ್ತಿಲ್ಲ ಎಂಬ ಭಾವನೆ ಬಂದಿದೆ.... ಮನೆಯ ಪರಿಸ್ಥಿತಿ ಹಾಳಾಗುತ್ತಿದೆ..." ಎಂದು


ಕಾರ್ಯಕ್ರಮಕ್ಕೆ ಬರದಿದ್ದಕ್ಕೆ ತರಾಟೆಗೆ ತೆಗೆದುಕೊಂಡಿದ್ದಾನೆ. ಅಷ್ಟೇ ಅಲ್ಲ ಮಿಲನಕ್ಕೆ ಕರೆದಿದ್ದಾನೆ. ಆಕೆ ತಿರಸ್ಕರಿಸಿದ್ದಾರೆ. ಸ್ಥಿಮಿತ ಕಳೆಕೊಂಡ ಈ ಕಾಮ ದುರಂಧರ ಆಕೆಗೆ ಹೊಡೆದಿದ್ದಾನೆ. ಒದ್ದು ಕೆಡವಿದ್ದಾನೆ. ಫೇಟ್ ಅಷ್ಟಾವಕ್ರನಂತೆ! ಪಶುವಿನಂತೆ ಹಠ ರತಿ ನಡೆಸಿದ್ದಾನೆ!!

ಗುರು ಪೀಠದ ಪರಾಕ್ರಮದಿಂದ ಅಮಾಯಕ ಪ್ರೇಮಲತಾರನ್ನು ಕಬ್ಜಾ ಮಾಡಿಕೊಂಡು ಉಳುಮೆ ಮಾಡಿದ್ದ ಕಳ್ಳ ಸ್ವಾಮಿ ರಾಘವನ ಕ್ರೌರ್ಯ-ಕೊಳಕುತನ ಸಾಬೀತುಪಡಿಸಲು ಸಾಕಷ್ಟು ಸಾಕ್ಷ್ಯ-ಪುರಾವೆ-ಆಧಾರಗಳಿವೆ. ಆಕೆಯೂ ತನ್ನ ದೂರಿನಲ್ಲಿ ರಾಘವ ಯಾವ್ಯಾವ ರೀತಿಯ ಧಾರ್ಮಿಕ ತಂತ್ರಗಾರಿಕೆಯಿಂದ ತನ್ನನ್ನು ದುರ್ಬಳಕೆ ಮಾಡಿಕೊಂಡು ಲೌಕಿಕಾನಂದ ಪಡೆದನೆಂಬುದು ವಿವರಿಸಿದ್ದಾರೆ. ಆದರೂ ಈ ಗೋಕರ್ಣ ಮಂಡಲಾಧೀಶ ತಾನೊಬ್ಬ ಸರ್ವಗುಣ ಸಂಪನ್ನನಾದ ಪವಿತ್ರ ಯತಿ ಎಂಬಂತೆ ಮೈತುಂಬ ಕಾವಿ ಹೊದ್ದುಕೊಂಡು ಪ್ರವಚನ ಕೊಡುತ್ತಿದ್ದಾನೆ.

ಧರ್ಮ ಸಭೆಗಳಲ್ಲಿ ತನ್ನ ಕರ್ಮಾಚಾರ ಮರೆಮಾಚಿ ನೀತಿ-ನೈತಿಕತೆ ಪಾಠ ಬೋಧಿಸುತ್ತ ಪರೋಕ್ಷವಾಗಿ ಪ್ರೇಮಲತಾ ದಂಪತಿ ಪ್ರಕರಣ ಪ್ರಸ್ತಾಪಿಸಿ ಅಂಧಶ್ರದ್ಧೆಯ ಅನುಯಾಯಿಗಳನ್ನು ಕೆರಳಿಸುತ್ತಿದ್ದಾನೆ. ಶಾಸ್ತ್ರಿ ಫ್ಯಾಮಿಲಿಯನ್ನು ಗುರುಪೀಠದ ಪರಮಶತ್ರುಗಳೆಂಬಂತೆ ಬಿಂಬಿಸಿ ಪೆದ್ದು ಭಕ್ತರನ್ನು ಗುರಾಣಿಯಂತೆ ಬಳಸುತ್ತಿದ್ದಾನೆ. ಈ ಅನಾಹುತಕಾರಿ ಬೆದೆ ಬಸವ ಕೌಪೀನವನ್ನು ಹವ್ಯಕರು ಬಿಗಿಗೊಳಿಸದಿದ್ದರೆ ಆ ಸಮಾಜದ ಇನ್ನಷ್ಟು ಪಾಪದ ಹೆಣ್ಣುಗಳಿಗೆ ಗಂಡಾಂತರ ಖಂಡಿತ.

ಇಂಥ ಹಲವು ಕಾಮಕಾಂಡಗಳನ್ನು ರಾಘವ ಸ್ವಾಮಿ ಮಾಡಿದ್ದಾನೆಂಬುದು ರಾಮಚಂದ್ರಾಪುರ ಮಠದ ಗಿಂಡಿ ಮಾಣಿಗಳಿಗಷ್ಟೇ ಅಲ್ಲ ಗಿಂಡಿ-ಗಿಂಡಿಗೂ ಗೊತ್ತಿರುವ ಸಂಗತಿ. ಪೊಲೀಸರು ನಿಷ್ಠೂರ ತನಿಖೆ ನಡೆಸಿದರೆ ಆತನ ತರತರದ ಸಪ್ತಶತಿ ಕ್ರಿಯಾವಿಧಿಗಳು, ತಂತ್ರಯೋನಿ ಮಹಿಮೆಗಳು, ಏಕಾಂತ ದರ್ಶನದ ಲೀಲೆಗಳು ಸಾಲು-ಸಾಲಾಗಿ ಹೊರಬರುವುದು ಗ್ಯಾರಂಟಿ. ಸದ್ಯಕ್ಕಂತೂ ಪೊಲೀಸರು ಕೈಕಟ್ಟಿ ಕೂತಿದ್ದಾರೆ. ಖಾಕಿಗಳಿಗೆ ಹಳಿಗೆ ತಂದರ ರಾಮಚಂದ್ರಾಪುರ ಮಠದ ಪೀಠದಡಿಯಲ್ಲಿ ಇನ್ನಷ್ಟು ಹೆಣ್ಣುಗಳ ಮಾನ-ಪ್ರಾಣ ಹೋಗೋದು ತಪ್ಪಬಹುದೆಂಬುದು ರಾಘವನ ಇತಿಹಾಸ-ಭೂಗೋಳ ಬಲ್ಲವರು ಹೇಳುತ್ತಿದ್ದಾರೆ.

● ಶುದ್ದೋಧನ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಪೋಸ್ಟ್‌ಮ್ಯಾನ್‌ನ ಬ

ಮುಂದಿನ ಒಂದು ತಿಂಗಳು ಯಾವುದೇ ತಂತಿ ಸಮಚಾರ ಬರಲಿಲ್ಲ. ಹಾಗಾಗಿ ಚಿರತೆ ಯೆಲ್ಲಗಿರಿ ಬೆಟ್ಟಗಳಿಂದ ಹೊರಟು ಮಧ್ಯದ ಹೊಲಗಳನ್ನು ಹಾದು ಜಾವಡಿ ಬೆಟ್ಟಗಳ ದಟ್ಟವಾದ ಅರಣ್ಯ ಪ್ರದೇಶಕ್ಕೆ ಹೋಗಿರಬೇಕು ಅನ್ನಿಸಿತು. ಈ ಜಾವಡಿ ಬೆಟ್ಟಗಳು ಬಹಳ ವಿಶಾಲವಾದ ಪ್ರದೇಶವಾಗಿದ್ದು ತಿರುವಣ್ಣಾಮಲೈ ಬೆಟ್ಟಗಳವರೆಗೂ ಹಬ್ಬಿತ್ತು.

ಆದರೆ ನನ್ನ ಈ ಊಹೆ ಸುಳ್ಳಾಗಿತ್ತು.

ಏಳು ವಾರಗಳ ನಂತರ ನನಗೆ ತಂತಿ ಸಂದೇಶವೊಂದು ತಲುಪಿತು. ಜಾಲರ್‌ಪೇಟೆಯಿಂದ ಯೆಲ್ಲಗಿರಿ ಬೆಟ್ಟಗಳಲ್ಲಿ ವಾಸಿಸುವ ಜನರಿಗೆ ಅಂಚೆಯನ್ನು ತಲುಪಿಸುವ ವ್ಯಕ್ತಿಯನ್ನು ಚಿರತೆ ಕೊಂದಿತ್ತು. ತಂತಿ ಸಂದೇಶ ನನಗೆ ಮಧ್ಯಾಹ್ನ ಮೂರು ಗಂಟೆಯ ನಂತರ ತಲುಪಿತು. ಆದರೂ ತಕ್ಷಣ ಹೊರಟು ರೈಲಿನಲ್ಲಿ ರಾತ್ರಿ 10.30ಕ್ಕೆ ಜಾಲರ್‌ಪೇಟೆಯನ್ನು ತಲುಪಿದೆ. ನಾನು ತಂದಿದ್ದ ಪೆಟ್ರೋಮಾಕ್ಸ್ ದೀಪದ ಪ್ರಖರ ಬೆಳಕಿನಲ್ಲಿ ನಡೆದು ಎಂಟು ಮೈಲು ದೂರದ ಬೆಟ್ಟದಲ್ಲಿದ್ದ ಹಳ್ಳಿಯನ್ನು ರಾತ್ರಿ 2 ಗಂಟೆಗೆ ತಲುಪಿದೆ. ಸಾಮಾನ್ಯ ಸಂದರ್ಭಗಳಲ್ಲಿ ನರಭಕ್ಷಕ ಚಿರತೆಯ ಪ್ರದೇಶದಲ್ಲಿ ಕಡಿದಾದ ಬಂಡೆಯ ದಾರಿಯಲ್ಲಿ ರಾತ್ರಿಯ ಹೊತ್ತು ಹೋಗುವ ಅಪಾಯವನ್ನು ನಾನು ಎದುರಿಸುತ್ತಿರಲಿಲ್ಲ. ಆದರೆ ಪೆಟ್ರೋಮಾಕ್ಸ್ ದೀಪದ ಬೆಳಕು ಇರುವವರೆಗೆ ನಾನು ಸುರಕ್ಷಿತ ಎಂದು ನನಗೆ ತಿಳಿದಿತ್ತು. ನನ್ನ ಭಾರದ ಸರಂಜಾಮುಗಳನ್ನು ಹೊತ್ತು ಬೆಟ್ಟವನ್ನೇರುವ ಹೊತ್ತಿಗೆ ನಾನು ಬೆವರಿನಲ್ಲಿ ತೊಯ್ದು ಹೋಗಿದ್ದೆ. ಬೀಸುತ್ತಿದ್ದ ತಂಗಾಳಿ ಒದ್ದೆಯಾದ ನನ್ನ ಬಟ್ಟೆಗಳನ್ನು ಒಣಗಿಸುತ್ತಿತ್ತು.

ನಾನು ಪಟೇಲನನ್ನು ಎಬ್ಬಿಸಿದೆ. ಅವನು ಊರಿನ ಜನರನ್ನು ಸೇರಿಸಿದ. ನಾನು ಪಟೇಲ ಚೊಂಬಿನಲ್ಲಿ ನೀಡಿದ ಚಹಾವನ್ನು ಚಪ್ಪರಿಸುತ್ತಾ ಅವರು ಹೇಳಿದ ಕಥೆಯನ್ನು ಕೇಳತೊಡಗಿದೆ.

ನಾನು ಹಿಂದಿನ ಸಾರಿ ಬಂದುಹೋದ ಮೇಲೆ ಜನ ಚಿರತೆಯ ಭಯದಿಂದ ಹಗಲಿನಲ್ಲಿ ಗುಂಪಾಗಿ ತಿರುಗಾಡುತ್ತಾ ರಾತ್ರಿಯ ಹೊತ್ತು ಮನೆಯ ಒಳಗಡೆಯೇ ಇರುತ್ತಿದ್ದರು. ಆದರೆ ಸುಮಾರು ದಿನಗಳು ಚಿರತೆ ಯಾರ ಕಣ್ಣಿಗೂ ಬೀಳದೆ ಹೋದದ್ದರಿಂದ ನಿಧಾನವಾಗಿ ಅವರು ತಮ್ಮ ಎಚ್ಚರಿಕೆಯನ್ನು ಮರೆತರು.

ಈ ಅಂಚೆಯನ್ನು ಹಂಚುವ ವ್ಯಕ್ತಿ ಪ್ರತಿದಿನ ಬೆಳಗ್ಗೆ ಆರು ಗಂಟೆಗೆ ತನ್ನ ಹೊರೆಯನ್ನು ಹೆಗಲಿಗೆ ಹಾಕಿಕೊಂಡು ಅಥವಾ ತಲೆಯಮೇಲಿಟ್ಟುಕೊಂಡು ಜಾಲರ್‌ಪೇಟೆಯಿಂದ ಬೆಟ್ಟದ ಕಡೆ ಹೊರಡುತ್ತಿದ್ದ. ಅವನ ಬಳಿ ಇರುತ್ತಿದ್ದ ಒಂದೇ ಒಂದು ಆಯುಧವೆಂದರೆ ಕಬ್ಬಿಣದ ಬಳೆಗಳನ್ನು ಹಾಕಿರುತ್ತಿದ್ದ ಒಂದು ದೊಣ್ಣೆ. ಇದು ಆಯುಧ ಎನ್ನುವುದಕ್ಕಿಂತ ಹೆಚ್ಚಾಗಿ ಅಂಚೆ ಇಲಾಖೆಯ ಲಾಂಛನವಾಗಿತ್ತು. ದೊಣ್ಣೆಯನ್ನು ಆಗಾಗ ನೆಲಕ್ಕೆ ಕುಟ್ಟುತ್ತಾ ಸಾಗುತ್ತಿದ್ದಾಗ ಆ ಕಬ್ಬಿಣದ ಬಳೆಗಳು ಒಂದಕ್ಕೊಂದು ಹೊಡೆದುಕೊಂಡು ದೊಡ್ಡದಾಗಿ ಕಣಕಣ ಸದ್ದನ್ನು ಮಾಡುತ್ತಿದ್ದವು. ಇದು ಅಂಚೆಯವನಿಗೆ ಹಾವುಗಳಿಂದ ರಕ್ಷಣೆ ನೀಡುತ್ತಿತ್ತಲ್ಲದೆ ಜನರಿಗೂ ಅಂಚೆ ಬರುತ್ತಿದ್ದುದರ ಸೂಚನೆ ನೀಡುತ್ತಿತ್ತು. ಭಾರತದ ಉದ್ದಗಲಕ್ಕೂ ನೂರಾರು ವರ್ಷಗಳಿಂದ ಜಾರಿಯಲ್ಲಿದ್ದ ಪದ್ಧತಿ ಇದು.

ಆ ದುರಾದೃಷ್ಟದ ದಿನ ಅಂಚೆಯ ವ್ಯಕ್ತಿ ಜಾಲರ್‌ಪೇಟೆಯಿಂದ ಮಾಮೂಲಿನಂತೆ ಹೊರಟಿದ್ದರೂ ಬೆಟ್ಟದ ತುದಿಯನ್ನು ತಲುಪಲಿಲ್ಲ. ಹಳ್ಳಿಯ ಜನಗಳಿಗೆ ಅವನ ಮಾಮೂಲಿನ ಕಣಕಣ ಸದ್ದು ಕೇಳದಿದ್ದರೂ ಯಾರೂ ಹೆಚ್ಚು ಗಮನ ಹರಿಸಲಿಲ್ಲ.

ಮಧ್ಯಾಹ್ನದ ನಂತರ ಒಂದು ಜನರ ಗುಂಪು ಬೆಟ್ಟದಿಂದ ಜಾಲರ್‌ಪೇಟೆಯ ಕಡೆ ಹೊರಟಿತು. ಮಾರ್ಗದಲ್ಲಿ ಅವರು ಬಂಡೆಯೊಂದರ ಮೇಲೆ ರಕ್ತದ ಕಲೆಯನ್ನು ಗಮನಿಸಿದರು. ಇದು ಏನಿರಬಹುದೆಂದು ತಿಳಿಯಲು ಅವರು ಸುತ್ತಮುತ್ತಲೂ ಪರೀಕ್ಷಿಸುತ್ತಿದ್ದಾಗ ಹತ್ತಿರದಲ್ಲೇ ಅಂಚೆಯವನ ದೊಣ್ಣೆ ಬಿದ್ದಿದ್ದನ್ನು ಕಂಡರು. ಭಯಗೊಂಡ ಅವರು ಹಳ್ಳಿಗೆ ಹಿಂತಿರುಗಿ ಹೆಚ್ಚು ಜನರನ್ನು ಸೇರಿಸಿಕೊಂಡು ಮತ್ತೆ ಆ ಸ್ಥಳಕ್ಕೆ ಬಂದರು. ರಕ್ತದ ಜಾಡನ್ನು ಹಿಡಿದುಹೋದಾಗ ಅವರಿಗೆ ಆ ನತದೃಷ್ಟ ಅಂಚೆಯವನ ಅರ್ಧತಿಂದ ಶವ ದೊರಕಿತು. ತಕ್ಷಣ ಊರಿನ ಪಟೇಲ ಜಾಲರ್‌ಪೇಟೆಗೆ ಬಂದು ಕಳಿಸಿದ ತಂತಿ ನನಗೆ ಮರುದಿನ ಮಧ್ಯಾಹ್ನ ತಲುಪಿತು. ಅಷ್ಟರಲ್ಲಿ ಆಗಲೇ ಪೊಲೀಸರು ಶವವನ್ನು ಮರಣೋತ್ತರ ಪರೀಕ್ಷೆಗಾಗಿ ತೆಗೆದಿದ್ದರು.

ಇಷ್ಟೆಲ್ಲಾ ಸಮಾಚಾರ ಸಂಗ್ರಹಿಸುವಷ್ಟರಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಯಾಗಿತ್ತು. ಊರಿನ ಹೊರವಲಯದಲ್ಲಿ ಪಟೇಲ ಕೊಟ್ಟ ಹಗ್ಗದ ಮಂಚದ ಮೇಲೆ ಮಲಗಿ ಎರಡು ಗಂಟೆ ನಿದ್ದೆ ತೆಗೆದೆ. ಬೆಳಗ್ಗೆ ಊರಿನ ನಾಯಿಗಳು ಅನುಮಾನದಿಂದ ನನ್ನತ್ತ ಕೂಗತೊಡಗಿದಾಗ ಎಚ್ಚರವಾಯಿತು.

ಬಲಿಪಶುಗಳಾಗಿ ಕತ್ತೆಗಳು

ಈ ಯೆಲ್ಲಗಿರಿ ಬೆಟ್ಟಗಳಲ್ಲಿ ದಟ್ಟವಾದ ಅರಣ್ಯ ಹೆಚ್ಚಾಗಿ ಇರಲಿಲ್ಲ. ಹಾಗಾಗಿ ಕಾಡಿನಲ್ಲಿ ವಾಸಿಸುವ ಜನಗಳೂ ಇರಲಿಲ್ಲ. ನಾನು ಹಳ್ಳಿಗರಿಂದಲೇ ಮಾಹಿತಿ ಸಂಗ್ರಹಿಸಿ ಚಿರತೆಯ ಜಾಡು ಹಿಡಿಯಬೇಕಾಗಿತ್ತು. ಅಲ್ಲಿನ ಕೆಲವು ದನಗಾಹಿಗಳು ಹೇಳಿದ ಪ್ರಕಾರ ಅವರು ಹಿಂದಿನ ಕೆಲವು ವಾರಗಳಿಂದ ಪೆರಿಯಮಲೈನ (ದೊಡ್ಡ ಬೆಟ್ಟ) ಬಂಡೆಯೊಂದರ ಮೇಲೆ ಚಿರತೆಯೊಂದು ಮಧ್ಯಾಹ್ನದ ಹೊತ್ತು ಬಿಸಿಲು ಕಾಯಿಸುತ್ತಿದ್ದುದನ್ನು ನೋಡಿದ್ದರು. ಯೆಲ್ಲಗಿರಿ ಬೆಟ್ಟಗಳ ಮೇಲಿನ ಸಮತಟ್ಟಾದ ಜಾಗದಿಂದ ಮತ್ತೊಂದು ಬೆಟ್ಟದಂತೆ ಮೇಲೆದ್ದಿದ್ದ ಈ ಪೆರಿಯಮಲೈ ಸಮುದ್ರ ಮಟ್ಟದಿಂದ ಸುಮಾರು 4,500 ಅಡಿ ಎತ್ತರದಲ್ಲಿತ್ತು. ದನಗಾಹಿ ಹುಡುಗರನ್ನು ನನಗೆ ಆ ಸ್ಥಳ ತೋರಿಸಲು ಕೇಳಿದೆ. ಅವರು ಭಯದಿಂದ ನನ್ನ ಜೊತೆ ಬರಲು ಹಿಂಜರಿದರು. ಆದರೂ ಪಟೇಲ ತನ್ನ ಪ್ರಭಾವ, ಬೆದರಿಕೆಗಳನ್ನೆಲ್ಲಾ ಪ್ರಯೋಗಿಸಿ ಅವರನ್ನು ಒಪ್ಪಿಸಿದ.

ಪೆರಿಯಮಲೈ ಈ ಹಳ್ಳಿಯಿಂದ ಜಾಲರ್‌ಪೇಟೆಯ ವಿರುದ್ಧ ದಿಕ್ಕಿನಲ್ಲಿ ಮೂರು ಮೈಲು ದೂರದಲ್ಲಿತ್ತು. ಅಂಚೆಯ ವ್ಯಕ್ತಿ ಬಲಿಯಾದ ಜಾಗದಿಂದ ಐದು ಮೈಲು ದೂರದಲ್ಲಿ ಈ ಬೆಟ್ಟವಿದ್ದು ಮಧ್ಯದಲ್ಲಿನ ಪ್ರದೇಶದಲ್ಲಿ ಕೃಷಿಯನ್ನು ಮಾಡಲಾಗುತ್ತಿತ್ತು. ಹಾಗಾಗಿ ದನಗಾಹಿಗಳು ನೋಡಿದ ಚಿರತೆ ನರಭಕ್ಷಕನಲ್ಲದೆ ಬೇರೆಯದೇ ಇರಬೇಕು ಅನ್ನಿಸಿತು. ಏಕೆಂದರೆ ಇಷ್ಟು ವಿಶಾಲವಾದ ಕೃಷಿ



ಜಮೀನನ್ನು ಚಿರತೆ ಹಾದು ಹೋಗಿರುವ ಸಾಧ್ಯತೆ ಇರಲಿಲ್ಲ.

ಬೆಟ್ಟದ ಬುಡಕ್ಕೆ ಬಂದ ದನಗಾಹಿಗಳು ಮುನ್ನೂರ ಅಡಿ ಎತ್ತರದಲ್ಲಿದ್ದ ಬಂಡೆಯನ್ನು ತೋರಿಸಿ ಅದರ ಮೇಲೆ ಚಿರತೆ ವಿಶ್ರಮಿಸುತ್ತಿತ್ತು ಎಂದು ಹೇಳಿದರು. ಆ ಬಂಡೆಯವರೆಗಿನ ಸಂಪೂರ್ಣ ಪ್ರದೇಶದಲ್ಲಿ ಲಂಟಾನ ಬೆಳೆದಿತ್ತು. ಹೀಗೆ ಲಂಟಾನ ಗಿಡಗಳು ಹಬ್ಬಿಕೊಂಡು ಮರಗಳನ್ನು ನಾಶಮಾಡುತ್ತಿದ್ದುದನ್ನು ನಾನು ದಕ್ಷಿಣ ಭಾರತದ ಸಾಕಷ್ಟು ಕಾಡುಗಳಲ್ಲಿ ನೋಡಿದ್ದೆ. ಭೇದಿಸಲಾಗದ ಇಂತಹ ಲಂಟಾನ ಮುಳ್ಳುಗಳ ಮತ್ತು ಬಂಡೆಗಳ ಮಧ್ಯೆ ಚಿರತೆಯನ್ನು ಹುಡುಕುವುದು ಅಸಾಧ್ಯವೆಂದು ನನಗನ್ನಿಸಿತು. ಆದ್ದರಿಂದ ನಾನು ಒಂದು ಮರದ ಕೆಳಗಿನ ಜಾಗವನ್ನು ಗುರುತಿಸಿ, ಅಲ್ಲಿ ಊರಿನಿಂದ ಬಲಿಯೊಂದನ್ನು ತಂದು ಕಟ್ಟಬೇಕೆಂದು ನನ್ನ ಜೊತೆ ಬಂದವರಿಗೆ ತಿಳಿಸಿದೆ.

ಈ ಬಾರಿ ಪಟೇಲನ ಸಹಾಯದಿಂದ ಒಂದು ಕತ್ತೆಯನ್ನು ಬಲಿಪಶುವನ್ನಾಗಿ ಆರಿಸಿದೆ. ನಾನು ರಾತ್ರಿ ಚಿರತೆಗಾಗಿ ಕಾಯುವ ಉದ್ದೇಶ ಹೊಂದಿರಲಿಲ್ಲ. ಕುರಿ ತನ್ನ ಕೂಗಿನಿಂದ ಚಿರತೆಯನ್ನು ಆಕರ್ಷಿಸಬಹುದಾಗಿದ್ದರೂ ಅದನ್ನು ಚಿರತೆ ಒಂದೇ ಬಾರಿಗೆ ತಿಂದು ಮುಗಿಸುತ್ತಿತ್ತು. ಕತ್ತೆಯಂತಹ ದೊಡ್ಡ ಪ್ರಾಣಿಯಾದರೆ ಚಿರತೆಗೆ ಒಂದೇ ಬಾರಿಗೆ ತಿಂದು ಖಾಲಿಮಾಡಲು ಸಾಧ್ಯವಾಗದೆ ಮರುದಿನ ಅದಕ್ಕಾಗಿ ಮತ್ತೆ ಹಿಂತಿರುಗುತ್ತಿತ್ತು ಎನ್ನುವುದು ನನ್ನ ಯೋಜನೆಯಾಗಿತ್ತು.

ನಾನು ಪಟೇಲನೊಂದಿಗೆ ಅಂಚೆಯವನು ಬಲಿಯಾದ ಸ್ಥಳಕ್ಕೆ ಬಂದೆ. ಹಿಂದಿನ ರಾತ್ರಿ ನಾನು ಇದೇ ದಾರಿಯಲ್ಲಿ ಹಾದುಹೋಗಿದ್ದರೂ ರಕ್ತದ ಕಲೆಯನ್ನು ಗುರುತಿಸಿರಲಿಲ್ಲ. ಹಾಗೊಮ್ಮೆ ಗುರುತಿಸಿದ್ದರೆ ನಾನು ಚಿರತೆಯ ಭಯದಿಂದ ಸ್ವಲ್ಪ ಚಿಂತೆಗೊಳಗಾಗುತ್ತಿದ್ದೆ. ರಕ್ತದ ಗುರುತುಗಳಿದ್ದ ಸ್ಥಳದಿಂದ ಮುನ್ನೂರು ಗಜ ದೂರದಲ್ಲಿ ಗೇರುಮರವೊಂದಿತ್ತು. ಅದರ ಕೆಳಗೆ ನಾವು ಮತ್ತೊಂದು ಕತ್ತೆಯನ್ನು ಕಟ್ಟಿದೆವು. ಮೂರನೆ ಕತ್ತೆಯನ್ನು ಊರಿನ ಹತ್ತಿರವಿದ್ದ ಪೊದೆಕಾಡು ಶುರುವಾಗುವ ಸ್ಥಳದಲ್ಲಿ ಕಟ್ಟಿದೆವು.

ಅಷ್ಟೆಲ್ಲಾ ಆಗುವ ಹೊತ್ತಿಗೆ ಮಧ್ಯಾಹ್ನವಾಗಿತ್ತು. ನನಗೆ ಅಲ್ಲಿ ಕೆಲಸವೇನೂ ಇರಲಿಲ್ಲ. ಪಟೇಲನು ವ್ಯವಸ್ಥೆ ಮಾಡಿದ್ದ ರುಚಿಯಾದ - ಕೆಂಪುಮೆಣಸಿನಕಾಯಿಯನ್ನು ಹಾಕಿದ್ದರಿಂದ ಖಾರವಾದ - ಊಟವನ್ನು ಮ ಖಾರವನ್ನು ತಡೆಯಲಾರದೆ ಮೈಯೆಲ್ಲಾ ಬೆವರುತ್ತಿದ್ದರೂ ನಾನು ಸ ಕಾಫಿಯನ್ನು ಹೀರಿ ತೃಪ್ತನಾದೆ!

ನಂತರ ಸಮಯ ಕಳೆಯಲು ನಾನು ನನ್ನ ಜಮೀನಿಗೆ ಹೋದೆ. ಚಿಕ್ಕದಾ ನಾನು ಅದನ್ನು ಚೊಕ್ಕದಾಗಿ ಇಟ್ಟಿದ್ದೆ. ಕೆಲವು ಹಲಸು, ಸೀಬೆ ಮ ಮರಗಳಿದ್ದು ತರಕಾರಿ ಮತ್ತು ಹೂವಿನ ಗಿಡಗಳನ್ನೂ ಬೆಳೆಸಿದ್ದೆ. ಹತ್ತು ಹನ್ನೆರಡು ಕೋಳಿಗಳನ್ನು ಸಾಕಿದ್ದೆ. ಪಕ್ಕದಲ್ಲೇ ಹರಿಯ ತೊರೆಯೊಂದರಿಂದ ನೀರನ್ನು ತಂದು ಬರ್ಮ ತಳಿಯಾದ ಕಪ್ಪು ಅಕ್ಕಿ ಕೂಡ ಬೆಳೆಯುತ್ತಿದ್ದೆ. ನನಗೆ ತಿಳಿದಿರುವಂತೆ ದಕ್ಷಿಣ ಭಾರತದಲ್ಲಿ ಕಪ್ಪು ಅಕ್ಕಿ ಕೃಷಿ ಮಾಡುವ ಪ್ರಯತ್ನಗಳು ವಿಫಲವಾಗಿದ್ದು ಕೆಲವು ಕಡೆ ಬೆಳೆಯಲಾಗುತ್ತಿತ್ತು. ಒಟ್ಟಾರೆ ಬೆಂಗಳೂರಿನಿಂದ ಭಾನುವಾರವನ್ನು ಕಳೆ ಬರುವುದಕ್ಕೆ ಇದು ಉತ್ತಮ ಜಾಗವಾಗಿತ್ತು.

ಆಂಡರ್ಸನ್ ರಿಸಾರ್ಟ್‌ನಲ್ಲಿ ಪ್ರೇತ!

ಈ ಜಮೀನಿಗೆ ಒಂದು ವಿಚಿತ್ರ ಇತಿಹಾಸವಿದೆ. ಇಲ್ಲಿರುವ ಗುಡಿಸಲುಗಳಲ್ಲಿ ಒಂದಕ್ಕೆ ನನಗೆ ಜಮೀನನ್ನು ಮಾರಿದ ಆಂಗ್ಲೋ ಇಂಡಿ ಮಹಿಳೆಯ ಅಣ್ಣನ ಪ್ರೇತ ಆಗಾಗ ಭೇಟಿ ನೀಡುತ್ತಿತ್ತು ಎಂಬ ನಂಬಿಕೆ 1941ರಲ್ಲಿ ನಾನು ಈ ಜಮೀನನ್ನು 500 ರೂಪಾಯಿಗಳಿಗೆ ಖರೀ ಇದನ್ನು ಮೊದಲು ಒಬ್ಬ ಆಂಗ್ಲೋ ಇಂಡಿಯನ್ ವ್ಯಕ್ತಿ ಕೊಂಡಿದ್ದನು. ಇಪ್ಪತ್ತೈದು ವರ್ಷಗಳು ಇಲ್ಲಿ ಬದುಕಿದ್ದು ಜಮೀನಿನ ಬಗೆಗೆ ತುಂಬಾ ಪ್ರೀತಿ ಬೆಳೆಸಿಕೊಂಡಿದ್ದನಂತೆ. ಅವನಿಗೆ ಹೆಂಡತಿ ಮಕ್ಕಳಿರಲಿಲ್ಲ. ತನಗೆ ಬಂದ ಯಾವ ವಿಚಿತ್ರ ಖಾಯಿಲೆಯಿಂದ ಸಾಯುವಾಗ ಜಮೀನನ್ನು ತನ್ನ ತಂಗಿಗೆ ಕೊಟ್ಟಿದ್ದನು. ಮರಣಾನಂತರ ಸಂಜೆಯ ಸಮಯದಲ್ಲಿ ಇಲ್ಲಿನ ಗುಡಿಸಲಿನ ಮುಂದೆ ಅವನು ನಿಂತಿರುತ್ತಿದ್ದ ಊರಿನವರು ಹೇಳುತ್ತಿದ್ದರು. ಹಾಗಾಗಿ ಅವರು ಸ್ಥಳಕ್ಕೆ ಬರುವುದನ್ನು ತಪ್ಪಿಸುತ್ತಿದ್ದರು.

ನನಗೆ ಈ ವಿಷಯ ತಿಳಿದರೆ ನಾನು ಜಮಿ ಖರೀದಿಸದೆ ಹೋಗಬಹುದೆಂದು ಆ ಆಂ ಇಂಡಿಯನ್ ಮಹಿಳೆ ನೋಂದಣಿಯಾಗುವವರೆಗೆ ತಿಳಿಸಲಿಲ್ಲ. ನಂತರ ಅವಳು ತನ್ನ ಅಣ್ಣ ಆಗಾಗ ರಾ ಹೊತ್ತು ಅಲ್ಲಿ ಅಡ್ಡಾಡುವುದನ್ನು ತಾನು ಕಂಡಿದ್ದೇನೆ ಆದರೆ ಆ ಪ್ರೇತ ಯಾರಿಗೂ ತೊಂ ಮಾಡುವುದಿಲ್ಲವೆಂದೂ ತಿಳಿಸಿದಳು!

ಈ ಜಮೀನು ಮತ್ತು ಗುಡಿಸಲುಗಳ ಅದರಲ್ಲಿದ್ದ ಕೆಲವು ಹಳೆಯ ಪೀಠೋಪಕರಣಗಳೂ ಸಿಕ್ಕಿತ್ತು. ಅವುಗಳಲ್ಲಿ ಒಂದು ಸತ್ತ ವ್ಯಕ್ತಿ ಮಲ ಹಳೆಯ ರೀತಿಯ ಮಂಚವಾಗಿತ್ತು. ಜಮೀ ಖರೀದಿಸಿದ ಮೇಲೆ ಮೊದಲಬಾರಿಗೆ ಒಂದು ನಾನು ಆ ಮಂಚದ ಮೇಲೆ ಮಲಗಿದ್ದೆ. ಮಂಚ ಬಹಳ ಒತ್ತುತ್ತಿದೆ ಅನ್ನಿಸಿ ನಿದ್ದೆ ಬಾರದೆ ನನ್ನ ಹಾಸಿಗೆ ನೆಲಕ್ಕೆ ಹಾಸಿ ಮಲಗಿದೆ. ಗುಡಿಸಲಿನಲ್ಲಿ ವಿ ದೀಪಗಳಿರಲಿಲ್ಲ. ರಾತ್ರಿ ಜೋರಾಗಿ ಮಳೆ ಬರು ಗಾಢವಾದ ನಿದ್ದೆಯಲ್ಲಿದ್ದ ನನಗೆ ಏಕೋ ಎಚ್ಚರವಾ ಒಳಗೆ ಸಂಪೂರ್ಣ ಕತ್ತಲು ಆವರಿಸಿತ್ತು. ಭಾ ಮತ್ತು ಹಿಮದಂತೆ ತಣ್ಣಗಿದ್ದ ಏನೋ ಒಂದು ಹರಿದುಬಂದು ನನ್ನ ಗಂಟಲಿನ ಮೇಲೆ ಕುಳಿತು ಮಂಜಿನಂತಹ ತಣ್ಣಗಿನ ಮತ್ತು ಒದ್ದೆಯಾದ ಬಾಹು ನನ್ನ ಕುತ್ತಿಗೆಯ ಇಕ್ಕೆಲಗಳಲ್ಲಿ ಚಾಚಿದ ಅನುಭವವಾಯಿತು.

ನಾನು ಕತ್ತಲಿಗೆ ಹೆದರುತ್ತಿರಲಿಲ್ಲ ಮತ್ತು ನನಗೆ ಯಾವ ಮೂಢನಂಬಿಕೆ ಇರಲಿಲ್ಲ. ಆದರೂ ಆ ಕ್ಷಣದಲ್ಲಿ ನನಗೆ ಸತ್ತ ಆಂಗ್ಲೋ ಇಂಡಿಯನ್ ಮತ್ತು ಅವನ ಪ್ರೇತದ ನೆನಪಾಯಿತು. ನನ್ನ ಟಾರ್ಚ್ ಸ್ವಲ್ಪ ದ ಕಿಟಕಿಯ ಮೇಲಿತ್ತು. ಬೆಂಕಿ ಪೊಟ್ಟಣವನ್ನು ಎಲ್ಲಿಟ್ಟಿದ್ದೇನೆಂದು ನೆನಪಿ ಅಷ್ಟರಲ್ಲಿ ಆ ತಣ್ಣಗಿನ ಬೆರಳುಗಳು ನನ್ನ ಕುತ್ತಿಗೆಯನ್ನು ಇನ್ನೂ ಗಟ್ಟಿಯಾಗಿ ಒತ್ತುತ್ತಿರುವಂತೆ ಭಾಸವಾಯಿತು. ಆಗ ನನ್ನ ಕೂದಲುಗಳು ನಿ ನಿಂತಿದ್ದವು. ಇನ್ನೂ ಹೆಚ್ಚು ಹೊತ್ತು ಹಾಗೇ ಮಲಗಿರಲು ಸಾಧ್ಯವೇ ಅನ್ನಿಸಿದಾಗ ನನ್ನಲ್ಲಿದ್ದ ಅತಿಮಾನುಷ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ನಿಂತೆ. ಕಿಟಕಿ ಯಾವ ಕಡೆ ಇದೆ ಎಂದು ತಿಳಿಯದಿದ್ದರೂ ಯಾವು ದಿಕ್ಕಿನಲ್ಲಿ ಓಡುತ್ತಿದ್ದಂತೆ ಕುರ್ಚಿಯೊಂದನ್ನು ಎಡವಿದಾಗ ಅದು ಮುರಿದುಹೋಯಿತು. ಕತ್ತಲಲ್ಲಿ ತಡಕಾಡುತ್ತಾ ಅಂತೂ ನನ್ನ ಟಾಚ ಹುಡುಕಿದೆ. ಸ್ಮಶಾನದಿಂದೆದ್ದು ಬಂದ ಪ್ರೇತ ತನ್ನ ತಣ್ಣಗಿನ ಕೈ ಚಾಚಿನಿಂತಿರುವ ದೃಶ್ಯವನ್ನು ನೋಡುವ ನಿರೀಕ್ಷೆಯಲ್ಲಿ ಟಾರ್ಚ್‌ನ್ನು ಬೆಳ ಅದಕ್ಕೆ ಬದಲಾಗಿ ಅಲ್ಲಿ ನಾನು ಕಂಡದ್ದೇನು ಗೊತ್ತೇ? ನಾನು ಇಲ್ಲಿಯ ನೋಡಿರದಷ್ಟು ದೊಡ್ಡದಾಗಿದ್ದ ಕಾಡುಕಪ್ಪೆ! ಸುಮಾರು ಒಂದು ಅಡಿ ಉದ್ದವಿದ್ದ ಈ ಕಪ್ಪು ಆಸಾಮಿ ಹೊರಗಡೆ ಜೋರಾಗಿ ಮಳೆ ಬರುತ್ತಿದುದ ಮನೆಯೊಳಗೆ ನುಗ್ಗಿತ್ತು.

ಭಯ ನಮ್ಮನ್ನು ಎಂತಹ ಮನಸ್ಥಿತಿಗೆ ತಳ್ಳಬಹುದು ಎನ್ನುವುದು ಅಂದು ತಿಳಿಯಿತು. ಕೆಲವೇ ಸೆಕೆಂಡುಗಳ ಹಿಂದೆ ಯಾವುದೋ ಅಗೋಚ ಮತ್ತು ಅತಿಮಾನುಷ ಶಕ್ತಿಯ ಬಗೆಗೆ ನಾನು ಭಯದಿಂದ ಬಿಳಿಚಿಕೊಂ ಈಗ ನಾನು ನನ್ನಷ್ಟಕ್ಕೆ ನಗುತ್ತಾ ಕಾಲ ಬೆರಳ ತುದಿಯಿಂದ ಕಪ್ಪೆ ತಳ್ಳುತ್ತಾ ಬಾಗಿಲಿನಿಂದ ಆಚೆ ಹಾಕಿದೆ.

(ಮುಂದುವರೆಯು

ನ್ಯಾಯಾಲಯಗಳ ಮೇಲಿನ ನಂಬಿಕೆ
ಗಬಾರದು.'
ನ್ಯಾಯಮೂರ್ತಿಗಳ ಕಳಕಳಿಯ ಮಾತು.
ರಾಜಕಾರಣಿಗಳದ್ದೂ ಅದೇ ಸಿದ್ಧಾಂತ.
ತಲೆದೂಗಿದರು ರಾಜಕಾರಣಿ!
ಯಾರಿಗೆ ಬೇಡ ಇದು?
ಎಲ್ಲರದ್ದೂ ಸಹಿ. ಯಾರದ್ದೂ ಫೋರ್ಜರಿ ಇಲ್ಲ.
ಧೈರ್ಯ ಬಂತು. ಯಾವುದೋ ಓಬಿರಾಯನ ಕಾಲದ
ನ್ಯಾಯಾಲಯದ ಮೆಟ್ಟಿಲು ಹತ್ತಿದೆ.
ದೇವಸ್ಥಾನಗಳಲ್ಲಿ ಪೂಜಾರಿ, ನ್ಯಾಯಾಲಯದಲ್ಲಿ
ರು ಹೇಳಿದಂತೆ ಕೇಳಬೇಕು.
ಷ್ಟು ದಿನ ತಡೆಯಿರಿ' ಎಂದರು ಲಾಯರು.
ಯಾಕೆ?' ಕೇಳಿದೆ.
ಬೆಂಚ್ ಬದಲಾಗಲಿ.'
ನಗೆ ಸಮಸ್ಯೆ ಬಗೆ ಹರಿಯಬೇಕು. ಎಷ್ಟು ಬೇಗ
ಅಷ್ಟು ಒಳ್ಳೆಯದು.
ಈ ಬೆಂಚ್‌ಗೆ ಬರಲಿ' ಅಂದೆ.
ಬೇಡ. ಇದು ನಮಗೆ ಅನುಕೂಲವಾಗಿಲ್ಲ' ಅಂದರು
ರು.
ಈ ಬೆಂಚಿನಲ್ಲಿ ಸಿಗದ ನ್ಯಾಯ, ಬದಲಾದ ಬೆಂಚಿನಲ್ಲಿ
ತೆ!
ಒಂದೇ ಕಾನೂನು. ಬೆಂಚಿನ ಮೇಲೆ ನ್ಯಾಯ!
ನ್ಯಾಯಾಲಯಗಳ ಮೇಲಿನ ನಂಬಿಕೆ ಹಾಳಾಗಬಾರದು!'

* * *

ವನು ರಾಜಕಾರಣಿ.
ಜಾತಿಬಿಡಿ ಧರ್ಮಬಿಡಿ ಮಾನವತೆಗೆ ಜೀವಕೊಡಿ'
ಅವನೂ ಬಿಟ್ಟ ಮಾನವತೆಯ. ಜಾತಿ ತಬ್ಬಿ ಕೊಂಡ.
ಚುನಾವಣೆ ಬಂತು, ಸ್ಪರ್ಧಿಸಿದ.
ಅಭೂತಪೂರ್ವ ಗೆಲುವು ಅವನದಾಯಿತು.
ಜಾತಿ ಮಹಾತ್ಮೆ!
ಅದೇ ಜಾತಿ ಮಹಾತ್ಮೆ. ಮುಖ್ಯಮಂತ್ರಿ ಆದ.
ಅಧಿಕಾರ ದಕ್ಕಿತ್ತು. ವಾಂತಿಯಾಗುವಷ್ಟು ನುಂಗಿದ.
ಅಧಿಕಾರದ ಅಮಲು. ಸಾಕ್ಷಿ ಆಧಾರಗಳ ಮರೆಸಿತು.
ಮರೆವು ಜೈಲು ಸೇರಿಸಿತು.
ಜೈಲಿಗೆ ಹೋಗಿ ಆಸ್ಪತ್ರೆ ಸೇರುವುದು
ಮೊದಲಿನಿಂದಲೂ ಇಂತಹವರು ನಡೆಸಿಕೊಂಡು
ಬರುವ ಪರಿಸ್ಥಿತಿ. ಆದರೆ ಇವರದ್ದೇ ಬೇರೆ ರೀತಿ.
ಸೇರಿ ಜೈಲಿಗೆ ಹೋದರು.
ಮುಂದಿನ ನಡೆ ಮಾಮೂಲು.
ಆಯ್ತು ಪ್ರಖ್ಯಾತ ವಕೀಲರ ಪ್ರವೇಶ.
ಅವರು ಹಾಕಿದರು ಜಾಮೀನು ಅರ್ಜಿ.
ಪ್ರಖ್ಯಾತರಲ್ಲವೆ ಆ ವಕೀಲರು? ತೋರಿಸಿದರು ತಮ್ಮ
ವೈಖರಿ. ಕೋರ್ಟ್‌ಹಾಲು ಆಯಿತು ಮಂತ್ರಮುಗ್ಧ.
ನ್ಯಾಯಮೂರ್ತಿಗಳಿಗೆ ಕಂಡಿತು. ಲಾಯರ 'ಪುಂಗಿನಾದ'ದಲ್ಲಿ

ನ್ಯಾಯಾಲಯದ ತೀರ್ಪು



ನ್ಯಾಯ.

ನೀಡಿದರು ಷರತ್ತು ಬದ್ಧ ಜಾಮೀನು.

ಏನು ಷರತ್ತು ಅದು?

ನೂರಾರು ಕೋಟಿ ಹಗರಣ. ಷರತ್ತು ಅದಕ್ಕೆ ತಕ್ಕ ಹಾಗೇ ಇರಬೇಕು.

ಐದು ಲಕ್ಷ ಠೇವಣಿ ಇಡಬೇಕು!

ಆ ಹಗರಣಕ್ಕೆ ಈ ಮೊತ್ತವೆ?

ಕಾನೂನಿನಲ್ಲಿ ಇರುವುದೇ ಹಾಗಂತೆ!

ಅದನ್ನು ಮೀರುವ ಹಾಗಿಲ್ಲ.

ಜಾಮೀನಿಗಾಗಿ ಕೋಟಿ ಕೋಟಿ ನೀಡಲು ಸಿದ್ಧರಿರುವಾಗ ಲಕ್ಷ ಎಂದರೆ ಜುಜುಬಿ. ಅಲ್ಲೇ ಕಟ್ಟಿದರು.

'ಊರು ಬಿಟ್ಟು ಹೊರಗೆ ಹೋಗಬಾರದು.'

'ಹೂಂ' ಎನ್ನಲು ಏನು ತೊಂದರೆ? ಅಂದರು.

'ಪೊಲೀಸರು ಕರೆದಾಗ ಹೋಗಬೇಕು.'

ಅವರು ಕರೆಯುವ ಧೈರ್ಯ ತೋರಬೇಕಲ್ವ?

ಅದಕ್ಕೂ ಸೈ.

'ದಾಖಲೆಗಳನ್ನು ತಿದ್ದಬಾರದು.'

ಅವರು ಯಾವುದನ್ನೂ ತಿದ್ದುವುದಿಲ್ಲ. ಅದಕ್ಕೆ ಬೇರೆ ಜನ ಇದ್ದಾರೆ!

ಒಪ್ಪಿದರು.

ಬಿಡುಗಡೆಯ ದಿನ ಜೈಲಿನ ಮುಂದೆ ಸಾವಿರಾರು ಜನ.

ಯಾಕೆ ಬಂದಿದ್ದರು ಅವರು?

ನಾಯಕನ ಸ್ವಾಗತಕ್ಕೆ!

ನಿರ್ದೋಷಿ ಎಂದಲ್ಲ, ಜಾಮೀನು ದೊರೆತದ್ದಕ್ಕೆ!

ನ್ಯಾಯಾಲಯದ ಷರತ್ತಿಗೆ ಒಪ್ಪಿದರು. ಜಾಮೀನು ಸಿಕ್ಕಿತು.

ಷರತ್ತಿಗೆ ಬದ್ಧರಾಗುವರೆ?

ಬದ್ಧರಾಗುತ್ತಾರೆಂದು ನ್ಯಾಯಾಲಯದ ನಂಬಿಕೆ.

'ನ್ಯಾಯಾಲಯಗಳ ಮೇಲಿನ ನಂಬಿಕೆ ಹಾಳಾಗಬಾರದು!'

ಚುನಾವಣೆ ಬಂತು.

ನಮ್ಮ ಮಾಜಿ-ಅಭ್ಯರ್ಥಿ!

ಜನತಾ ನ್ಯಾಯಾಲಯದ ತೀರ್ಪು ಹೊರಬಿತ್ತು,

ಅಭೂತಪೂರ್ವ ಗೆಲುವು ಅವನಿಗೆ!

'ನ್ಯಾಯಾಲಯಗಳ ಮೇಲಿನ ನಂಬಿಕೆ ಹಾಳಾಗಬಾರದು!'

ಎಲ್ಲಾ ಅವನಿಗಾಗಿ!

ಜನಪ್ರತಿನಿಧಿಗಳು ಅಂದ್ರೆ ಅವರಿಗೆ ಬಿಡುವಿಲ್ಲದ ಕೆಲಸ. ಸಂಸದರಾದರಂತೂ ಮುಗಿದೇಹೋಯಿತು. ಎದ್ದರೆ ಬಿದ್ದರೆ ದೆಹಲಿ ಕಾಣಬೇಕಾಗುತ್ತೆ. ನಮ್ಮಂಗೆ ರೈಲಲಿ ಹೋದಾರಾ ವಿಮಾನದಲ್ಲಿ ಹೋಯ್ತಾರೆ ಅಂತೀರಾ ಅಂತ ಗೊತ್ತಿದೆ. ನೀವು ಹೇಳೋದು ನಿಜ. ವಿಮಾನದಲ್ಲಿಯೇ ಹೋಗೋದು. ನಮ್ಮ ನಿಮ್ಮಂಗೆ ಸಾಮಾನ್ಯದ ದರ್ಜೇಲೇ ಪ್ರಯಾಣಿಸಬಹುದು. ಆದರೆ ಸಂಸದರ ಸ್ಟೇಟಸ್‌ಗೇ ಅವಮಾನ ಅಲ್ವ. ಅದಕ್ಕೆ ಅವಮಾನ ಆಯಿತು ಅಂದ್ರೆ ಆಯ್ಕೆ ಮಾಡಿದ ಜನರಿಗೆ ಆಗೋ ಅವಮಾನ ಅಲ್ವ. ಮತದಾರ ಮಹಾಪ್ರಭುವಿನ ಮರ್ಯಾದೆ ಕಾಪಾಡಲು ಬಿಸಿನೆಸ್ ಕ್ಲಾಸಲ್ಲೇ ಓಡಾಡ್ತಾರೆ. ಅದೂ ಜನರಿಗೆ ಗೌರವ ತಂದುಕೊಡಬೇಕೂಂತ ಮುಂದಿನ ಸೀಟಲ್ಲೇ ಕುಂತಿರ್ತಾರೆ. ಮುದುಕರು, ಮೋಟರು, ಕುಂಟರು, ಕುರುಡುರು, ಬಸರೀರು, ಬಾಣಂತೀರು ಆ ಸೀಟುಗಳನ್ನ ಮೊದಲೇ ಕಾಯ್ದಿರಿಸಿದರು ಅಷ್ಟೆ. ಅವರೇನು ಸಂಸದರು ಕಿ... ತೋರಿದರೆ ನಾವು ಕಾಯ್ದಿರಿಸಿದ ಸೀಟೇ ನಮಗೆ ಬೇಕು ಅಂತ ಡಿಮಾಂಡ್ ಮಾಡ್ತಾರೆ. ಸಂಸದರ ಮುಖ ಕಾಣುತ್ತಿದ್ದ ಹಾಗೇ ಅವನ್ನ ತೆರವು ಮಾಡಬೇಕು. ಒಂದು ವೇಳೆ ಅವರು ಮಾಡಲಿಲ್ಲ, ವಿಮಾನದ ಸಿಬ್ಬಂದಿ ತೆರವು ಮಾಡಿಸಿಕೊಡಬೇಕು. ಹೀಗೆ ತೆರವು ಮಾಡಿದವರನ್ನೇನು ಅಲ್ಲೇ ಬಿಟ್ಟು ಹೋಗುವುದಿಲ್ಲ, ಆ ವಿಮಾನದಲ್ಲೇ ಬೇರೆ ಸೀಟು ಕೊಡ್ತಾರೆ. ಒಂದು ವೇಳೆ ಸಾಧ್ಯ ಆಗಲೇ ಇಲ್ಲ ಅನ್ನಿ, ಬೇರೆ ವಿಮಾನದಲ್ಲಿ ಕಳುಹಿಸಿಕೊಡ್ತಾರೆ. ತುಂಬಿದ ಬಸುರಿಗೆ ಹೆರಿಗೆ ಸಮಯ. ಕಾಯಲು ಸಮಯವಿಲ್ಲ ಎಂದರೆ ಏನು ಮಾಡುವುದು ಹೇಳಿ. ಜನಪ್ರತಿನಿಧಿಗಳ 'ಹಕ್ಕನ್ನು' ನಿರಾಕರಿಸಲಾಗುತ್ತದೆಯೆ? ಒಬ್ಬರ ಅನುಕೂಲಕ್ಕೋಸ್ಕರ ಲಕ್ಷಾಂತರ ಮತದಾರರಿಗೆ ಅಗೌರವ ತೋರಲಾಗುತ್ತದೆಯೇ? ಒಂದು ವೇಳೆ ವಿಮಾನ ನಿಲ್ದಾಣದಲ್ಲೇ ಹೆರಿಗೆ ಆಯಿತು ಅನ್ನಿ. ಇದಕ್ಕೇನು ಆತಂಕಪಡಬೇಕಾಗಿಲ್ಲ; ಹೀಗಾಗಿರುವುದು ಇದು ಮೊದಲಲ್ಲ, ಇಂತಹವು ಅನೇಕ ಆಗಿವೆ. ಬರೀ ಋಣಾತ್ಮಕವಾಗಿ ನೋಡಬೇಡಿ. ಧನಾತ್ಮಕವಾಗೂ ನೋಡಿ. ಹಾಗೆ ನೋಡಿದರೆ ಅನಾನುಕೂಲಕ್ಕಿಂತ ಅನುಕೂಲವೇ ಹೆಚ್ಚು. ಹೆರಿಗೇಂತ ಆಸ್ಪತ್ರೆಗೆ ಹೋದರೆ ವೃಥಾ ಸಾವಿರಾರು ರೂಪಾಯಿ ಖರ್ಚು. ಅನಾಯಾಸವಾಗಿ ಅದು ಉಳಿದಂತಾಯಿತು. ಅಲ್ಲದೆ ಇದು ಭರ್ಜರಿ ಸುದ್ದಿ ಆಗುತ್ತೆ ಆ ತಾಯಿಗೆ ಸಕತ್ ಪ್ರಚಾರ ಸಿಗುತ್ತೆ!

ಮಾನ್ಯ ಸಂಸದರು ವಿಮಾನ ನಿಲ್ದಾಣ ತಲುಪಬೇಕಲ್ಲ. ಇನ್ನೂ ಹೆಲಿಕಾಪ್ಟರ್ ಸೌಲಭ್ಯ ಒದಗಿಸಿಲ್ಲ, ಅಲ್ಲಿಯವರೆವಿಗೂ ಕಾರುಗಳನ್ನೇ ಬಳಸಬೇಕಾಗುತ್ತದೆ. ಕಾರು ನಿಲ್ಲಿಸಲು ನಿಲ್ದಾಣಶುಲ್ಕ ಪಾವತಿಸಬೇಕಿಲ್ಲ. ಅವರ ಬಳಿ ಹಣ ಇಲ್ಲ ಎಂದಲ್ಲ, ಕೋಟ್ಯಾಧೀಶರೇ ಅವರು. ಆದರೂ ನಮ್ಮ ಘನ ಸರ್ಕಾರ ಶುಲ್ಕ ನೀಡಲು ಬಿಡುವುದಿಲ್ಲ. ಮತದಾರ ಮಹಾಪ್ರಭುವಿನ ಗೌರವ ಕಾಪಾಡುವ ಹೊಣೆಗಾರಿಕೆ ಅದರ ಮೇಲಿದೆ! ಕಾರು ನಿಲ್ದಾಣದಿಂದ ವಿಮಾನ ನಿಲ್ದಾಣಕ್ಕೆ ತಲುಪಬೇಕಲ್ಲ. ಸಾಮಾನು ಸರಂಜಾಮು ಇಲ್ಲದೆ ಇರಬಹುದು. ಒಂದು ಚರ್ಮದ ಕೈಚೀಲ ಇರಬಹುದು. ಅದನ್ನು ಸಂಸದರೇ ಹಿಡಿದುತಂದರೆ ಮತದಾರ ಮಹಾಪ್ರಭುವಿಗೆ ಘನಘೋರ ಅಪಮಾನ! ಅದನ್ನು ತರಲು ಒಬ್ಬ ಸಹಾಯಕ! ಸಂಸದರನ್ನು ಹೊತ್ತು ತರಬೇಕು ಎಂದು ಇನ್ನೂ ಕಾನೂನು ಮಾಡಿಲ್ಲ! ಅವರು ನಡೆದೇ ಬರುತ್ತಾರೆ! ಇವೆಲ್ಲ ಸಾಂಗವಾಗಿ ವಿಮಾನ ನಿಲ್ದಾಣ ಅಧಿಕಾರಿ ನೆರವೇರಿಸಬೇಕು.

ಇವೆಲ್ಲ ಅಂಥಾ ದರ್ಬಾರ್ ಅನ್ನಿಸಬಹುದು. ಸಾಮಾನ್ಯರಿಗೆ ಐಷಾರಾಮಿ ಎನ್ನಿಸುವ ಸೌಲಭ್ಯಗಳು ಸಂಸದರಿಗೆ ಅತ್ಯಗತ್ಯ ಸವಲತ್ತುಗಳು ಎಂಬುದನ್ನು ಮರೆಯಬಾರದು!


ಇದು ಪ್ರಜಾಪ್ರಭುತ್ವ!

● ಎಚ್ಚೆಲ್ಕೆ

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ: ಕೆಲವು ಸಂಗತಿಗಳು

ದಕ್ಷಿಣ ಕನ್ನಡದ ಸುಳ್ಯದವರೇ ಆದ ಶ್ರೀ ಸದಾನಂದ ಗೌಡರು ಕರ್ನಾಟಕದ ಮುಖ್ಯಮಂತ್ರಿ ಯಾಗಿದ್ದಾಗ ಅರೆಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ರಚನೆಯಾಯಿತು. ಅರೆ ಭಾಷೆಯನ್ನು ಮಾತೃ ಭಾಷೆಯಾಗುಳ್ಳ ಸಮುದಾಯದ ಅನೇಕ ಮಹನೀಯರು ಇದಕ್ಕಾಗಿ ಕೆಲಸ ಮಾಡಿದ್ದರು. ಅರೆಭಾಷೆಯು ಕನ್ನಡದ ಸಾಮಾಜಿಕ ಉಪಭಾಷೆಯಾಗಿದ್ದು, ಉಪಭಾಷೆ ಒಂದು ಅಕಾಡೆಮಿ ರಚನೆಯಾದದ್ದು ಈ ದೇಶದಲ್ಲಿ ಮೊದಲು. ಸದಾನಂದ ಗೌಡ ಅವರು ಇಲ್ಲದೇ ಇದ್ದರೆ ಇಂಥದ್ದೊಂದು ಕೆಲಸ ಸಾಧ್ಯವೇ ಆಗುತ್ತಿರಲಿಲ್ಲ. ದುರ್ದೈವವೋ ಎಂಬಂತೆ ಅಕಾಡೆಮಿ ಬಾಲಗ್ರಹ ದೋಷದಿಂದ ನರಳಿತು. ಒಳಜಗಳಗಳು ಹೆಚ್ಚಾಗಿ, ಮಾಡ ಬೇಕಾದಿದ್ದ ಕೆಲಸಗಳು ಹಿನ್ನೆಲೆಗೆ ಸರಿದುವು. ಶ್ರೀ ದೇವೀ ಪ್ರಸಾದ ಸಂಪಾಜೆ ಅವರಂಥ ಪ್ರತಿಭಾವಂತರಿಗೂ ಕೈಕಟ್ಟಿ ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣ ಆಯಿತು. ಮೋಹನ ಸೋನ ಅವರಂತಹ ಪ್ರಖ್ಯಾತ ಕಲಾವಿದರು ರಚಿಸಿದ ಮನಮೋಹಕ ಲಾಂಛನವನ್ನೂ ಅಂಗೀಕರಿಸದೆ ಅದರ ಬಗ್ಗೆ ವಿವಾದ ಸೃಷ್ಟಿಸಲಾಯಿತು. ಅಕಾಡೆಮಿಯ ಒಳಗೆ ಕೊಡಗಿನ ಗೌಡರು ಮತ್ತು ಸುಳ್ಯ ಕಡೆ ಗೌಡರು ಎಂದು ಪ್ರಾದೇಶಿಕ ವ್ಯತ್ಯಾಸ ಕಾಣಿಸಿಕೊಳ್ಳುವುದರ ಜೊತೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಎಂಬ ರಾಜಕಾರಣವೂ ಸೇರಿಕೊಂಡಿತು. ಅಕಾಡೆಮಿಗಳ ಮುಖ್ಯ ಉದ್ದೇಶ ಶೈಕ್ಷಣಿಕ ಕೆಲಸಗಳನ್ನು ಮಾಡುತ್ತಾ ಹೋಗುವುದು. ಇದರಲ್ಲಿ ಯಾವುದೇ ರಾಜಕೀಯ, ಪಕ್ಷಪಾತಕ್ಕೆ ಸಲ್ಲ. ಆದರೆ ಇದನ್ನು ಅರ್ಥಮಾಡಿಕೊಳ್ಳಲು ಯಾರೂ ತಯಾರಿರಲಿಲ್ಲ, ಜೊತೆಗೆ ಆಗ ಅಕಾಡೆಮಿಯಲ್ಲಿ ಶೈಕ್ಷಣಿಕ ಕೆಲಸಗಳನ್ನು ಮಾಡಬಲ್ಲವರ ಸಂಖ್ಯೆ ಕಡಿಮೆ ಇತ್ತು.

ಸಚಿವ ಶ್ರೀ ಸಿದ್ಧರಾಮಯ್ಯ ಅವರ ಸರಕಾರ ಬಂದ ಮೇಲೆ ಅನೇಕ ಅಕಾಡೆಮಿಗಳಿಗೆ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿ ಆದರೂ ಅರೆಭಾಷೆ ಅಕಾಡೆಮಿಗೆ ನೇಮಕ ಮಾಡಲಿಲ್ಲ, ಸರಕಾರ ಕಾರಣವನ್ನೂ ಕೊಡಲಿಲ್ಲ.



ಏನೇ ಇರಲಿ, ಸಂತೋಷದ ಸಂಗತಿಯೆಂದರೆ, ಇದೀಗ ಅರೆಭಾಷೆ ಅಕಾಡೆಮಿಗೆ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿ ತಡವಾಗಿಯಾದರೂ ನಡೆದಿದೆ. ಈ ಕುರಿತು ಸುಳ್ಯ ಪರಿಸರದ ಗೌಡ ಸಮುದಾಯದ ಹಲವರು ತಮ್ಮ ಅತೃಪ್ತಿಯನ್ನು ಪ್ರಕಟಪಡಿಸಿದ್ದಾರೆ, ಕೆಲವರು ಪ್ರತಿಭಟನೆಗೂ ಸಿದ್ಧರಾಗಿದ್ದಾರೆ. ಈ ಅಸಂತೋಷಕ್ಕೆ ಮುಖ್ಯಕಾರಣ ಅರೆಭಾಷೆ ಅಕಾಡೆಮಿಯಲ್ಲಿ ಗೌಡರಲ್ಲದವರಿಗೆ ಸ್ಥಾನ ಸಿಕ್ಕಿರುವುದು. ಈ ಭಾಷಾ ರಾಜಕೀಯ ಬಹಳ ಸೂಕ್ಷ್ಮವಾದುದರಿಂದ ಅದನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆ.

ಅಕಾಡೆಮಿಯ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿಯ ವಿಷಯದಲ್ಲಿ ಕರ್ನಾಟಕ ಸರಕಾರ ಸರಿಯಾಗಿಯೇ ನಡೆದುಕೊಂಡಿದೆ ಎಂದು ನಾನು ಭಾವಿಸುತ್ತೇನೆ. ಅರೆಭಾಷೆಯು ಮೂಲತಃ ಗೌಡರ ಭಾಷೆ ಎಂಬುದು ನಿಜ. ಸುಮಾರು 500 ವರ್ಷಗಳ ಇತಿಹಾಸವಿರುವ ಈ ಭಾಷೆಯನ್ನು ಉಳಿಸಿ ಬೆಳೆಸಿದವರು ಅವರೇ ಎಂಬುದರಲ್ಲಿ ಎರಡು ಮಾತಿಲ್ಲ, ಹಾಗಂತ ಗೌಡರೆಲ್ಲರೂ ಅರೆಭಾಷೆಯನ್ನೇ ಮಾತಾಡುತ್ತಾರೆ ಎಂದೇನೂ ಇಲ್ಲ, ಬೆಳ್ತಂಗಡಿ, ಪುತ್ತೂರು ಮತ್ತು ಬಂಟ್ವಾಳ ಪರಿಸರದ ಗೌಡರು ತುಳು ಮಾತಾಡುತ್ತಾರೆ. ಜಾತಿಯನ್ನು ಆಧರಿಸಿ ಅರೆಭಾಷೆ ಅಕಾಡೆಮಿಯನ್ನು ರಚನೆ ಮಾಡಬೇಕೆಂದು ವಾದಿಸುವವರು ತುಳು ಗೌಡರನ್ನು ಯಾಕೆ ಹೊರಗಿಡುತ್ತಾರೆಯೋ ತಿಳಿಯದು. ಏನಿದ್ದರೂ ಈಗ ಅರೆಭಾಷೆಯು ಜಾತಿ, ಧರ್ಮ ಮತ್ತು ಗಡಿಗಳ ಮಿತಿಯನ್ನು ಮೀರಿ ಬೆಳೆದಿದೆ ಮತ್ತು ಬೆಳೆಯುತ್ತಿದೆ. ಹೀಗಾಗಿ ಇಂದು ಅರೆಭಾಷೆಯು ಕನ್ನಡದ ಸಾಮಾಜಿಕ ಉಪಭಾಷೆಯಾಗಿ ಉಳಿದಿಲ್ಲ, ಬದಲು ಪ್ರಾದೇಶಿಕ ಉಪಭಾಷೆಯಾಗಿ ಬೆಳೆದಿದೆ. ಇದೀಗ ಅಕಾಡೆಮಿಯ ಸದಸ್ಯರಾಗಿರುವ ಶ್ರೀ ಕೇಪು ಅಜಿಲ ಅವರು ಭೂತಾರಾಧನೆಯ ಕಲಾವಿದ. 1980ರಷ್ಟು ಹಿಂದೆಯೇ ಅವರು ಅರೆಭಾಷೆಯಲ್ಲಿ ಯಕ್ಷಗಾನ ಮಾಡಿಸಿದವರು. ಶ್ರೀ ತೋಡಿಕಾನ ಅಬ್ದುಲ್ಲಾ ಅವರು ನಾವೆಲ್ಲ ಅಕಾಡೆಮಿಯ ಬಗೆಗೆ ಯೋಚನೆ ಮಾಡುವ 30 ವರ್ಷಗಳಷ್ಟು ಮೊದಲೇ ಅರೆಭಾಷೆಯಲ್ಲಿ ಸಣ್ಣಕತೆ ಬರೆದವರು. ಹೀಗಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಕೆಲಸ ಮಾಡುವಂಥ ಪ್ರತಿಭಾವಂತರನ್ನು ನಿರ್ಲಕ್ಷಿಸಿ ಯಾರೂ ಮುಂದೆ ಹೋಗುವಂತಿಲ್ಲ, ಇದನ್ನು ಸೂಕ್ಷ್ಮವಾಗಿ ಗಮನಿಸಿದ ಸರಕಾರವು ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡಬಲ್ಲ ವಿದ್ವಾಂಸರನ್ನು ಗುರುತಿಸಿ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಿದೆ. ಅದರಲ್ಲಿ ದಲಿತರಿದ್ದಾರೆ, ಅಲ್ಪಸಂಖ್ಯಾತರಿದ್ದಾರೆ ಮತ್ತು ಇತರ ಹಿಂದುಳಿದ ವರ್ಗಕ್ಕೆ ಸೇರಿದ ಮಹನೀಯರಿದ್ದಾರೆ. ಭಾಷೆಯೊಂದು ಹೀಗೆ ಎಲ್ಲರ ಸಹಾಯದಿಂದ ಬೆಳೆಯುತ್ತಿರುವುದು ಅದರ ಭವಿಷ್ಯದ ದೃಷ್ಟಿಯಿಂದ ಅವಶ್ಯ. ಇಲ್ಲದಿದ್ದರೆ ಸಂಸ್ಕೃತ ಭಾಷೆಯ ಹಾಗೆ ಅದು ನಿಧಾನವಾಗಿ ಮುರುಟಿಹೋಗುತ್ತದೆ.

ನಮ್ಮ ನಡುವಿನ ಅನೇಕ ಒಳ್ಳೆಯ ಭಾಷೆಗಳಲ್ಲಿ ಅರೆಭಾಷೆಯು ಒಂದು. ಈ ಭಾಷೆಯಲ್ಲಿ ಇಂದಿಗೂ ಕಾಣಸಿಗುವ ಕೆಲವು ವಿಶಿಷ್ಟ ಪದಗಳು ಮೂಲ ದ್ರಾವಿಡ ಕಾಲಕ್ಕೆ ಸೇರಿರುವಂತೆ ತೋರುತ್ತದೆ. ಅರೆಭಾಷೆಯ ಅನೇಕ ಪದಗಳು ಹಳಗನ್ನಡದಲ್ಲಿಯೂ ಕಾಣಸಿಗುತ್ತವೆ. ಇದನ್ನು ಗಮನಿಸಿದರೆ, ಅರೆಭಾಷೆಯ ಪದಗಳ ಇತಿಹಾಸ ಕನಿಷ್ಠ ಎರಡು ಸಾವಿರ ವರ್ಷಗಳಿಗೂ ಹಿಂದೆ ಹೋಗುತ್ತದೆ. ಆದರೆ ಅವು ದಿನ ಬಳಕೆಯ ಭಾಷಾರೂಪದಲ್ಲಿ ಕಾಣಿಸಿಕೊಂಡು ಹೆಚ್ಚೆಂದರೆ 500 ವರ್ಷಗಳನ್ನು ಮೀರಿರಲಾರದು. ಏಕೆಂದರೆ ಅರೆಭಾಷೆಯನ್ನು ಪ್ರಧಾನವಾಗಿ ಮಾತಾಡುವ ಸುಳ್ಯ ಪರಿಸರದ ಗೌಡ ಸಮುದಾಯದ ಜನರು ಮೂಲತಃ ಹಾಸನ ಜಿಲ್ಲೆಯ ಐಗೂರು ಪರಿಸರಕ್ಕೆ ಸೇರಿದವರು. ಅಲ್ಲಿ ಹಿಂದೆ ಹೇಗೋ ಹಾಗೆ ಇಂದಿಗೂ ಅರೆಭಾಷೆ ಇಲ್ಲ. ಈ ಭಾಷೆಯ ಬಗ್ಗೆ ಮೊದಲ ಬಾರಿಗೆ ಅಧ್ಯಯನ ನಡೆಸಿದವರು ಡಾ.ಕೆ.ಕುಶಾಲಪ್ಪ ಗೌಡರು. ಅವರು ಅದನ್ನು ಗೌಡ ಕನ್ನಡ ಎಂದು ಕರೆದು, ಅಂತಾರಾಷ್ಟ್ರೀಯ ಓದುಗರಿಗೆ ಈ ಭಾಷೆಯನ್ನು ಪರಿಚಯಿಸಿದರು. ಆದರೆ ಸುಳ್ಯ ಪರಿಸರದಲ್ಲಿ ಗೌಡೇತರರೂ ಈ ಭಾಷೆಯನ್ನು ಆಡುವುದರಿಂದ ಅರೆಭಾಷೆಯೆಂಬ ಪದ ಬಳಕೆಯಲ್ಲಿ ಉಳಿಯಿತು.

ಅರೆಭಾಷೆಯ ಅನನ್ಯತೆಯ ಬಗೆಗೆ ಈಗಾಗಲೇ ಕೆಲವು ಒಳ್ಳೆಯ ಮಾತುಗಳು ಕೇಳಿಬಂದಿವೆ. ಅರೆಭಾಷೆಯ ಆತ್ಮಕತೆಗಳಂತಿರುವ ಜನಪದ ಕತೆಗಳನ್ನು ಸಂಗ್ರಹಿಸಿ ಅಭ್ಯಸಿಸಿದ ಡಾ.ವಿಶ್ವನಾಥ ಬದಿಕಾನ ಅವರು ಈ ಕತೆಗಳಲ್ಲಿ 7 ಹೊಸ ಉಪವರ್ಗಗಳನ್ನು ಗುರುತಿಸಿ 'ಗೌಡಕನ್ನಡದ ಕತೆಗಳಲ್ಲಿ ಜಾಣ ನರಿಯು ಜಾಣತನ ಮಾಡಲು ಹೋಗಿ ಕೊನೆಗೆ ತಾನೇ ಸತ್ತು ಹೋಗುವ ರೀತಿಯು ಅರೆಭಾಷೆಯ ಜನಪದ ಕತೆಗಳ ಅನನ್ಯತೆಯನ್ನು ಸಾರುತ್ತವೆ' ಎಂದು ವಾದಿಸಿದ್ದಾರೆ. ಡಾ. ಕುಶಾಲಪ್ಪ ಗೌಡರು ಈ ಭಾಷೆಯ ವಿಶಿಷ್ಟತೆಗಳ ಕುರಿತು ಪುಸ್ತಕವೊಂದನ್ನು ಬರೆದಿದ್ದಾರೆ. ಹೊಸ ತಲೆಮಾರಿನ ಹಲವರು ಅರೆಭಾಷೆಯಲ್ಲಿ ಕವನ, ಕತೆ, ಪ್ರಬಂಧಗಳನ್ನು ಬರೆಯುತ್ತಿದ್ದಾರೆ. ಭಾಷೆಯೊಂದರ ಅಭಿವೃದ್ಧಿಯ ದೃಷ್ಟಿಯಿಂದ ಇದೊಂದು ಸ್ವಾಗತಾರ್ಹ ಬೆಳವಣಿಗೆ.

ಜಾತಿ, ಧರ್ಮಗಳ ಗಡಿಮೀರಿ ಬೆಳೆದ ಭಾಷೆ ಸರ್ವ ಮಾನ್ಯವಾಗುತ್ತದೆ. ಅರೆಭಾಷೆಗಿರುವ ಅಂಥ ಶಕ್ತಿಯನ್ನು ನಾವು ಇನಷ್ಟು ಹೆಚ್ಚಿಸಬೇಕೇ ವಿನಾ ಕುಗ್ಗಿಸಬಾರದು

● ಪುರುಷೋತ್ತಮ ಬಿಳಿಮಲೆ

ಅನುರಣನ



ಡಾ. ಟಿ.ಎಸ್. ಚನ್ನೇಶ್

ಸಾವಿನಾಚೆಯ ಬಯಕೆಗಳು

'ಸಂಸ್ಕಾರ' ಕನ್ನಡದ ಕಾದಂಬರಿ ಪ್ರಕಟವಾದಾಗ ಸಂಚಲನ ಮೂಡಿಸಿತ್ತು. ಈ ಕಾದಂಬರಿಯ ಲೇಖಕ ಪ್ರೊ. ಯು. ಆರ್ ಅನಂತಮೂರ್ತಿಯವರ ಅಂತಿಮ ಸಂಸ್ಕಾರದಲ್ಲೂ ನಾಡಿನಾದ್ಯಂತ ಚರ್ಚೆಗಳಿಂದ ಸಂಚಲನ ಮೂಡಿದವು. ಪ್ರಸ್ತುತ ವಿಚಾರ ಇದಕ್ಕೆ ಸಂಬಂಧಿಸಿದ್ದಲ್ಲ. ಈ ಸಂಸ್ಕಾರ ಎನ್ನುವ ಸಾವಿನಾಚೆಯ ವಿಚಾರಕ್ಕಿರುವ ಕೆಲವು ವೈವಿಧ್ಯಮಯ ಹಾಗೂ ವಿಜ್ಞಾನ ಸಂಬಂಧಿತ ಹೊಳಹುಗಳನ್ನು ಹಂಚಿಕೊಳ್ಳುವುದಾಗಿದೆ. ಸಂಸ್ಕಾರವು ಬದುಕಿದ್ದ ಜೀವಿಯ ಕೊನೆಯ ಕಂಡ ನಂತರದ- ಒಂದು ರೀತಿಯಲ್ಲಿ ಬದುಕಿಗೆ ಮುಕ್ತಿ ಕೊಡುವ – ಕೆಲಸ. ಇದನ್ನು ಹೇಗೆ ಮಾಡಿದರೂ ನಿಸರ್ಗದಲ್ಲಿ ಭಾಗವಾಗುವ ಕ್ರಿಯೆ ನಡೆದೇ ನಡೆಯುತ್ತದೆ. ಈ ಜೀವಜಗತ್ತಿನ ಎಲ್ಲಾ ಅಸಂಖ್ಯ ಪ್ರಭೇದಗಳ ನೈಸರ್ಗಿಕ ಸಂಸ್ಕಾರವು ಮತ್ತೆ ಹುಟ್ಟಿ ಬೆಳೆದ ನಿಸರ್ಗದಲ್ಲಿ ಒಂದಾಗುವ ಕ್ರಿಯೆಯಾಗಿ ನಡೆಯುತ್ತದೆ. ಅದನ್ನು ಅನುಸರಿಸುವ ಕ್ರಿಯೆಯಾಗಿ ಅಂತಿಮ ಸಂಸ್ಕಾರವೆಂಬ ಮಾನವ ನಿರ್ಮಿತ ಕೆಲಸದ ವಿಕಾಸವಾಗಿದ್ದಿರಬಹುದು. ಜತೆಗೆ ಇದರಲ್ಲಿ ಬದುಕಿದ್ದವರ ಹಾಗೂ ಸಾವು ಕಂಡವರ ನಡುವಣ ಸಂಬಂಧಗಳ, ಗೌರವಗಳ ಹಾಗೂ ಸಂಪರ್ಕಗಳ ಕುರಿತೂ ಮಾತಾಡಬಹುದೇನೋ. ಒಂದು ರೀತಿಯಲ್ಲಿ ಜೀವಂತವಾಗಿ ಪ್ರೀತಿಯ ಸುಧೆಯುಂಡವರಿಂದ ಗೌರವಪೂರ್ವಕವಾಗಿ ಗುಡ್‌ಬೈ ಹೇಳುವುದೇನೋ? ಸಾವು ದೇಹದ ಎಲ್ಲಾ ಸಂಬಂಧಗಳನ್ನೂ ಒಂದೇ ಕ್ಷಣದಲ್ಲಿ ಮುಗಿಸಿ ಬಿಡುವ ಹಂತವುಳ್ಳದ್ದು. ನನ್ನ ಶಾಲಾದಿನಗಳಲ್ಲಿ ಓದಿದ ಸಂಗತಿ ನೆನಪಾಗುತ್ತಿದೆ. ಅದು ಉಪನಿಷತ್ತಿನ ಪದ್ಯದ ಸಾರ. "ಸತ್ತರೂ ಕೂಡ ಬೆನ್ನು ಹತ್ತಿ ಬರುವುದು ಗೆಳೆಯ ಧರ್ಮವೊಂದೇ, ಉಳಿದೆಲ್ಲವೂ ಶರೀರದ ಕೂಡ ನಾಶಹೊಂದುವುದು" ಎಂತಿತ್ತು. ಎಲ್ಲವೂ ಶರೀರ ಕೂಡ ನಾಶ ಹೊಂದುವ ಕುರಿತು ಅದು ತಿಳಿಸಿತ್ತು. ವೈಜ್ಞಾನಿಕವಾಗಿ ಸಾವು ಒಂದು ಸಂಕೀರ್ಣ ಜೀವಿಯ ವೈವಿಧ್ಯಮಯ ಜೈವಿಕ ಚಮತ್ಕಾರಗಳ ನಿಲುಗಡೆ. ನಿಶ್ಚಿತವಾದ ಸಾವಿನೆಡೆಗೆ ಜೀವಿಯ ಪಯಣವೇ ಬದುಕೆಂಬ ಭಾಗ. ಸಾವು ನಿಶ್ಚಿತವೆಂದು ತಿಳಿದಿದ್ದರೂ ಅದನ್ನು ಯಾರೂ ಆಹ್ವಾನಿಸಲು ಸಿದ್ಧರಿರುವುದಿಲ್ಲ. ಬಹುಶಃ ಇದೇ ಸಾವಿನಾಚೆಯಲ್ಲೂ ಬದುಕಿನ ಬಯಕೆಗಳನ್ನು ತುಂಬಿರುವುದೇ? ನಿಜ, ಸಾವು ಯಾರಿಗೆ ಬೇಕು ಹೇಳಿ? ಎಲ್ಲ ಜೀವಿಗಳ ಪರಮ ಉದ್ದೇಶವು ಬದುಕುವುದೇ ಆಗಿದೆ. ತನ್ನಂತಹ ಜೀವಿಗಳನ್ನೇ ಅದು ಸೃಷ್ಟಿಸುವುದೇಕೆ ಎಂಬ ಪ್ರಶ್ನೆಗೆ ತಮಾಷೆಯ ಉತ್ತರವಿದೆ. ಏನೆಂದರೆ ಅದು ಸಾಯುವುದಂತೆ ಅದಕ್ಕೆ ತನ್ನ ನೆನಪಿಗಾಗಿ ತನ್ನಂತಹದ್ದನ್ನೇ ಬಿಟ್ಟುಹೋಗುವ ಆಸೆಯಂತೆ. ತನ್ನ ಜೀವನವನ್ನು ನಿರಂತರವಾಗಿಸುವ ಆಸೆ ಎಲ್ಲ ಜೀವಿಗಳಲ್ಲೂ ಸಾಮಾನ್ಯವಾಗಿ ಇರುವಂತಹದು.


ಜಗತ್ತಿನ ಬಹುಸಂಖ್ಯೆಯ ಸಮುದಾಯಗಳಾದ ಕ್ರೈಸ್ತ ಮುಸಲ್ಮಾನರನ್ನೂ ಸೇರಿಕೊಂಡು, ಕೆಲವು ಹಿಂದೂ ಸಮುದಾಯಗಳಲ್ಲೂ ಹೂಳುವ ಸಂಪ್ರದಾಯವಿದೆ. ಬದುಕಿದ್ದಾಗ ನಮ್ಮ ಬಹುಪಾಲು ಅಗತ್ಯಗಳನ್ನು ಮಣ್ಣಿನಿಂದ ಅಥವಾ ನೆಲದಿಂದಲೇ ಪಡೆದು ಸತ್ತ ಮೇಲೂ ಎಲ್ಲವನ್ನೂ ಹಿಂದಿರುಗಿಸುವ ಮಣ್ಣಿನ ಋಣದ ಮಾತನ್ನು ಸಾವಿನ ಜತೆ ಸಮೀಕರಿಸುವ ಬಗೆಗೆ ಕೇಳುತ್ತೇವೆ. ನಿಜ! ನಾವು ನಮ್ಮ ಮಣ್ಣಿನ ಋಣ ತೀರಿಸುವ ಜವಾಬ್ದಾರಿಯನ್ನು ಹೊತ್ತಿರುತ್ತೇವೆ. ವೈಜ್ಞಾನಿಕವಾಗಿ ಮಣ್ಣಿನ ಋಣ ಎನ್ನುವುದೇನು? ನಮ್ಮ ದೇಹದ ಬಹುಪಾಲು ಮಣ್ಣಿನಿಂದ ಪಡೆದ ರಸಾಯನಿಕಗಳಿಂದ ಮಾಡಿದುದಾಗಿದೆ. ನಮ್ಮ ಬದುಕಿಗೆ ಇಂಗಾಲ, ಆಮ್ಲಜನಕ, ಜಲಜನಕ, ಸಾರಜನಕ, ರಂಜಕ, ಪೊಟ್ಯಾಶ್, ಕ್ಯಾಲ್ಸಿಯಂ, ಮ್ಯಾಗ್ನಿಷಿಯಂ, ಗಂಧಕ, ಕಬ್ಬಿಣ, ಸತು, ತಾಮ್ರ, ಮ್ಯಾಂಗನೀಸ್, ಬೋರಾನ್, ಕ್ಲೋರಿನ್, ಮಾಲಿಬ್ಡಿನಂ, ಅಯೋಡಿನ್ ಮುಂತಾದ ಹೆಚ್ಚೂಕಡಿಮೆ 18-20 ಮೂಲವಸ್ತುಗಳ ಅಗತ್ಯವಿದೆ. ಅವುಗಳಲ್ಲಿ ಮೊದಲ ಮೂರು ಹೊರತುಪಡಿಸಿ ಉಳಿದೆಲ್ಲವೂ ನೇರವಾಗಿ ಮಣ್ಣಿನಿಂದಲೇ ಪಡೆದ ಆಹಾರಗಳಾದ ಪ್ರೋಟೀನು, ಕಾರ್ಬೋಹೈಡ್ರೇಟು, ಕೊಬ್ಬಿನಂಶ, ನಾರು, ವಿಟಮಿನ್ನುಗಳಾಗಿ ನಮ್ಮ ಹೊಟ್ಟೆಯನ್ನು ಸೇರುತ್ತವೆ. ಇವುಗಳು ಮತ್ತೆ ವಾಪಾಸ್ಸು ಮಣ್ಣನ್ನು ಸೇರಿ ಅದರ ಆರೋಗ್ಯವನ್ನು ಕಾಪಾಡದಿದ್ದಲ್ಲಿ ಅದರಲ್ಲಿ ಬೆಳೆದ ಆಹಾರವು ಅಪೌಷ್ಟಿಕವಾಗಿ ಪುನಃ ನಮ್ಮನ್ನು ಕಾಡುತ್ತದೆ. ನಮ್ಮ ಆರೋಗ್ಯಕ್ಕಾಗಿಯೇ ಮಣ್ಣಿನ ಋಣ ತೀರಿಸಬೇಕಿದೆ. ಒಂದು ವೇಳೆ ಹೂಳದಿದ್ದರೂ ಸುಟ್ಟು ಬೂದಿಯ ರೂಪದಲ್ಲೂ ಇದೇ ಮೂಲವಸ್ತುಗಳ ಆಕ್ಸೈಡುಗಳಾಗಿ ಮತ್ತೆ ಭೂಮಿಯನ್ನೇ ಸೇರುತ್ತದೆ. ನೀರಿಗೆ ಸೇರಿದರೂ ಅಷ್ಟೆ ಹರಿವ ನದಿಗಳಿಂದ ಮೆಕ್ಕಲು ಮಣ್ಣಿನ ಜತೆಗೆ ನೆಲವನ್ನೇ ಆಶ್ರಯಿಸಿ ನಿಸರ್ಗದಲ್ಲಿ ಒಂದಾಗುತ್ತವೆ.

ವಿಜ್ಞಾನದಲ್ಲಿ ಋಣದ ಮಾತು


ವಿಜ್ಞಾನದಲ್ಲಿ ಋಣವೇನಿದ್ದರೂ ಕೊಡುಕೊಳ್ಳುವಿಕೆಯ ಕ್ರಿಯೆಯ ಒಳಗಣ ನಿಸರ್ಗದ ನಿಯಮಕ್ಕೆ ಬದ್ಧವಾಗಿರುತ್ತದೆ. ಇದೊಂದು ವಸ್ತು ವರ್ಗಾವಣೆಯ ಅಥವಾ ವಿನಿಮಯದ ಸಂದರ್ಭವಷ್ಟೆ. ಇದು ನಿಯಮಕ್ಕೆ ಒಳಪಟ್ಟು ಪದಾರ್ಥಗಳ ಸೃಷ್ಟಿಗೆ ಮತ್ತೆ ಅವುಗಳ ಲಯಕ್ಕೆ ಅನುವು ಮಾಡುತ್ತಾ ವರ್ತುಲವಾಗಿ ನಡೆಯುತ್ತಲೇ ಇರುತ್ತದೆ. ದ್ರವ್ಯರಾಶಿಗಳ ಕ್ರಿಯೆಗೆ ಒಳಗಾಗಿ ಅವುಗಳ ಉತ್ಪನ್ನಗಳ ಚಟುವಟಿಕೆಯಲ್ಲಿ ನಿಯಮಬದ್ಧ ಸಂಬಂಧವನ್ನು ಸದಾ ಹೊಂದಿರುತ್ತದೆ. ಹಾಗಾಗಿ ನಿಸರ್ಗದಲ್ಲಿನ ಬದಲಾವಣೆಯು ವೈವಿಧ್ಯಮಯ ಜೀವಿಗಳ ಅಗತ್ಯಗಳನ್ನು ಪೂರೈಸುವ ರಸಾಯನಿಕ ಚಟುವಟಿಕೆಯೇ ಆಗಿರುತ್ತದೆ. ಮಣ್ಣಿನಲ್ಲಿನ ಖನಿಜಗಳು ವಿಭಜನೆಗೊಂಡು ಕರಗಿ, ಸಸ್ಯಗಳಲ್ಲಿ ಹೀರಿಕೊಂಡು, ಸಂಯುಕ್ತಗಳಾಗಿ ಹಣ್ಣು ಬೀಜಗಳಲ್ಲಿ ತುಂಬಿಕೊಂಡು ಆಹಾರವಾಗಿ, ಮತ್ತೆ ಜೀರ್ಣಗೊಂಡು ಸೂಕ್ಷ್ಮಜೀವಿಗಳಿಂದ ಮತ್ತೆ ಐಯಾನುಗಳಾಗಿ ಮರಳಿ ಸೇರುವ ಕೆಲಸಗಳು ಒಂದನ್ನೊಂದು ಅನುಸರಿಸಿ ನಡೆಯುತ್ತಿರುತ್ತವೆ. ಆಯಾ ಸಮಯಕ್ಕೆ ಸರಿಯಾಗಿ ಆಯಾ ಜೀವಿಯ ಪಾಲು ತೆಗೆದುಕೊಳ್ಳಬೇಕಷ್ಟೆ. ಮಾನವರಾಗಿ ನಾವೂ ಈ ಚಕ್ರದಲ್ಲಿ ಪಾಲುಗೊಂಡು ನಮ್ಮ ಆಹಾರವನ್ನು ಪಡೆದಿರುತ್ತೇವೆ.

ಸುಖಮರಣವನ್ನು ಆಹ್ವಾನಿಸಿಕೊಂಡ ನೊಬೆಲ್ ಪುರಸ್ಕೃತ ವಿಜ್ಞಾನಿ


ಇರಲಿ ಈ ಋಣದ ಮಾತನ್ನಿಲ್ಲಿಗೇ ಬಿಟ್ಟು ಅದರ ನಂತರದ ಆಸೆಗಳಿಗೆ ಮತ್ತು ಅವುಗಳ ವೈಜ್ಞಾನಿಕ ಸಂಗತಿಗಳನ್ನು ಗಮನಿಸೋಣ. ಸಾವನ್ನು ಆದಷ್ಟು ಮುಂದು ಹಾಕುವಂತೆ ನಮ್ಮ ಸಾಧಾರಣವಾದ ಪ್ರೇರಣೆಯಿರುತ್ತದೆ. ಆದರೆ ಸಾವನ್ನೇ ಆಹ್ವಾನಿಸಿಕೊಂಡ ವಿಜ್ಞಾನಿಯೊಬ್ಬರಿದ್ದರು. ಅವರಿಗೆ 1974ರ ವೈದ್ಯಕೀಯ ವಿಭಾಗದಲ್ಲಿ ನೊಬೆಲ್ ಬಹುಮಾನ ಕೂಡ ಬಂದಿತ್ತು. ಬೆಲ್ಜಿಯಂ ದೇಶದ ಕ್ರಿಶ್ಚಿಯನ್ ಡೆ ಡುವೆ ಎಂಬ ಈ ವಿಜ್ಞಾನಿ ಕಳೆದ ವರ್ಷ 2013 ರಲ್ಲಿ ಮೇ ತಿಂಗಳ 4ರಂದು ತಮ್ಮ ಸುಖಮರಣವನ್ನು ಹೊಂದಿದರು. ಸಾವನ್ನು ತರುವ ಚುಚ್ಚುಮದ್ದು ಚುಚ್ಚಿಕೊಂಡು ತಮ್ಮ 95ನೆಯ ವಯಸ್ಸಿನಲ್ಲಿ ತಮ್ಮ ಜೀವನ ಪಯಣವನ್ನು ಮುಗಿಸಿದರು. ಕ್ಯಾನ್ಸರ್ ಮತ್ತು ವೃದ್ಧಾಪ್ಯದಿಂದ ಬಳಲುತ್ತಿದ್ದ ಅವರು ವಿಧುರರಾಗಿದ್ದರು. ತಮ್ಮ ನಾಲ್ಕೂ ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಹಿತೈಷಿಗಳನ್ನೆಲ್ಲಾ ಕರೆಸಿಕೊಂಡು ಎಲ್ಲರ ಮುಂದೆ ನಗುನಗುತ್ತಾ ಜೀವನಕ್ಕೆ ಗುಡ್‌ಬೈ ಹೇಳಿದರು. ಯಾರೂ ದುಃಖಿಸದಂತೆ ಎಲ್ಲರಿಗೂ ಹೇಳುತ್ತಾ, ತಮ್ಮ ಜೀವನ ಅಂತ್ಯವನ್ನು ತಾವೇ ಇಚ್ಛೆಯಿಂದ ಪಡೆದುಕೊಂಡು ತಮ್ಮ ಜತೆಗೆ ಪ್ರೀತಿ ಪೂರ್ಣ ನಡೆಸಿದ ಎಲ್ಲರಿಗೂ ಶುಭಹಾರೈಸಿ ಕೊನೆಯುಸಿರೆಳೆದರು. ಬೆಲ್ಜಿಯಂನಲ್ಲಿ ಅದಕ್ಕೆ ಕಾನೂನಿನ ಸಮ್ಮತಿಯಿದೆ. ಜೀವಕೋಶಗಳ ರಾಚನಿಕ ಮತ್ತು ಜೀವಿಕ್ರಿಯೆಗಳ ಕುರಿತ ಶೋಧಕ್ಕೆ ಅವರು ನೊಬೆಲ್ ಪುರಸ್ಕಾರವನ್ನು ಪಡೆದಿದ್ದರು. ಸಾವಿಗೂ ಮುನ್ನ ಲಿ ಸಾಯರ್ ಪತ್ರಿಕೆಗೆ ಹೇಳಿಕೆಯನ್ನಷ್ಟೇ ಕೊಟ್ಟು ಜೀವನಯಾತ್ರೆಯನ್ನು ಮುಗಿಸಿದರು.



ಜಪಾನಿನ ಶಿನ್ಯಾ ಯಮನಕ



ಸುಖಮರಣವನ್ನು ಆಹ್ವಾನಿಸಿಕೊಂಡ ಕ್ರಿಶ್ಚಿಯನ್ ಡೆ ಡುವೆ.



ಬ್ರಿಟನ್ನಿನ ಜಾನ್ ಗುರ್ಡಾನ್

ಸಾವನ್ನೇ ಬಯಸಿ ತಂದುಕೊಂಡವರಲ್ಲಿ ಅನೇಕ ಸಂತರ ದಾಖಲೆಗಳು ನಮ್ಮ ನಾಡಿನಾದ್ಯಂತ ಕಾಣಬರುತ್ತವೆ. ಕೆಲವು ಮಠಗಳಲ್ಲಿ ಜೀವಂತ ಸಮಾಧಿಸ್ಥರಾಗಿದ್ದ ಬಗ್ಗೆ ನಂತರದಲ್ಲಿ ಅವರ ಸಮಾಧಿಯ ನಿತ್ಯ ಪೂಜೆಗಳಾಗುವುದನ್ನೂ ಕಾಣುತ್ತೇವೆ. ಕೆಲವು ಮಠಗಳಲ್ಲಿ ಈಗಾಗಲೇ ಆಗಿಹೋದ ಹಲವಾರು ಮಠಾಧೀಶರುಗಳ ಅನೇಕ ಸಮಾಧಿಗಳೂ ಕಾಣಬರುತ್ತವೆ, ಜತೆಗೆ ನಿತ್ಯ ಪೂಜೆಗೂ ಒಳಗಾಗುತ್ತವೆ. ಭೇಟಿಕೊಡುವ ಭಕ್ತರಿಗೆ ಅವರಿನ್ನೂ ಸಮಾಧಿಸ್ಥರಾಗಿ ಹರಸುತ್ತಿರುವ ಬಗ್ಗೆ ನಂಬಿಕೆಗಳಿರುತ್ತವೆ. ಅಂತಹ ಮಠಗಳಲ್ಲಿ ಬದುಕಿರುವ ಮಠಾಧೀಶರೂ ತಮ್ಮ ಸಮಾಧಿಗಳನ್ನು ಮುಂಗಡವಾಗಿಯೇ ಕಟ್ಟಿಸಿಕೊಂಡ ಉದಾಹರಣೆಗಳೂ ಕಾಣಬರುತ್ತವೆ. ಅಂದರೆ ಸಾವಿನಾಚೆಯೂ ತಾವಿದ್ದಂತೆ ಭಕ್ತರು ನಂಬುವ ಪ್ರಕ್ರಿಯೆಯು ಅವರಲ್ಲಿ ಇಂತಹ ಆಲೋಚನೆಯನ್ನೂ ಹುಟ್ಟಿಸಿರಲು ಸಾಕು. ಸಾವಿನಾಚೆಯ ಬಯಕೆಗಳ ಒಂದು ರೂಪವಿದ್ದರೂ ಆಶ್ಚರ್ಯವಿಲ್ಲ.

ಸಾವಿನಾಚೆಯ ಬಯಕೆಗಳಂತೂ ಇರುತ್ತವೆ. ಅದಕ್ಕೆ ಬದುಕಿನ ನೆನಪಾಗಿ ಏನಾದರೂ ಉಳಿಸಿಹೋಗುವ ಮಾತುಗಳು ಸಹಜ ಮತ್ತು ಅಂತಹ ಆಸೆಗಳೂ ನಿಜ. ಇವುಗಳನ್ನು ಸ್ಮಾರಕಗಳಲ್ಲಿ, ತಮ್ಮ ಕೃತಿಗಳಲ್ಲಿ, ಶೋಧಗಳಲ್ಲಿ ಅವರ ಹೆಸರಿನಿಂದ ನೆನಪಿಸಿಕೊಳ್ಳುತ್ತೇವೆ. ಅನೇಕ ವೈಜ್ಞಾನಿಕ ಶೋಧಗಳು ವಿಜ್ಞಾನಿಗಳ ಹೆಸರಿನಲ್ಲೆ ಇರುವುದು ತುಂಬಾ ಸಾಮಾನ್ಯವಾಗಿದೆ. ಬಹುಶಃ ಈ ಬಗ್ಗೆಯ ಹೆಸರಿಸುವಿಕೆ ಅವರ ಬಯಕೆಗಿಂತಲೂ ಅವರ ಮುಂದಿನ ಸಂತತಿಯವರು ಅವರ ಗೌರವದ ನೆಪವಾಗಿ ಇಟ್ಟಿರಲೂ ಕಾರಣಗಳಿರಬಹುದು.

ಹೀಗೆ ಸಾವಿನಾಚೆಯ ಬದುಕಿನ ಬಯಕೆಗಳು ಪ್ರತೀ ಜೀವಿಯಲ್ಲೂ ಅಷ್ಟೇಕೆ ಪ್ರತೀ ಜೀವಕೋಶದಲ್ಲೂ ಇರುತ್ತದೆ ಎಂಬುದು ಇತ್ತೀಚೆಗಿನ ಕೆಲವು ಸಂಶೋಧನೆಗಳಿಂದ ಕಾಣಬರುತ್ತದೆ. ವಿಜ್ಞಾನದ ಕೆಲವು ತಿಳಿವಳಿಕೆಗಳು ಈ ಅನುಮಾನಗಳನ್ನು ಬಯಲು ಮಾಡಿವೆ. ಅಂದರೆ ಮೂಲತಃ ಸಾವನ್ನು ಒಪ್ಪದ ಬಯಕೆಯು ಬಹಳ ಮುಖ್ಯವಾದುದು. ಅದಕ್ಕೇ ಮುಪ್ಪಾಗುವ ಬದಲು ಹಿಮ್ಮುಖವಾಗಿ ಬೆಳೆಯುವ ಬಗೆಗೆ ಜೀವಕೋಶಗಳಲ್ಲಿ ಆಸಕ್ತಿಯಿರುವ ಬಗೆಗೆ ಒಂದು ಬೆರಗಿನ ಸಂಶೋಧನೆಯು ವಿಜ್ಞಾನ ಜಗತ್ತಿನಲ್ಲಿ ಸುದ್ದಿ ಮಾಡಿದೆ. ಇಂತಹ ಜೀವಕೋಶಗಳಲ್ಲಿನ ಮತ್ತೆ ಮತ್ತೆ ಹುಟ್ಟುವ ಬಯಕೆಯನ್ನು ಮುಚ್ಚಿಕೊಂಡು ಬದುಕುವ ಕುರಿತ ಅಧ್ಯಯನಕ್ಕೆ 2012ರ ವೈದ್ಯಕೀಯ ಮತ್ತು ಶರೀರ ಕ್ರಿಯಾ ಶಾಸ್ತ್ರದ ನೊಬೆಲ್ ಪುರಸ್ಕಾರ ಬಂದಿದೆ. ಇದೊಂದು ಆಸಕ್ತಕರ ಸಂಶೋಧನೆಯಾಗಿದ್ದು ಸಾವಿನಾಚೆಯ ಬಯಕೆಗೆ ಮೂಲ ದ್ರವ್ಯವನ್ನು ಒದಗಿಸುವ ಬಗೆಗೆ ಪ್ರಶ್ನಿಸಬಹುದಾಗಿದೆ.

ಇಂದಿಗೆ ಸುಮಾರು 52 ವರ್ಷಗಳ ಹಿಂದೆ 1962ರಲ್ಲಿ ಬ್ರಿಟನ್ನಿನ ಜಾನ್ ಬಿ. ಗುರ್ಡಾನ್ ಅವರು ತಮ್ಮ ಎಳೆಯ ಜೀವಕೋಶಗಳಿಗೆ ಮತ್ತೆ ಮತ್ತೆ ಹುಟ್ಟಿದಂತೆ ಹಿಂದೆ ಹೋಗಿ ಮೊದಲಿನ ಜೀವನ ಆರಂಭಿಸುವ ಸಾಮರ್ಥ್ಯದ ಬಗೆಗೆ ಸಂಶೋಧನಾ ಲೇಖನವನ್ನು ಪ್ರಕಟಿಸಿದ್ದರು. ಆಗ ಸದ್ಯಕ್ಕೆ ಅದು ಕೇವಲ ಎಳೆಯ ಕೋಶಗಳಿಗೆ ಮಾತ್ರವೇ ಎಂದು ನಂಬಲಾಗಿತ್ತು. ಇದರ ಶೋಧ ಮುಂದುವರೆಯಲು ನಾಲ್ಕು ದಶಕಗಳು ಬೇಕಾದವು. ಆಶ್ಚರ್ಯವೆಂದರೆ ಅದೇ ವರ್ಷ ಅಂದರೆ 1962ರಲ್ಲಿ ಇತ್ತ ಪೂರ್ವದಲ್ಲಿ ಜಪಾನಿನಲ್ಲಿ ಹುಟ್ಟಿದವರಾದ ಶಿನ್ಯಾ ಯಮನಕಾ ಅವರು ಮುಂದೆ ಗುರ್ಡಾನ್ ಅವರ ವೈಜ್ಞಾನಿಕ ಸಂಶೋಧನೆಯನ್ನು ಕೈಗೆತ್ತಿಕೊಂಡರು. ಮೂಳೆತಜ್ಞ ವೈದ್ಯರಾಗಿದ್ದೂ ಮೂಲವಿಜ್ಞಾನಕ್ಕೆ ಬಂದ ಶಿನ್ಯಾ ಅವರು ಸಂಶೋಧನೆ ಮುಂದುವರೆಸಿದ್ದಲ್ಲದೆ 2006ರಲ್ಲಿ ಅಂತಹ ಆಲೋಚನೆಗಳು ಕೇವಲ ಎಳೆಯ ಜೀವಕೋಶಗಳಿಗೆ ಮಾತ್ರ ಸೀಮಿತವಲ್ಲ ಅವು ಬಲಿತ ಕೋಶಗಳಲ್ಲೂ ಇವೆ ಎಂಬುದಾಗಿ ಸಾಬೀತು ಮಾಡಿದರು. ಬಲಿತ ಜೀವಕೋಶಗಳನ್ನೂ ಪುನರ್ ಪ್ರತಿಷ್ಠಾಪಿಸಿ ಎಳೆಯ ಜೀವಕೋಶಗಳಂತೆ ಬೆಳೆಸುವ ಸಂಶೋಧನೆಗೆ 2012ರ ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಇಬ್ಬರೂ ಕೂಡಿ ಹಂಚಿಕೊಂಡರು.

ಕೆಲವೊಂದು ವಿಶಿಷ್ಟವಾದ ಬಲಿತ ಜೀವಕೋಶಗಳನ್ನು, ಬಲಿತಿಲ್ಲದ ಅಥವಾ ಅಪಕ್ವ ಜೀವಕೋಶಗಳನ್ನಾಗಿ ಮಾರ್ಪಡಿಸುವ ಇವರ ಸಂಶೋಧನೆ ವೈದ್ಯಕೀಯ ಲೋಕದಲ್ಲಿ ವಿಶಿಷ್ಟ ಮೈಲಿಗಲ್ಲಾಗಿದೆ. ತಾಯಿಯಲ್ಲಿ ಗರ್ಭಾಂಕುರವಾದ ಕೂಡಲೇ ಭ್ರೂಣವಾಗಿ ಉದಯಿಸಿದ ಜೀವಕೋಶದಿಂದಲೇ ನಾವೆಲ್ಲರೂ ಹುಟ್ಟಿ ಬೆಳೆದಿದ್ದೇವೆ.

ಈ ಜೀವಕೋಶವು ಮುಂದೆ ಎಲ್ಲಾ ಬಗೆ
ಜೀವಕೋಶಗಳಾಗಿ ಬೆಳೆಯುವ ಮಾಹಿತಿಯ
ಹೊತ್ತಿರುತ್ತದೆ. ಆದ್ದರಿಂದಲೇ ನಮಗೆ ಕೈಕಾಲು,
ಬಾಯಿ ಇತರೆ ಎಲ್ಲಾ ಬಗೆಯ ಅವಯವಗಳಾಗ
ಸಾಧ್ಯತೆಯಿರುತ್ತದೆ. ಗರ್ಭಾಂಕುರವಾದಾಗ ಈ ಜೀವಕೋ
ಬಲಿತಿರದ ಜೀವಕೋಶವಾಗಿದ್ದು ಅದನ್ನು ಪ್ಲೂರಿಪೊಟೆಂ
ಸ್ಟೆಮ್ ಜೀವಕೋಶ ಎನ್ನುತ್ತಾರೆ. ಪ್ಲೂರಿಪೊಟೆಂಟ್- ಎಂ
"ವೈವಿಧ್ಯಮಯ ಶಕ್ತಿಯುಳ್ಳ" ಎಂದರ್ಥ. ಈ ಭ್ರೂಣ
ಮುಂದೆ ಬೆಳೆದು ಬಲಿತ ದೇಹವುಳ್ಳ ಜೀವಿಯ
ಹೊರಹೊಮ್ಮುತ್ತದೆ. ನಮ್ಮೆಲ್ಲರ ಸಾಮಾನ್ಯ ನಂಬಿಕೆ ಎಂ
ಬೆಳೆದ ಜೀವಕೋಶವು ಹಿಮ್ಮುಖವಾಗಿ ಎಳೆತ
ಹಿಂದಿರುಗಿ ಬೆಳೆಯಲಾರದು. ಆದರೆ ಇದೀಗ ಅಂ
ತಿಳಿವಳಿಕೆ ಬದಲಾಗಿದ್ದೂ ನಮ್ಮ ಯಾವುದೇ ಜೀವಕೋಶ
ಹಿಂದಕ್ಕೆ ಬೆಳೆದು ಮತ್ತೆ ಹೊಸ ಜೀವನವನ್ನು ಪ
ಮಾಡುವ ಆಸೆಯನ್ನೂ ಶಕ್ತಿಯನ್ನೂ ಹೊಂದಿರುತ್ತ
ಎನ್ನುತ್ತದೆ ಇವರ ಸಂಶೋಧನೆ. ಅಂದರೆ ಸಾವಿನ
ಪಾರಾಗುವ ಸಾವಿನಾಚೆಯ ಬಯಕೆಯು ಪ್ರ
ಜೀವಕೋಶದಲ್ಲೂ ಇದ್ದಿರಬಹುದಾದ ಸಾಧ್ಯತೆಗಳಿವೆ. ಅ
ಅದಕ್ಕೆ ವಿಜ್ಞಾನ ಜಗತ್ತಿನ ಅತ್ಯುನ್ನತ ಮಾನ್ಯತೆ ದೊರ

ಕಪ್ಪೆಯು ಹಿಮ್ಮುಖವಾಗಿ ನೆಗೆಯುವಂತಾಗಿದೆಯ
ಜಾನ್ ಗುರ್ಡಾನ್ ಅವರ ಸಂಶೋಧನೆಯು ಇದ
ಮಾಡಿದ್ದು! ಕಪ್ಪೆಯ ಕರುಳಿನ ಜೀವಕೋಶದಿಂದ ತೆ
ನ್ಯೂಕ್ಲಿಯಸ್‌ನ್ನು ಭ್ರೂಣದ ಜೀವಕೋಶಕ್ಕೆ ಸೇರಿಸಿದಾ
ಅದು ಮೊದಲಿನ ಭ್ರೂಣದ ನ್ಯೂಕ್ಲಿಯಸ್ಸಿನಂತೆಯೇ ವ
ಅದರಿಂದ ಮುಂದೆ ಕಪ್ಪೆಯ ಮರಿಯೇ ಹುಟ್ಟಿತು. ಅಂ
ಮುಪ್ಪಾಗುವಂತಿದ್ದ ಬಲಿತ ಜೀವಕೋಶದಿಂದ ಭ್ರೂ
ಜೀವಕೋಶದ ಬೆಳವಣಿಗೆ ಸಾಧ್ಯವಾಯಿತು. ಆದರೆ ಇ
ಸಂಶೋಧನೆಯು ಜೀವಕೋಶವೊಂದರ ನ್ಯೂಕ್ಲಿಯಸ್ಸ
ತೆಗೆದುಹಾಕಿ ನಂತರ ಬದಲಿಗೆ ಬಲಿತ ಜೀವಕೋ
ನ್ಯೂಕ್ಲಿಯಸ್ಸನ್ನು ಸೇರಿಸಿವುದರಿಂದ ಪಡೆದ ಎಳೆ
ಜೀವಕೋಶವಾಗಿತ್ತು. ಆದ್ದರಿಂದ ಇದು ಒಂದು ಪ್ರಶ್ನೆಯ
ಹುಟ್ಟಿಹಾಕಿತ್ತು. ಅದೇನೆಂದರೆ ಅಂಗಾಂಗಕ್ಕೆ ಹೊಂದಿಕೊ
ಜೀವಕೋಶದಿಂದ ಈ ಬಗೆಯ ಹಿಮ್ಮುಖ ವರ್ತನೆಯಿ
ಸ್ಟೆಮ್ ಜೀವಕೋಶಗಳನ್ನು ಪಡೆಯುವುದು ಸಾಧ್ಯವ
ಎಂಬುದಾಗಿತ್ತು.

ಅಂಗಾಂಗಕ್ಕೆ ಹೊಂದಿಕೊಂಡ ಬಲಿತ ಕೋಶಗಳ
ಹಿಂದಕ್ಕೆ ಚಲಿಸಿ ಸ್ಟೆಮ್ ಜೀವಕೋಶಗಳನ್ನು ಪಡೆಯ
ಉತ್ತರವು ದೊರೆಯಲು ಮುಂದೆ 44 ವರ್ಷಗ
ಬೇಕಾದವು. 2006ರಲ್ಲಿ ಜಪಾನಿನ ಶಿನ್ಯಾ ಯಮನ
ಅವರ ಮಹತ್ತರ ಸಂಶೋಧನೆಯು ಅದನ್ನು ಸಾಧ್ಯ ಮಾಡಿ
ಪಶ್ಚಿಮದ ಇಂಗ್ಲೆಂಡಿನ ವಿಕಾಸದ ಪ್ರಶ್ನೆಗೆ ಪೂರ್ವ
ಜಪಾನಿನಲ್ಲಿ ಸಾಧ್ಯತೆಗಳು ಹುಟ್ಟಿದವು. ಶಿನ್ಯಾ ಅವ
ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸ್ಟೆ
ಜೀವಕೋಶಗಳಲ್ಲಿ ಬಲಿಯದಂತೆ ಕಾಪಾಡಿಕೊಳ್ಳಬ
ಜೀನುಗಳನ್ನು ಪತ್ತೆ ಹಚ್ಚಿದರು. ಎಳೆತನವ
ಕಾಯ್ದಿಟ್ಟುಕೊಳ್ಳಬಲ್ಲ ಹಲವು ಜೀನುಗಳು ದೊರೆತ
ಅವುಗಳಲ್ಲಿ 4 ಜೀನುಗಳನ್ನು ಬಲಿತ ಜೀವಕೋಶಗ
ಮರುಚುಚ್ಚುವಿಕೆಯಿಂದ ಎಳೆತನವನ್ನು ಪುನ
ಸೃಷ್ಟಿಮಾಡಬಹುದೆಂಬ ಸಂಶೋಧನೆಯಿಂದ ಸ್ಟೆ
ಜೀವಕೋಶಗಳ ಸಂಶೋಧನೆಯಲ್ಲಿ ಹೊಸತೊಂ
ಆಯಾಮ ಸಿಕ್ಕಿತು. ಜೈವಿಕ ತಿಳಿವಳಿಕೆಯ
ಹೊಸಲೋಕವೊಂದು ಉದಯಿಸಿದಂತಾಯಿತು.

ಎಲ್ಲಾ ಜೀವಿಗಳ ಒಂದೇ ಉತ್ಕಟ ಆಸೆಯೆಂ
ಬದುಕು ನಿರಂತರವಾಗಿ ಇರಬೇಕೆಂಬುದೇ ಆಗಿ
ಮಾನವರಿಗಂತೂ ಅತ್ಯಂತ ದೊಡ್ಡ ಭಯವೆಂದರೆ ಸಾ
ಸಾವನ್ನು ತಪ್ಪಿಸಿಕೊಳ್ಳುವ ಬಯಕೆಯೂ ಜೀವಕೋಶಗ
ಅಡಗಿದೆಯೇ? ಇದೊಂದು ಮಾಯಾಪ್ರಶ್ನೆಯೇ! ಬ
ಜೀವಕೋಶಗಳೂ ಮತ್ತೆ ಹಿಮ್ಮುಖ ಪಯಣ ಆರಂಭಿಸು
ಕೆಲವು ತೊಂದರೆಗಳಿದ್ದಾಗ್ಯೂ ಸಾಧ್ಯತೆಗಳಿರುವುದಂ
ಸಾಬೀತಾಗಿದೆ. ಬದುಕಿನ ಬಯಕೆಗಳಲ್ಲಿ, ನ
ಸಾವಿನಾಚೆಯ ಆಸೆಗಳಿರುವುದಂತೂ ನಿಜ. ನಮ್ಮ ಬದು
ಹಾಗೂ ಅದರಾಚೆಯ ಬಯಕೆಗಳ ಬೇಕುಗಳಿಗೆ ಜೈ
ಕಾರಣಗಳಿವೆ. ಆದರೆ ಬೇಡಗಳನ್ನು ಕೊಡುವ ನ
ವೈರಾಗ್ಯವು ಮಾತ್ರ ಬದುಕಿನ ಪ್ರೇರಣೆಗಳಿಂದಾದ
ಬೇಕುಗಳು ಸಹಜ, ಆದರೆ ಬೇಡ ಅನ್ನುವು
ಕಲಿಕೆಯಿಂದಾದ್ದು. ಮಾನವರ ವೈರಾಗ್ಯ ತ್ಯಾಗ ಗುಣ
ಸಾಮುದಾಯಿಕ ಜೀವನದ ಕಲಿಕೆಯಿಂದ ವಿಕಾಸವಾ
ಎನ್ನುತ್ತವೆ ಅಧ್ಯಯನಗಳು. ವೈರಾಗ್ಯ ಎನ್ನುವುದು ಅ
ಸುಲಭದ್ದಲ್ಲ, ಮೊನ್ನೆ ಸಂಸ್ಕಾರದಲ್ಲೂ ಇದೇ ಆಗಿ
ಅನಂತಮೂರ್ತಿಗಳೂ ಸಾಮಾನ್ಯ ಜೀವಿಯ ಸ
ಆಸೆಗಳುಳ್ಳವರೇ ಆದರು.


ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ವೈಷ್ಣವ ಏರ್‌ವೇ ಸರ್ವೀಸಸ್


"ಹೊರಟೆ ಸೇರೆ ನಮ್ಮ ಊರ ನಿಮಗೆ ನಮ್ಮ ...ಸ್ಕಾರ" ಎಂದು ಹಾಡುತ್ತಾ ಸಂತ ತುಕಾರಾಮನ ...ತ್ರದಲ್ಲಿ ಡಾ. ರಾಜಕುಮಾರ್ ಹಾಡುತ್ತಾ ಹೊರಟಾಗ, ...ಕಾರಾಮನ ಮಡದಿಯಾಗಿ ಅಭಿನಯಿಸಿದ್ದ ಲೀಲಾವತಿಗೆ ...ಳ ನೆರೆಮನೆಯ ಮಹಿಳೆಯರು ಬಂದು ಹೇಳುತ್ತಾರೆ ...ನು ಏನು ಮಾಡ್ತಿದ್ದೀಯಾ ಇಲ್ಲಿ? ತುಕಾರಾಂ ಅವರನ್ನು ...ದೊಯ್ಯಲು ಪುಷ್ಪಕವಿಮಾನ ಬಂದಿದೆ."

"ಅಯ್ಯೋ ಅವರ ಕೊನೆಯ ಮಾತುಗಳನ್ನು ನಾನು ...ಳ ಮಾಡಿಕೊಳ್ಳದೇ ಹೋದೆನೇ?" ಎಂದು ದುಃಖಿಸುವ ...ಡದಿ "ಸ್ವಾಮಿ, ಸ್ವಾಮಿ" ಎಂದು ಹಿಂದೆಯೇ ಓಡುತ್ತಾಳೆ. ...ಹೊತ್ತಿಗಾಗಲೇ ಪುಷ್ಪಕ ವಿಮಾನವು ಬಂದಿದ್ದು, ...ಕಾರಾಮನ ಕೊಂಡೊಯ್ಯುತ್ತಿರುತ್ತದೆ. ಆಗ ಆ ಮಹಾನ್ ...ನ ಲೌಕಿಕ ಮಡದಿ ಅಲ್ಲೇ ಕುಸಿದು ಬಿದ್ದು ಸಾಯುತ್ತಾಳೆ. ...ತ ತುಕಾರಾಮ ಚಲನಚಿತ್ರದ ಈ ದೃಶ್ಯ ಅತ್ಯಂತ ...ದಯಸ್ಪರ್ಶಿ. ರಾಜಕುಮಾರ್ ಮತ್ತು ಲೀಲಾವತಿಯವರ ...ಮೋಘ ಅಭಿನಯದ ಈ ಚಿತ್ರವನ್ನು ಅದೆಷ್ಟು ಬಾರಿ ...ಡಿದ್ದೇನೋ ನನಗೇ ಗೊತ್ತಿಲ್ಲ, ಅದರಲ್ಲೂ ಪ್ರತಿ ಸಲವೂ









...ಯ ದೃಶ್ಯವನ್ನು ನೋಡುತ್ತಾ ಕಣ್ಣೀರಿಟ್ಟಿದ್ದೇನೆ. ...ಲ್ಯದಿಂದಲೂ ನನಗೆ ಕಾಡುತ್ತಿದ್ದ ಪ್ರಶ್ನೆ ಎಂದರೆ ಈ ...ಕರಹೀನ ದೇವರು ಪುಷ್ಪಕ ವಿಮಾನವೆಂಬ ಅನ್‌ಟೈಮ್ಲೀ ...ಟ್ ಕಳಿಸುವುದು ಯಾಕೆ ಎಂದು? ಅವನು ಫ್ಲೈಟ್ ...ಸಿದ ಅನ್ನೋ ಕಾರಣಕ್ಕೆ ಇವರು ಹೋಗಲೇಬೇಕಾದ ...ವಾರ್ಯತೆ ಯಾಕೆ? ಆ ಸಂತರಿಗೆ ಇನ್ನೂ ವಯಸ್ಸಿರುತ್ತದೆ, ...ಡಬೇಕಾದ ಬೇಕಾದಷ್ಟು ಕೆಲಸವಿರುತ್ತದೆ, ಮಕ್ಕಳು ...ವಿರುತ್ತಾರೆ. ಇನ್ನೂ ಅವರ ಅನೇಕ ಪಾಮರ ಸ್ನೇಹಿತರಿಗೆ ...ರ ಅಲೌಕಿಕ ಜ್ಞಾನವನ್ನಾಗಲಿ, ಸಂತರ ಸಾತ್ವಿಕ ಬದುಕಿನ ...ಯನ್ನಾಗಲಿ ಕಲಿಸಿರುವುದಿಲ್ಲ. ಹಾಗಿದ್ದರೂ ಯಾಕಿಷ್ಟು ...ರ್ಜೆನ್ಸಿಯಲ್ಲಿ ವೈಷ್ಣವ ಏರ್‌ವೇ ಸರ್ವೀಸಸ್‌ಗಳು ತಮ್ಮ ...ಟ್ ಕಳಿಸಿಬಿಡುತ್ತವೆ - ಇತ್ಯಾದಿ ಆ ಕ್ಷಣಕ್ಕೆ ಉತ್ತರ ...ಳೆಯದ ಅನೇಕ ಪ್ರಶ್ನೆಗಳು ನನ್ನಲ್ಲಿದ್ದವು.

ಇಷ್ಟಕ್ಕೇ ನನ್ನ ಪ್ರಶ್ನೆಗಳು ಮುಗಿಯುವುದಿಲ್ಲ. ವೈಷ್ಣವ ...ಗೆಲ್ಲಾ ಬರುವ ಈ ಗರುಡ-ಫ್ಲೈಟ್ಸ್ ಶೈವ ಸಂತರಿಗೇಕೆ ...ವುದಿಲ್ಲ, ಬಂಡವಾಳಶಾಹಿ ವಿಷ್ಣು ಮಾತ್ರವೇ ...ನಗಳನ್ನು ಹೊಂದಿರುವಷ್ಟು ಶ್ರೀಮಂತನಾಗಿರ ...ದು. ಸರಿ, ವಿಷ್ಣುವಿನ ಅವತಾರವೇ ಆಗಿರುವ ...ಮನನ್ನಾಗಲಿ, ಕೃಷ್ಣನನ್ನಾಗಲಿ ಕರೆದೊಯ್ಯಲು ಫ್ಲೈಟ್‌ಗಳು ...ಲಿಲ್ಲವೇಕೆ? ರಾಮನ ಕಾಲದಲ್ಲಿ ಪುಷ್ಪಕ ವಿಮಾನಗಳು ...ವುದಕ್ಕೆ ಉಲ್ಲೇಖಗಳಿವೆ. ಬಹುಶಃ ಅವು ಡೊಮೆಸ್ಟಿಕ್ ...ಗಳಾಗಿದ್ದು, ಸ್ವರ್ಗಾರೋಹಣಕ್ಕೆಲ್ಲಾ ಸಾಧ್ಯವಾಗುವಷ್ಟು ...ಜ್ಞಾನ ಮುಂದುವರಿದಿರಲಿಲ್ಲವೆಂದು ಭಾವಿಸೋಣ.

ವಿಷ್ಣುವಿನ ಆರಾಧಕ ಸಂತರೆಲ್ಲಾ ಪುಷ್ಪಕ ವಿಮಾನದಲ್ಲಿ ...ಗುವ ಭಾಗ್ಯ ಪಡೆದರೆ, ವಿಷ್ಣುವಿನ ಅವತಾರವೇ ...ದ ರಾಮ ಮತ್ತು ಕೃಷ್ಣರು ನಮ್ಮ ನಾಗರಿಕ ...ಜದಲ್ಲಿ ಒಪ್ಪಲಾಗದಂತಹ ಸಾವುಗಳನ್ನು ಕಂಡರು.

ರಾಮನದು ಆತ್ಮಹತ್ಯೆಯಾದರೆ, ಕೃಷ್ಣನದು ಹತ್ಯೆ

ರಾಮನ ಅಂತ್ಯದ ಬಗ್ಗೆ ಆನಂದ ರಾಮಾಯಣದಲ್ಲಿ, ...ವಾ ಉತ್ತರ ರಾಮಾಯಣದಲ್ಲಿ ಏನು ಹೇಳುತ್ತದೆ ನೋಡೋಣ.

ಕಾಲಪುರುಷ ಒಬ್ಬ ವೃದ್ಧ ಋಷಿಯ ವೇಷದಲ್ಲಿ ರಾಮನ ಕಾಣಲು ಬಂದ. ಅವನ ಉದ್ದೇಶ 'ನೀನು ಮರ್ತ್ಯಲೋಕಕ್ಕೆ ಬಂದ ಉದ್ದೇಶವು ನೆರವೇರಿತು, ಇನ್ನು ವೈಕುಂಠಕ್ಕೆ ತೆರಳಬೇಕಾದ ಸಮಯ ಬಂದಿದೆ' ಎಂದು. ಈ ವಿಷಯವಾಗಿ ಚರ್ಚೆ ಮಾಡಲು ಅಥವಾ ಸವಿಸ್ತಾರವಾಗಿ ಮಾತಾಡಲು ಏಕಾಂತದಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಅವರು ಹಾಗೆ ಹೊಕ್ಕ ಕೋಣೆಯ ಹೊರಗೆ ರಾಮನ ಆಜ್ಞೆಯ ಪ್ರಕಾರ ಯಾರನ್ನೂ ಒಳಗೆ ಬಿಡದಿರಲು ಕಾವಲು ನಿಂತವನು ಲಕ್ಷ್ಮಣ.

"ಕೋಪವೆಂಬುದನರ್ಥ ಸಾಧನ, ಕೋಪವೇ ಸಂಸಾರ ಬಂಧನ, ಕೋಪದಿಂದಿಹ ಪರದ ಸುಕೃತವು ನಾಶವಾಗುವುದು. ಕೋಪವುಳ್ಳವನಾವನಾಗಲಿ ಕೆಟ್ಟ ಮನುಷ್ಯ ಅವನಿಗೆ ಇಹದಲ್ಲೂ ಪರದಲ್ಲೂ ಸ್ಥಾನವಿಲ್ಲ" ಎಂದು ವಿದುರನು ಹೇಳಿದ ಮಾತು ಹಾಗಿರಲಿ, ಅಂತಹ ಕೋಪದ ಪ್ರತಿರೂಪವೇ ಆದ ದೂರ್ವಾಸನೆಂಬ ಮಹಾ ಮಹರ್ಷಿಯು ಅಲ್ಲಿಗೆ ಬಂದ. ರಾಮನನ್ನು ನೋಡಲೇಬೇಕೆಂದ. ಖಂಡಿತವಾಗಿ ಲಕ್ಷ್ಮಣ ಸೂಪಿಗೆ ಬಿದ್ದ. ವೆರಿ ವೆರಿ ಹಾಟ್ ಸೂಪ್!!

ಒಬ್ಬ ತನಗೆ ಸಂದ ಆಜ್ಞಾನುವರ್ತಿಯಾಗಿ ನಡೆದುಕೊಳ್ಳುವುದು ಅವನ ಧರ್ಮವಾಗಿರುವಾಗ, ರಾಜನೊಂದಿಗೆ ಅಪಾಯಿಂಟ್‌ಮೆಂಟ್ ಇಲ್ಲದೇ ಬಂದು, ಅವನ ಧರ್ಮವನ್ನು ಮುರಿಯಬಾರದು ಎಂಬ ಸಾಮಾನ್ಯ ಜ್ಞಾನವಿಲ್ಲದ ಮಹರ್ಷಿ ಶಾಪದ, ಅಯೋಧ್ಯೆಯ ನಾಶದ ಭಯ ಹುಟ್ಟಿಸುತ್ತಿದ್ದಾನೆ. ಹೂಂ ಎನ್ನಲಾರದ, ಉಹುಂ ಎನ್ನಲಾರದ ಪಾಪದ ಲಕ್ಷ್ಮಣ ಮೆಲ್ಲನೆ ಅಲ್ಲಿಂದ ಜಾರಿಕೊಂಡು ಸರಯೂ ನದಿಯಲ್ಲಿ ತನ್ನ ಪೂರ್ವರೂಪ - ಅವನು ಆದಿಶೇಷನ ಅವತಾರವೆಂಬುದು ನಿಮಗೆ ತಿಳಿದಿರಲಿ- ಶೇಷದ ರೂಪತಾಳಿ ನೀರಿನಲ್ಲಿ ಹೊರಟು ಹೋಗುತ್ತಾನೆ. ವಿಷಯ ತಿಳಿದ ರಾಮನ ಎದೆ ಒಡೆಯುತ್ತದೆ. ಆಗಷ್ಟೇ ಅವನ ಹೆಂಡತಿ ಸೀತಾದೇವಿ ಭೂಮಿಯ ಕೊರಕಲು ಮಡಿಲಿಗೆ ತನ್ನ ಅರ್ಪಿಸಿಕೊಂಡು ಸತ್ತಿದ್ದಳು. ಈಗ ತನ್ನ ನೆರಳಾಗಿದ್ದ, ಪರಮಾಪ್ತನಾಗಿದ್ದ ಸೋದರ ಲಕ್ಷ್ಮಣ ನೀರಿನಲ್ಲಿ, ನಾವಾಡುವಂತಹ ಸಾಧಾರಣ ಭಾಷೆಯಲ್ಲಿ ಹೇಳುವುದಾದರೆ, ಆತ್ಮಹತ್ಯೆ ಮಾಡಿಕೊಂಡು ಸತ್ತ. ಥತ್, ಈ ದರಿದ್ರದ ಜನ್ಮ ಯಾಕೆ ಬೇಕೆಂದು, (ಈಗಾಗಲೇ ಕಾಲಪುರುಷ ಬಂದು ನೀನೆತ್ತಿ ಆಡಿದ್ದ ಅವತಾರ ಸಾಕು ಅಂತ ಬೇರೆ ಹೇಳಿಹೋಗಿದ್ದಾನೆ) ತಾನೇ ಸ್ವ-ಇಚ್ಛೆಯಿಂದ ಸರಯೂ ನದಿಯಲ್ಲಿ ಇಳಿದು, ಎಲ್ಲರೂ ನೋಡುನೋಡುತ್ತಿದ್ದಂತೆ ಜಲಸಮಾಧಿಯಾದ.

ಆಗ ಹನುಮಂತ ಏನು ಮಾಡುತ್ತಿದ್ದ?

ಅದಕ್ಕೂ ಉತ್ತರವಿದೆ. ರಾಮನಿಗೆ ತನ್ನ ಅವತಾರ ಪೂರ್ಣವಾದ ಜ್ಞಾನೋದಯವಾದ ಮೇಲೆ ಯಮಧರ್ಮನು ಬರಲಿ, ತನ್ನ ಒಯ್ಯಲಿ ಎಂದು ಜವರಾಯನನ್ನು ಬರಹೇಳಿದ. ಆದರೆ ಯಮ ಬರಲು ಒಪ್ಪಲಿಲ್ಲ, ಸದಾ ತನ್ನ ಸ್ವಾಮಿಯನ್ನು ಕಾವಲು ಕಾಯುತ್ತಿರುವ ಹನುಮನನ್ನು ದಾಟಿ ಬರಲು ಯಮನಿಗೆ ಧೈರ್ಯ ಇರಲಿಲ್ಲ. ಅವನ ಅಸಹಾಯಕತೆಯನ್ನು ಮೊಬೈಲ್ ಫೋನ್ ಇಲ್ಲದ ಆ ಯುಗದಲ್ಲಿ ಅದ್ಯಾವುದೋ ಒಂದು ರೀತಿಯಲ್ಲಿ ರಾಮನಿಗೆ ತಿಳಿಸಿದ. ತನ್ನ ಅತ್ಯಂತ ನಿಷ್ಠಾವಂತ, ಆಜ್ಞಾನುವರ್ತಿಯಾದ ದೂತನಿಗೆ, ದಾಸನಿಗೆ ಆ ಯಮನನ್ನು ಬಿಡು ಎಂದು ಹೇಳುವ ಬದಲು ಶ್ರೀರಾಮನು ತನ್ನ ಉಂಗುರವನ್ನು ಅರಮನೆಯ ನೆಲದ ಮೇಲೆ ಬಿಟ್ಟಿದ್ದ ಬಿರುಕಿನಲ್ಲಿ ಹಾಕಿಬಿಟ್ಟ. ನಂತರ ಹನುಮಂತನನ್ನು ಕರೆದು "ಹನುಮಾ, ಹನುಮಾ, ಹಿಂಗಿಂಗೆ ನನ್ನ ಉಂಗುರ ನೆಲದ ಬಿರುಕಿನಲ್ಲಿ ಬಿದ್ದು ಹೋಗಿದೆ. ಹೋಗಿ ತಗೊಂಡು ಬಾ" ಎಂದು ಆಜ್ಞಾಪಿಸಿದ. ಹನುಮ ತನ್ನ ಶರೀರವನ್ನು ಅತ್ಯಂತ ಸಣ್ಣದಾಗಿಸಿ ಅಥವಾ ಕೀಟವೊಂದರ ರೂಪದಲ್ಲಿ ನೆಲದ ಬಿರುಕಿನಲ್ಲಿ ಇಳಿದ. ಆ ಬಿರುಕೋ, ಗವಿಗಂಗಾಧರೇಶ್ವರ ಸ್ವಾಮಿಯ ದೇವಸ್ಥಾನದಲ್ಲಿರುವ ಗವಿ ಕಾಶಿಗೆ ಹೋಗುವಂತೆ, ಬಾಬಾ ಬುಡನ್‌ಗಿರಿಯಲ್ಲಿರುವ ಗವಿಯು ಮೆಕ್ಕಾಗೆ ಹೋಗುವಂತೆ, ಸೀದಾ ನಾಗಲೋಕಕ್ಕೆ ಹೋಯಿತು. ಅಲ್ಲಿ ವಾಸುಕಿಯನ್ನು ಭೇಟಿಯಾದ ಹನುಮ ತಾನು ರಾಮನ ಉಂಗುರವನ್ನು ಕೊಂಡೊಯ್ಯಲು ಬಂದಿದ್ದೇನೆ ಎಂಬ ತನ್ನ ಉದ್ದೇಶವನ್ನು ತಿಳಿಸಿದ. ಸರಿ, ವಾಸುಕಿ ಅವನನ್ನು ಉಂಗುರಗಳ ಒಂದು ಬೆಟ್ಟವೇ ಇದ್ದ ಸ್ಥಳಕ್ಕೆ ಒಯ್ದು "ಇದರಲ್ಲಿ ರಾಮನ ಉಂಗುರ ಇರಬಹುದು. ನೀನು ತೆಗೆದುಕೊಂಡು ಹೋಗಬಹುದು" ಎಂದು ಹೇಳಿದ.

ಉಂಗುರಗಳ ಬೆಟ್ಟವನ್ನು ನೋಡಿದ ಹನುಮಂತನಿಗೆ ಅದರ ಅರ್ಥವಾಗದೇ ವಿವರಣೆಗಾಗಿ ವಾಸುಕಿಯ ಸಹಾಯ ಬೇಡಿದ.

ವಾಸುಕಿ "ಜನನ ಮತ್ತು ಮರಣಗಳ ಚಕ್ರವೇ ಇದು. ಈ ಜೀವನ ಚಕ್ರವನ್ನೇ ಕಲ್ಪ ಎನ್ನುವುದು. ನಾಲ್ಕು ಯುಗಗಳಿಗೆ ಒಂದು ಕಲ್ಪವೆನ್ನುವುದು. ಒಂದು ಯುಗಾಂತರದಲ್ಲಿ ರಾಮ ಅಯೋಧ್ಯೆಯಲ್ಲಿ ಹುಟ್ಟುವನು. ನಂತರ ಅವನ ಅವತಾರ ಪೂರ್ಣವಾದ ಮೇಲೆ ಒಂದು ಉಂಗುರವು ಹೀಗೆ ನೆಲದ ಬಿರುಕಿನಿಂದ ನಾಗರ ಲೋಕಕ್ಕೆ ಬರುವುದು. ಆಗ ಕಪಿಯು ಅದನ್ನು ಹಿಂಬಾಲಿಸಿಕೊಂಡು ಬರುವುದು. ಆ ಸಮಯದಲ್ಲಿ ರಾಮನ ಅವತಾರ ಪೂರ್ಣವಾಗುವುದು. ರಾಮ ಸಾಯುವನು. ಜಗತ್ತು ಸಾಯುವುದು. ಮತ್ತೊಂದು ಕಲ್ಪ, ಮತ್ತೊಂದು ಯುಗ ಬರುವುದು. ಮತ್ತೊಂದು ಜಗತ್ತು ಮೂಡುವುದು. ಮತ್ತೊಬ್ಬ ರಾಮ ಬರುವನು, ಹೀಗೇ ಒಂದೊಂದು ಬಾರಿಯೂ ಉಂಗುರವು ಉರುಳುತ್ತಾ ಬಂದು ಈ ಉಂಗುರದ ಬೆಟ್ಟವು ಬೆಳೆಯುತ್ತಾ ಹೋಗುವುದು" ಇತ್ಯಾದಿ ವಿಷಯಗಳು ಹನುಮನಿಗೆ ತಿಳಿ ಹೇಳಿದ.

ಭರತನಿಗೆ ಇಬ್ಬರು ಮಕ್ಕಳು. ಅವರಿಬ್ಬರು ಸಿಂಧೂ ನದಿಯ ತಟದಲ್ಲಿ ರಾಜಧಾನಿಗಳನ್ನು ನಿರ್ಮಿಸಿದರು. ಲಕ್ಷ್ಮಣನಿಗೆ ಇಬ್ಬರು ಮಕ್ಕಳು, ಅಂಗದ ಮತ್ತು ಚಂದ್ರಕೇತು. ಮೊದಲನೆಯವನು ಕರುಪದ ಮತ್ತು ಎರಡನೆಯವನು ಮಾಳ್ವದಲ್ಲಿ ಚಂದ್ರಕಾಂತಿ ಎಂಬ ಪಟ್ಟಣದ ನಿರ್ಮಾಣಕ್ಕೆ ಕಾರಣನಾದ. ಶತ್ರುಘ್ನನಿಗೆ ಇಬ್ಬರು ಮಕ್ಕಳು, ಒಬ್ಬ ಸುಬಾಹು ಮತ್ತು ಮತ್ತೊಬ್ಬ ಶತ್ರುಘಾತಿ. ಮೊದಲನೆಯವನು ಮಥುರಾದ ರಾಜನಾದರೆ, ಎರಡನೆಯವನು ವಿದಿಶಾದ ಅರಸನಾದ. ರಾಮನ ಲವ ಮತ್ತು ಕುಶರಲ್ಲಿ ಮೊದಲನೆಯವನು ಔಧ್‌ನ ರಾಜಧಾನಿಯಾದ ಶ್ರಾವಸ್ತಿಯನ್ನು ಆಳಿದರೆ, ಎರಡನೆಯವನು ವಿಂಧ್ಯ ಪರ್ವತದ ಮಡಿಲಲ್ಲಿನ ಕುಶವತಿಯನ್ನು ಆಳಿದ.

ಇವಿಷ್ಟನ್ನು ರಾಮಪ್ರೇಮಿ ಚರಿತ್ರಾಕಾರರು ಹೇಳುತ್ತಾ ಮುಂದುವರಿಯುತ್ತಾರೆ. ರಾಮನು ಹನ್ನೊಂದು ಸಾವಿರ ವರ್ಷಗಳ ಕಾಲ ತನ್ನ ರಾಜ್ಯದಲ್ಲಿ ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ಸಾವಿರಾರು ಯಜ್ಞಗಳನ್ನು ಮಾಡುತ್ತಾ ಆಳಿದ!!!

ಇರಲಿ ಬಿಡಿ. ಸೊನ್ನೆಯನ್ನು ಕಂಡುಹಿಡಿದ ಭಾರತೀಯರು ಎಷ್ಟು ಬೇಕಾದರೂ ಸೊನ್ನೆಗಳನ್ನು ಬಳಸಿಕೊಳ್ಳಬಹುದಾಗಿರುವುದು ಅವರ ಹಕ್ಕು!! ಹಾಗಾಗಿ ಜನಸಂಖ್ಯೆ, ಆಯಸ್ಸು, ಆಳ್ವಿಕೆಯ ಅವಧಿಗಳು, ಶಾಸ್ತ್ರಗಳ ಪುರಾತನ ತತ್ವಗಳು ಬೇಕಾದಷ್ಟು ಸೊನ್ನೆಗಳನ್ನು ಹೊಂದುತ್ತಾ ಹಳತಾಗಿರುತ್ತವೆ ಅಥವಾ ದೀರ್ಘವಾಗಿರುತ್ತವೆ.

ಹಿಂದೂ ಪುರಾಣಗಳಲ್ಲಿ ಹೇಳುವಂತೆ ಮೂವತ್ತಮೂರು ಕೋಟಿ ದೇವತೆಗಳಿದ್ದಾರೆ ಎಂದಾದರೆ, ರಾಮಾಯಣದ ಅರಣ್ಯಕಾಂಡದಲ್ಲಿ ಬರಿ ಮೂವತ್ತಮೂರು ದೇವತೆಗಳು ಎಂದಿದ್ದಾರೆ.

ಏನೇ ಆಗಲಿ ವಿಷ್ಣುವಿನ ಅವತಾರವೇ ಆದ, ಇಡೀ ತ್ರೇತಾಯುಗದ ಯುಗಪುರುಷನಾದ ಶ್ರೀರಾಮಚಂದ್ರದೇವ ಮತ್ತು ಆತನ ತಮ್ಮನಾದವನೂ ಮತ್ತು ಆದಿಶೇಷನ ಅವತಾರವೂ ಆದ ಲಕ್ಷ್ಮಣ ನೀರಿನಲ್ಲಿ ಮುಳುಗಿ, ಶ್ರೀರಾಮನ ಸತಿ ಸೀತಾದೇವಿ ಭೂಮಿಯ ಕಮರಿನಲ್ಲೋ, ಕೊರಕಲಿನಲ್ಲೋ ಬಿದ್ದು ಆತ್ಮಹತ್ಯೆ ಮಾಡಿಕೊಂಡಾಗ ಬರದಂತಹ ಪುಷ್ಪಕವಿಮಾನಗಳು ವೈಷ್ಣವ ಸಂತರ ಸಾವಿನ ಸಮಯಕ್ಕೆ ಬರುತ್ತಿದ್ದವು ಹೇಗೆ?

ಚಟ್ಟ

ಕವಿ ಮತ್ತು ಉಪನ್ಯಾಸಕ ಮಿತ್ರರಾದ ಎಲ್.ಎನ್. ಮುಕುಂದರಾಜ್ ಅವರು ಈ ಬಗ್ಗೆ ಒಂದು ಅರ್ಥಪೂರ್ಣ ಒಳನೋಟವನ್ನು ನೀಡಿದರು. ಪುಷ್ಪಕ ವಿಮಾನವೆಂದರೆ 'ಚಟ್ಟ' ಎಂದು. ಹೆಣವನ್ನು ಒಯ್ಯುವ ಚಟ್ಟ. ಈಗಲೂ ಉತ್ತರಭಾಗದ ಬಹುತೇಕ ಸ್ಥಳಗಳಲ್ಲಿ ಹೆಣವನ್ನು ಒಯ್ಯಲು ವಿಮಾನವೆಂದೇ ಬಳಸುತ್ತಾರೆ. ಹೂಗಳಿಂದ ಅಲಂಕರಿಸಿ ಒಯ್ಯುವ ಚಟ್ಟವಾದ್ದರಿಂದ ಅದು ಪುಷ್ಪಕ ವಿಮಾನ ಎಂದಾಯಿತು.

ಅಂದರೆ, ಸಂತ ತುಕಾರಾಮರನ್ನು ಒಯ್ದದ್ದು ಚಟ್ಟದ ಮೇಲೆ. ಸರಿ, ಒಪ್ಪಿಕೊಂಡೆ, ವಿಶ್ವದಲ್ಲಿಯ ಎಲ್ಲಾ ಜನರು ರೂಪಗಳಿಗೆ, ಅಲಂಕಾರಕ್ಕೆ ಸೋಲುತ್ತಾರೆ ಮತ್ತು ಅದನ್ನೇ ಇಷ್ಟಪಡುತ್ತಾರೆ. ಆದರೆ ತುಕಾರಾಮನ ಅಂತ್ಯ ಅಷ್ಟು ತುರ್ತಾಗಿ ಆಗಿದ್ದಾದರೂ ಏಕೆ?

ಡಿ.ಡಿ.ಕೋಸಂಬಿಯವರು ತಮಗೆ ಸಿಕ್ಕ ದಾಖಲೆಗಳ ಪ್ರಕಾರ ಹೇಳುತ್ತಾ ತಮ್ಮ ಪುರಾಣ ಮತ್ತು ವಾಸ್ತವದಲ್ಲಿ ಉಲ್ಲೇಖಿಸುತ್ತಾರೆ: ತುಕಾರಾಮ ನೀರಿಗೆ ಬಿದ್ದು ಸತ್ತ ಎಂದು.

ಮುಂದಿನ ಪ್ರಶ್ನೆ ಹೀಗೆ ನೀರಿಗೆ ಬಿದ್ದು ಸತ್ತದ್ದು ಆಕಸ್ಮಿಕವೋ, ಆತ್ಮಹತ್ಯೆಯೋ ಅಥವಾ ಹತ್ಯೆಯೋ?

ಸದಾ ಸಾತ್ವಿಕ ಜೀವನ ನಡೆಸುತ್ತಿದ್ದ, ಯಾವ ಅಧಿಕಾರ ಮತ್ತು ಹಣದ ಆಸೆಗೆ ಬಲಿಯಾಗದ, ಶಿವಾಜಿ ಮಹಾರಾಜನಂತಹ ಛತ್ರಪತಿಯೇ ಬಂದು ಆತನಿಗೆ ಶರಣುಹೋಗಿದ್ದು, ಅವನಂತೆಯೇ ಅವನ ಮನೆಯಲ್ಲಿಯೇ ಇರುವಷ್ಟು ಪ್ರೇಮವನ್ನು ಹೊಂದುವಂತಹ ವ್ಯಕ್ತಿತ್ವ ಉಳ್ಳ ತುಕಾರಾಂ ಯಾಕೆ ಸತ್ತ? ಹೇಗೆ ಸತ್ತ? ಅವನನ್ನು ಅಷ್ಟು ತುರ್ತಾಗಿ ವೈಷ್ಣವ ಫ್ಲೈಟ್ ಹತ್ತಿಸಿದವರು ಯಾರು?

ನಾನು ಯಾವುದೋ ಸಾಹಿತ್ಯ ಸಂಬಂಧಿತ ಕೆಲಸದ ಮೇಲೆ ಅಥಣಿ ತಾಲ್ಲೂಕಿನ ತೆಲಸಂಗಕ್ಕೆ ಹೋಗಿದ್ದೆ. ಅಲ್ಲಿ ಒಬ್ಬ ಹಿರಿಯರು ಒಂದು ವಿಚಾರವನ್ನು ತಿಳಿಸಿದರು.

"ತುಕಾರಾಮನನ್ನು ಅನ್‌ಟೈಮ್ಲೀ ಫ್ಲೈಟ್ ಹತ್ತಿಸಿದ್ದು ಒಬ್ಬ ಉಚ್ಚವರ್ಣದ ವೈಷ್ಣವ ಸಂತನೇ" ಎಂದು. ಶಿವಾಜಿ ಮಹಾರಾಜನಿಗೆ ತನ್ನ ಆದೇಶ ಮತ್ತು ಅನುಗ್ರಹಗಳನ್ನು ನೀಡುತ್ತಿದ್ದ ಆ ಉಚ್ಚವರ್ಣದ ಸಂತ ಮಹಾರಾಜ್‌ಗೆ ಉಚ್ಚವರ್ಣದವನಲ್ಲದ ತುಕಾರಾಮನಿಗೆ ತನ್ನ ರಾಜ ಶರಣು ಹೋಗುವುದಾಗಲಿ, ಪ್ರಭಾವಕ್ಕೊಳಗಾಗುವುದಾಗಲಿ ಇಷ್ಟವಾಗಲಿಲ್ಲ, ಹಾಗಾಗಿ ಆತ ತುಕಾರಾಮನನ್ನು ತಕ್ಷಣ ವೈಕುಂಠಕ್ಕೆ ಕೊಂಡೊಯ್ಯಲು ಬೇಕಾದ ವ್ಯವಸ್ಥೆ ಮಾಡಿ ಮುಗಿಸಿದ.

ಜಾತೀಯತೆಯ ವಿರುದ್ಧವಾಗಿ ಹೋರಾಡುತ್ತಿದ್ದ ತುಕಾರಾಮ ರಚಿಸಿದ್ದ ಅಭಂಗಗಳನ್ನು ಸನಾತನಿಗಳು ಇಂದ್ರಾಣಿ ನದಿಯಲ್ಲಿ ಮುಳುಗಿಸಲು ಒತ್ತಾಯಿಸಿದ್ದರು. ನಂತರ ತುಕಾರಾಮ ತನ್ನ ಜಾತ್ಯತೀತವಾದ ನಿಲುವಿನಿಂದ ಶಿವಾಜಿ ಮಹಾರಾಜನನ್ನೂ ತನ್ನ ವಿಚಾರವಂತ ಮಾಡಿಕೊಂಡು ಅವನನ್ನೂ ವರ್ಣವ್ಯವಸ್ಥೆಯ ವಿರುದ್ಧವಾದ ನಿಲುವಿಗೆ ತರುವುದನ್ನು ಸಂಪ್ರದಾಯವಾದಿಗಳು ಹೇಗೆ ಸಹಿಸಿಯಾರು?

ಪಾಪ ತುಕಾರಾಂ "ಆದಿ ಬೀಜ ಒಂದೇನೇ. ಬೀಜ ಸಸಿಯಾಯ್ತು ಬೆಳೆದು ತಾನೇ" ಎಂದು ಅಸ್ತಿತ್ವದಲ್ಲಿ ದೈವವನ್ನು ಹುಡುಕುತ್ತಾ ತನ್ನ ಸಮಾಜವಾದ ಸಾತ್ವಿಕತೆಯನ್ನು ಪ್ರಾಣಿ-ಪಕ್ಷಿಗಳವರೆಗೂ ವಿಸ್ತರಿಸುತ್ತಾ ಬದುಕಿದ್ದವನು ಹೇಳಿದ್ದು "ಹೊರಟೆ ಸೇರೆ ನಮ್ಮ ಊರ, ನಿಮಗೆ ನನ್ನ ನಮಸ್ಕಾರ." ■

'ನಾಯಿ ಬಾಲ ಎಂದಿಗೂ ಡೊಂಕೇ'

ಮೊನ್ನೆ ಆಗಸ್ಟ್ 25ರಂದು ನಡೆಯಬೇಕಿದ್ದ ಭಾರತ, ಪಾಕ್ ವಿದೇಶಾಂಗ ಕಾರ್ಯದರ್ಶಿಗಳ ಸಭೆ ಹಠಾತ್ತಾಗಿ ರದ್ದುಗೊಂಡಿದೆ. ಪರಿಣಾಮವಾಗಿ ಮುಂದಿನ ತಿಂಗಳು ನ್ಯೂಯಾರ್ಕ್‌ನಲ್ಲಿ ಆಯೋಜಿಸಲಾದ ಉಭಯ ದೇಶಗಳ ಪ್ರಧಾನಿಗಳ ಸಭೆಯೂ ಹೆಚ್ಚುಕಮ್ಮಿ ರದ್ದಾದಂತೆಯೇ. ಕಾಶ್ಮೀರಿ ಪ್ರತ್ಯೇಕತಾವಾದಿಗಳು ಪಾಕ್ ರಾಯಭಾರಿಯನ್ನು ಭೇಟಿ ಮಾಡಿದರೆಂಬ ಕುಂಟುನೆಪ ಮುಂದಿಟ್ಟುಕೊಂಡು ವಿದೇಶಾಂಗ ಕಾರ್ಯದರ್ಶಿಗಳ ಸಭೆಯನ್ನು ರದ್ದುಗೊಳಿಸಿರುವ ಭಾರತದ ಈ ಕ್ರಮ ತೀರ ಅಪ್ರಬುದ್ಧವಷ್ಟೇ ಅಲ್ಲ, ಬಾಲಿಶವೂ ಆಗಿದೆ. ಯಾಕೆಂದರೆ ಭಾರತ, ಪಾಕ್ ಮಾತುಕತೆಗಳ ಸಂದರ್ಭದಲ್ಲಿ ಹುರಿಯತ್ ಕಾನ್ಫರೆನ್ಸ್ ನಾಯಕರು ಪಾಕ್ ಮುಖ್ಯಸ್ಥರನ್ನು ಭೇಟಿಯಾಗುವುದು ಹೊಸ ಉಪಕ್ರಮವೇನೂ ಅಲ್ಲ, ಇದನ್ನು ಅವರು ಕಳೆದ ಸುಮಾರು ಒಂದು ದಶಕದಿಂದಲೂ ಮಾಡುತ್ತಲೇ ಬಂದಿದ್ದಾರೆ. ಅಂದಿನ ಸರ್ಕಾರಗಳು ಕೂಡ ಇದನ್ನೊಂದು ಭಾರಿ ಗಂಭೀರ ವಿಚಾರವೆಂದು ಪರಿಗಣಿಸದೆ ಮಾತುಕತೆ ಪ್ರಕ್ರಿಯೆಗಳನ್ನು ಮುಂದುವರಿಸಿದ್ದವು. ಜ|| ಪರ್ವೇಜ್ ಮುಶರ್ರಫ್. ಭಾರತಕ್ಕೆ ಬಂದಿದ್ದಾಗಲೂ ಪ್ರತ್ಯೇಕತಾವಾದಿಗಳ ಜತೆ ಮಾತುಕತೆ ನಡೆಸಿದ್ದರು.




ಮಾಜಿ ಪ್ರಧಾನಿ ವಾಜಪೇಯಿ ಮತ್ತು ಉಪಪ್ರಧಾನಿ ಅಡ್ವಾನಿಯವರೂ ಪ್ರತ್ಯೇಕತಾವಾದಿಗಳನ್ನು ಭೇಟಿಯಾಗಿದ್ದಾರೆ. ಪ್ರತ್ಯೇಕತಾವಾದಿಗಳ ಪ್ರಭಾವ ಈಗ ಮೊದಲಿಗಿಂತ ತುಂಬಾ ಕುಗ್ಗಿರುವುದರಿಂದ ಪಾಕ್ ರಾಯಭಾರಿ ಜೊತೆಗಿನ ಅವರ ಭೇಟಿಗೆ ವಿಶೇಷ ಮಹತ್ವ ಕಲ್ಪಿಸುವ ಆವಶ್ಯಕತೆ ಇಲ್ಲವೆಂಬುದು ಅನೇಕ ರಾಜಕೀಯ ವೀಕ್ಷಕರ ಅಭಿಪ್ರಾಯವಾಗಿದೆ. ಹಾಗಾದರೆ ಮಾತುಕತೆಗಳನ್ನೇಕೆ ಏಕಾಏಕಿಯಾಗಿ ರದ್ದುಗೊಳಿಸಲಾಯಿತೆಂಬ ಕುತೂಹಲ ಸಹಜ.

ಮೊದಲು ಭಾರತ, ಪಾಕ್ ಸಂಬಂಧಗಳು ಉತ್ತಮಗೊಳ್ಳಲಿವೆ ಎಂಬ ಭ್ರಮೆಗೆ ಕಾರಣವಾದ ಘಟನಾವಳಿಗಳನ್ನು ನೋಡೋಣ. ಮೊದಲನೆಯದಾಗಿ ಮೋದಿ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನೊಮ್ಮೆ ನೆನಪಿಸಿಕೊಳ್ಳಿ. ಅಂದಿನ ಅದ್ದೂರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯಾತಿಗಣ್ಯರ ಪೈಕಿ ಪಾಕ್ ಪ್ರಧಾನಿ ನವಾಜ್ ಷರೀಫ್ ಅವರನ್ನು ಗಮನಿಸದವರು ಇಲ್ಲವೇ ಇಲ್ಲ ಎನ್ನಬಹುದು. ಏಕೆಂದರೆ ಅದಕ್ಕೆ ಅಷ್ಟೊಂದು ಪ್ರಚಾರ ನೀಡಲಾಗಿತ್ತು. ಇಷ್ಟು ಮಾತ್ರವಲ್ಲ ಮರುದಿನ ನವಾಜ್ ಷರೀಫ್ ಮತ್ತು ನರೇಂದ್ರ ಮೋದಿ ನಡುವೆ ಒಂದಷ್ಟು ಉಭಯ ಕುಶಲೋಪರಿ ಮಾತುಕತೆಗಳೂ ನಡೆದಿವೆ. ತದನಂತರ ಪರಸ್ಪರರ ನಡುವೆ ಸೀರೆ, ಶಾಲುಗಳ ವಿನಿಮಯವೂ ಆಗಿದೆ. ಭಾರತದ ಬಹುತೇಕ ಮಾಧ್ಯಮಗಳು ಇದನ್ನೆಲ್ಲಾ ಭಾರಿ ವೈಭವೀಕರಿಸಿ ಪುಟಗಟ್ಟಲೆ ಬರೆದುವಲ್ಲದೆ ಚಾನಲುಗಳಲ್ಲಿ ಗಂಟೆಗಟ್ಟಲೆ ಪ್ರಸಾರವನ್ನೂ ಮಾಡಿದವು. ಅದೇರೀತಿ ಭಾರತ, ಪಾಕ್ ನಡುವೆ ವಿದ್ಯುತ್ತಿನ ರಫ್ತು, ಗ್ಯಾಸ್ ಮತ್ತು ಇಂಧನ ಕೊಳವೆಗಳ ನಿರ್ಮಾಣ, ವಾಣಿಜ್ಯ ರಿಯಾಯಿತಿಗಳು ಮುಂತಾದ ವಿಚಾರಗಳ ಕುರಿತ ಚರ್ಚೆಗೋಸ್ಕರ ನೀಲಿನಕಾಶೆಯೊಂದು ಸಿದ್ಧವಾಗುತ್ತಾ ಇತ್ತೆನ್ನಲಾಗಿದೆ ಮತ್ತೂ ಒಂದು ಅತ್ಯಂತ ಕುತೂಹಲಕಾರಿ ವಿದ್ಯಮಾನ ನೂತನ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತಲೂ ಸುಮಾರು ಮೂರು ತಿಂಗಳ ಹಿಂದಿನದು. ಮೂಲಗಳ ಪ್ರಕಾರ ಇದೇ ವರ್ಷದ ಮಾರ್ಚ್ ತಿಂಗಳಲ್ಲಿ ಅನಿವಾಸಿ ಭಾರತೀಯ ಮಹನೀಯರೊಬ್ಬರು ಆರೆಸ್ಸೆಸ್‌ನ ಪ್ರತಿನಿಧಿಯಾಗಿ ಪಾಕಿಸ್ತಾನಕ್ಕೆ ತೆರಳಿದ್ದರಂತೆ! ಪಾಕ್ ಪ್ರಧಾನಿಯ ಪ್ರಮುಖ ಸಲಹೆಗಾರ ತಾರಿಕ್ ಫತೆಮಿ ಮತ್ತಿತರ ಅಧಿಕಾರಿಗಳನ್ನು ಭೆಟ್ಟಿಯಾದ ಸದರಿ ಮಹನೀಯರು ಭಾರತದ ಭಾವಿ ಪ್ರಧಾನಿ ಮೋದಿಯ ಸಂದೇಶವೊಂದನ್ನು ಪಾಕ್ ಪ್ರಧಾನಿಗೆ ರವಾನಿಸಿದ್ದಾರೆ: 'ಬಿಜೆಪಿ ಚುನಾವಣೆ ಗೆದ್ದು ಅಧಿಕಾರಕ್ಕೆ ಬಂದರೆ ನೂತನ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಇತರ ಸಾರ್ಕ್ ನಾಯಕರ ಜೊತೆ ತಾವೂ ಬರಬೇಕು. ಹೊಸ ಸರ್ಕಾರ ಉಭಯ ದೇಶಗಳ ನಡುವಿನ ಮಾತುಕತೆಗಳನ್ನು ಮುಂದುವರಿಸಲಿದೆ. ವಾಣಿಜ್ಯ ಸಂಬಂಧಗಳನ್ನು ಇನ್ನಷ್ಟು ವಿಸ್ತರಿಸುವ ಬಗ್ಗೆ ಚರ್ಚಿಸಲಿದೆ. ಆದರೆ ಎಲ್ಲಾದರೂ ಮುಂಬೈ ದಾಳಿಯಂತಹದ್ದು ಪುನರಾವರ್ತಿಸಿದರೆ ಭಾರತ ಅನಿವಾರ್ಯವಾಗಿ ಪಾಕಿಸ್ತಾನದ ನಿಯಂತ್ರಣದಲ್ಲಿರುವ ಭೂಭಾಗವೊಂದರ ಮೇಲೆ ದಾಳಿ ನಡೆಸಬೇಕಾಗುತ್ತದೆ'!!

ಇಷ್ಟೆಲ್ಲ ಧನಾತ್ಮಕ ಬೆಳವಣಿಗೆಗಳ ಮಧ್ಯೆಯೂ ಒಂದು ತೀರ ಕ್ಷುಲ್ಲಕ ಕಾರಣಕ್ಕಾಗಿ ಏಕಾಏಕಿಯಾಗಿ ಮಾತುಕತೆಗಳು ರದ್ದಾಗಿರುವುದನ್ನು ಕಂಡಾಗ ಅನೇಕರಿಗೆ ಅಚ್ಚರಿ ಎನಿಸಬಹುದು. ಆದರೆ ನಿಜಸ್ಥಿತಿಯ ಅರಿವು ಆಗಬೇಕಿದ್ದರೆ ಭ್ರಮೆಯ ಕನ್ನಡಕವನ್ನು ಸ್ವಲ್ಪ ಕಳಚಿಟ್ಟು ನೋಡಬೇಕಾಗುತ್ತದೆ. ಆಗ ಇದೆಲ್ಲವೂ ಬರೀ ಬೂಟಾಟಿಕೆ, ಕೇವಲ ಪ್ರಚಾರಕ್ಕೋಸ್ಕರ ಮಾಡಿರುವ ಗಿಮಿಕ್ ಮತ್ತು ಒಂದು ಪೂರ್ವಯೋಜಿತ ಪ್ರಹಸನವೆಂಬುದು ಸ್ಪಷ್ಟವಾಗುತ್ತದೆ. ವಾಸ್ತವವೇನೆಂದರೆ ನೂತನ ಸರ್ಕಾರದ ನಡೆಯೆಲ್ಲವೂ ಬರೀ ಮಾತು, ಭಾಷಣ, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಅಬ್ಬರದ ಪ್ರಚಾರಕ್ಕಷ್ಟೆ ಸೀಮಿತವಾಗಿದೆ. 'ಕಳಪೆ ಸರಕಿಗೆ ಆಕರ್ಷಕ ಪ್ಯಾಕೇಜಿಂಗ್' ಎಂಬ ಇವತ್ತಿನ ಕಾರ್ಪೊರೇಟ್ ಮಾರ್ಕೆಟಿಂಗ್ ತಂತ್ರದ ಅನುಕರಣೆ ಇದು. 'ತೋಟ

ಬೂಸಿ ಬಸ್ಯ. ಮೋದಿ

36



ಶೃಂಗಾರ, ಒಳಗೆ ಗೋಳಿ ಸೊಪ್ಪು' ಎಂಬ
ಗಾದೆಯಂತೆ. ಭಾರತ, ಪಾಕ್ ಸಂಬಂಧ ಕುರಿತ ನಿಲು
ಇದು ಅನ್ವಯಿಸುತ್ತದೆ. ಪ್ಯಾಕೇಜಿಂಗ್‌ನ ಒಳಗೆ
ವಿರುದ್ಧದ ದ್ವೇಷ ಹಾಗೆಯೇ ಇದೆ. ಅದೆಂದೂ ಬದಲ
ಏಕೆಂದರೆ ಸಂಘ ಪರಿವಾರಕ್ಕೆ ಜನರ ದೇಶಭಕ್ತಿ
ಬಡಿದೆಬ್ಬಿಸಲು ಸದಾ ಆಂತರಿಕ ಮತ್ತು ಬಾಹ್ಯ ಶ
ಅಗತ್ಯವಿದೆ. ಅದರ ಅಸ್ತಿತ್ವ ಇರುವುದೇ ದೇಶಭ
ಬಡಿದೆಬ್ಬಿಸುವಿಕೆ, ಜನಾಂಗ ಶ್ರೇಷ್ಠತೆಯ ಗೀಳು,
ಇತಿಹಾಸದ ವೈಭವೀಕರಣ, ಚಾರಿತ್ರಿಕ 'ಅನ್ಯಾ
ವಿರುದ್ಧ ಸೇಡು ತೀರಿಸುವಿಕೆ ಮತ್ತು ಏಕವ
ಆರಾಧನೆಯಂತಹ ಅಸಂಬದ್ಧ ಆದರೆ ಭಾರಿ ಅಪಾಯ
ಆಚರಣೆಗಳಲ್ಲಿ, ಇದಕ್ಕೆ ಧರ್ಮವನ್ನು ಬೆರೆಸಿ, ಆ
ರೀತಿಯಲ್ಲಿ ಬಿಂಬಿಸಿ, ಕರ್ಕಶ ಗಂಟಲಿನ ಮ
ಸಮರ್ಥಿಸುವಲ್ಲಿ, ಅಂತಲೇ ಭಾರಿ ಪ್ರಚಾರದೊಂದಿಗೆ
ಪ್ರಧಾನಿಯನ್ನು ಭಾರತಕ್ಕೆ ಆಹ್ವಾನಿಸಿದುದನ್ನು, ಉ
ದೇಶಗಳ ನಡುವೆ ಸಂಬಂಧ ಕುದುರುತ್ತಿರು
ಬಿಂಬಿಸಿದುದನ್ನು, ಈಗ ಇದ್ದಕ್ಕಿದ್ದಂತೆ ಕುಂಟು ನ
ಮಾತುಕತೆ ರದ್ದುಗೊಳಿಸಿದುದನ್ನೆಲ್ಲ ಈ ಹಿನ್ನೆಲೆ
ನೋಡಬೇಕಾಗುತ್ತದೆ.

ಯಾರದ್ದೋ ಸ್ವಾರ್ಥಕ್ಕೆ ಬಂಟರ ಬಲಿ?


ಮೊನ್ನೆ ರವಿವಾರದಂದು ಬ್ರಹ್ಮಾವರದ ಧರ್ಮಾವರ ಸಭಾಂಗಣದಲ್ಲಿ ನಡೆಯುತ್ತಿದ್ದ ಸಭೆಯೊಂದಕ್ಕೆ ಏಕಾಏಕಿ ನುಗ್ಗಿದ ಗುಂಪೊಂದು ಗಲಾಟೆ ಎಬ್ಬಿಸಿತ್ತು. ಆ ಗುಂಪನ್ನು ಹೊರಹಾಕಲು ಪೊಲೀಸರು ಮಧ್ಯ ಪ್ರವೇಶಿಸಬೇಕಾಗಿ ಬಂತು. ಅಲ್ಲಿ ಅವತ್ತು ನಡೆಯುತ್ತಿದ್ದ ಸಭೆ 'ಸ್ವಾಭಿಮಾನಿ ಬಂಟರ ಆತ್ಮ ಜಾಗೃತಿ ಸಮಾವೇಶ'. ಗಲಾಟೆ ಎಬ್ಬಿಸಿದವರು ವಿದ್ಯಾ ವಾಚಸ್ಪತಿ ಶ್ರೀ ಸಂತೋಷ್ ಗುರೂಜಿಯವರ ಬೆಂಬಲಿಗರು.

ಬಂಟ ಜನಾಂಗ ಕರಾವಳಿಯ ಮೂಲ ಸಮುದಾಯ-ಸಂಪ್ರದಾಯಗಳ ಪ್ರಮುಖ ಆಧಾರಸ್ತಂಭಗಳಲ್ಲೊಂದು. ಆದರೆ ಇತ್ತೀಚೆಗಿನ ದಿನಗಳಲ್ಲಿ ಉದ್ದೇಶಪೂರ್ವಕವಾಗಿ ಯಾವುದೋ ಕಾಣದ ಕೈ ಅದನ್ನು ದಿಕ್ಕು ತಪ್ಪಿಸ ಹೊರಟಿದೆ ಹಾಗು ಈ ದಿಕ್ಕು ತಪ್ಪಿಸುವಲ್ಲಿ ಕೆಲ ಮಟ್ಟಿಗಿನ ಯಶಸ್ಸನ್ನೂ ಕಂಡಿದೆ. ಈಗಾಗಲೇ ಕರಾವಳಿ ಕರ್ನಾಟಕದಲ್ಲಿ ಕೇಮಾರು ಗುರುಪುರ ಹಾಗು ಯಡಿಯೂರು ಸ್ವಾಮಿಗಳೆಂದು ಹಲವಾರು ಬಂಟ ಸ್ವಾಮಿಗಳಿದ್ದರೂ ಅವರ್‍ಯಾರೂ ಕೇವಲ ಬಂಟ ಸಮುದಾಯಕ್ಕೆಂದೇ ಸೀಮಿತಗೊಂಡಿಲ್ಲ. ಆದರೆ ಈಗ ಬಂಟ ಸಮುದಾಯಕ್ಕೆಂದೇ ಒಬ್ಬ ಸ್ವಾಮಿ ಧರೆಗಿಳಿದಿದ್ದಾರೆ ಅಥವಾ ಧರೆಗಿಳಿಸಲ್ಪಟ್ಟಿದ್ದಾರೆ. ಅವರೇ ಶ್ರೀ ವಿದ್ಯಾ ವಾಚಸ್ಪತಿ ಸಂತೋಷ ಗುರೂಜಿ ಸ್ವಾಮಿಗಳು. ಶಿವಮೊಗ್ಗ ಮೂಲದ ಬೆಜ್ಜವಳ್ಳಿಯ ಈ ಸ್ವಾಮೀಜಿ ಇದೀಗ ಬಂಟರ ಮಹಾ ಸಂಸ್ಥಾನವನ್ನು ಬಾರ್ಕೂರಿನಲ್ಲಿ ಕಟ್ಟ ಹೊರಟಿದ್ದಾರೆ. ಆದರೆ ಈ ಪ್ರಕ್ರಿಯೆಗೆ ಭಾರೀ ವಿರೋಧವೇ ಎದುರಾಗಿದೆ.



ಬಂಟರು ಮೂಲತಃ ಸ್ವಾಭಿಮಾನಿಗಳು, ಎಲ್ಲಾ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡು ಹೆಸರು ಮಾಡಿದಂತವರು. ಅದಕ್ಕೂ ಮುಖ್ಯವಾಗಿ ಬಾಂಬೆಯಿಂದ ದುಬೈವರೆಗೆ ಹೋಟೆಲ್ ಉದ್ಯಮವೋ ಇನ್ನೊಂದೋ ಮಾಡಿ ಬಹಳಷ್ಟು ಕಾಸು ಮಾಡಿಕೊಂಡಂತವರು. ಈ ಕಾಸು ಪ್ರಭಾವಗಳ ಮೇಲೇ ಕೆಲವರಿಗೆ ಕಣ್ಣು, ಯಾವ್ಯಾವುದೋ ಜೀರ್ಣೋದ್ಧಾರ ಕಮಿಟಿಯಲ್ಲಿ ಇವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಸಾಕು ದುಡ್ಡು ಹೇಗೋ ರಾಶಿರಾಶಿಯಾಗಿ ಬಂದು ಬೀಳುತ್ತದೆ ಎಂಬ ನಂಬಿಕೆ ಹಲವರದು. ಅವತ್ತು ಸೌಹಾರ್ದಕ್ಕೆ ಹೆಸರಾದ ಕರಾವಳಿ ಪರಿಸರ ಇಂದು ಮತಾಂಧ ಶಕ್ತಿಗಳ ಕಾರ್ಯಸ್ಥಾನವಾಗಿ ಬದಲಾಗಿದೆ. ವಿಚಿತ್ರವೆಂದರೆ ಅದರಲ್ಲಿ ತೊಡಗಿಸಿಕೊಂಡವರು ಇಲ್ಲಿನ ಬಂಟ ಬಿಲ್ಲವ ಎಂಬ ಅಬ್ರಾಹ್ಮಣ ವರ್ಗವೇ ಹೆಚ್ಚು, ಅವರೆಲ್ಲ ಸ್ವಯಂಪ್ರೇರಿತರಾಗಿ ತೊಡಗಿಸಿಕೊಂಡಿದ್ದಾರೆ ಎನ್ನುವುದಕ್ಕಿಂತ ತೊಡಗಿಸಿಕೊಳ್ಳುವಂತೆ ಮಾಡಲಾಗಿದೆ ಎನ್ನುವುದೇ ಹೆಚ್ಚು ಸೂಕ್ತ. ಪೇಜಾವರ ಸ್ವಾಮಿಗಳು ಹಿಂದೆ ಎಲ್ಲಾ ಜಾತಿಗಳಿಗೂ ಪೀಠ ಮಠಗಳು ಬೇಕು ಎನ್ನುವುದನ್ನು ಬೆಂಬಲಿಸಿದ್ದರು. ಯಾವುದೇ ಹಿಂದೂ ಸಮಾವೇಶಗಳಲ್ಲಿ ಭಾಗವಹಿಸುವ ಎಲ್ಲಾ ಜಾತಿಯ ಸ್ವಾಮಿಗಳನ್ನು ಒಂದೇ ರೀತಿಯಲ್ಲಿ ನೋಡಲಾಗುತ್ತಿಲ್ಲ ಎನ್ನುವುದು ವಾಸ್ತವ. ಈ ಹಿಂದೆ ಮಂಗಳೂರಿನಲ್ಲಿ ನಡೆದ ಇಂತಹ ಸಮಾರಂಭದಲ್ಲಿ ಜಾತಿ ನೋಡಿ ಮಣೆ ಹಾಕಿದ್ದನ್ನು ನೋಡಿ ಕೊಲ್ಯ ಮಠದ ಸ್ವಾಮಿ ಪ್ರತಿಭಟಿಸಿದ್ದು ಸುದ್ದಿಯಾಗಿತ್ತು, ಅಂದರೆ ಯಾವ ಮಠದ ಸ್ವಾಮಿಗಳು ಬಂದರೂ ಅವರ ಜುಟ್ಟು ಮಾತ್ರ ಬ್ರಾಹ್ಮಣ ಸ್ವಾಮಿಗಳ ಕೈಯಲ್ಲೇ ಇರಲ್ಪಡುತ್ತದೆ ಎನ್ನುವುದು ಒಳಗಿರುವ ಗುಟ್ಟು. ಇಲ್ಲಿ ಜಾತಿ ಜನಗಳನ್ನು ತಮ್ಮೆಡೆ ಎಳೆದುಕೊಳ್ಳಲು ಪ್ರಯಾಸ ಪಡುವುದಕ್ಕಿಂತ ಆ ಜಾತಿಯ ಸ್ವಾಮಿಯನ್ನು ಸೆಳೆದುಕೊಂಡರೆ ಸಾರಾಸಗಟಾಗಿ ಆ ಜಾತಿಯನ್ನು ಸುಲಭದಲ್ಲಿ ತಮ್ಮ ಮಾತು ಕೇಳುವಂತೆ ಮಾಡುವ ಹುನ್ನಾರ ಇದರಲ್ಲಿದೆಯೇ ವಿನಃ ಕೆಳಜಾತಿಗಳ ಮೇಲಿನ ಪ್ರೀತಿಯಲ್ಲ.

ಟಿವಿಗಳಲ್ಲಿ ಆಯುರ್ವೇದ ಪಂಡಿತನೆಂದು ತೋರಿಸಿಕೊಳ್ಳುತ್ತಾ ಪ್ರಸಿದ್ಧಿ ಪಡೆದ ಸಂತೋಷ್ ಗುರೂಜಿ ನಂತರ ಸ್ವಾಮೀಜಿಗಳಾಗಿ ಬದಲಾದವರು. ಇತ್ತೀಚೆಗೆ ವನಿತಾ ಶೆಟ್ಟಿ ಎನ್ನುವವರನ್ನು ಉಡುಪಿ ದೇವಸ್ಥಾನದಲ್ಲಿ ಊಟದ ಮಧ್ಯೆ ಎಬ್ಬಿಸಿ ರಾದ್ಧಾಂತವಾಗಿತ್ತು, ಇದು ಬಲಾಢ್ಯ ಬಂಟರ ಕಣ್ಣು ಕೆಂಪಗಾಗಿಸಿ ಅತಿರೇಕಕ್ಕೆ ಹೋಗುವ ಲಕ್ಷಣಗಳು ಗೋಚರಿಸಿದಾಗ ಅದರ ಶಮನಕ್ಕೆ ಮಾಧ್ವ ಸ್ವಾಮಿಗಳಿಗೆ ತಕ್ಷಣ ನೆನಪಾದದ್ದು ಇದೇ ಸಂತೋಷ ಗುರೂಜಿ. ಯಾಕೆಂದರೆ ಇವರು ಬಂಟ ಜನಾಂಗದ ಸ್ವಾಮಿಯೇ ಆಗಿದ್ದರು. (ಎಡಿಯೂರು ಸ್ವಾಮಿಯಂತವರೂ ಜಿಲ್ಲೆಯಲ್ಲೇ ಇದ್ದರೂ ಕೂಡ ಅವರಿಗೂ ಈ ವೈದಿಕರು ಹಿಂದೆ ಇದೇ ರೀತಿ ಜಾತಿ ಕಾರಣಕ್ಕೆ ಅವಮಾನಿಸಿದ್ದರು) ಈ ಗುರೂಜಿಯ ಮಧ್ಯ ಪ್ರವೇಶದಲ್ಲಲ್ಲದಿದ್ದರೂ ಬಂಟರ ದಾರಾಳತನದಿಂದ ಆ ಸಂಗತಿ ಅಂತಹ ವಿಕೋಪಕ್ಕೇನೂ ಹೋಗಿರಲಿಲ್ಲ, ಆದರೆ ತಾನೊಬ್ಬ ಪ್ರಭಾವೀ ಎನ್ನುವ ಹುಸಿ ನಂಬಿಕೆ ಬರಲು ಬಹುಶಃ ಈ ಘಟನೆಯೇ ಗುರೂಜಿಗೆ ಕಾರಣವಾಗಿರಬೇಕು. ಅದೇ "ಮಹಾನ್" ಎನ್ನುವ ಹಿನ್ನೆಲೆಯಲ್ಲಿ ಹಾಗು ಕೆಲ ವೈದಿಕ ಸ್ವಾಮಿಗಳ ಪರೋಕ್ಷ ಬೆಂಬಲದೊಂದಿಗೆ ಅವರೀಗ ಫೀಲ್ಡಿಗಿಳಿದಿದ್ದಾರೆ. ಇದನ್ನೆಲ್ಲ ಅರಿತ ಬಂಟರು ಅವರ ಹಾಗು ಬಂಟರನ್ನು ದಾಳವನ್ನಾಗಿಸಿಕೊಳ್ಳುವ ವೈದಿಕರ ಹುನ್ನಾರದ ವಿರುದ್ಧ ಸೆಟೆದು ನಿಂತಿದ್ದಾರೆ. ಕೆಲವೇ ಕೆಲವು ಹಿಂಬಾಲಕರೊಂದಿಗೆ ಸಂತೋಷ್ ಗುರೂಜಿ ಸಭೆ ನಡೆಸುತ್ತಿದ್ದಾರೆ ಅಲ್ಲಿ ಅವರನ್ನು 'ಶ್ರೀ ಶ್ರೀ ವಿದ್ಯಾ ವಾಚಸ್ಪತಿ' 'ಬಾರ್ಕೂರು ಮಹಾ ಸಂಸ್ಥಾನ', 'ಭಾರ್ಗವ ಪೀಠ' ಎಂದು ಗುರುತಿಸಿಕೊಳ್ಳಲಾಗುತ್ತಿದೆ. ಬಾರ್ಕೂರು ಸಂಸ್ಥಾನ ಇರಲಿ. ಆದರೆ ಪೀಠಕ್ಕೂ ತುಳುನಾಡಿಗೆ ಸಂಬಂಧವೇ ಇಲ್ಲದ ಕ್ಷತ್ರಿಯ ದ್ವೇಷಿ ಭಾರ್ಗವ(ಪರಶುರಾಮ)ನ ಹೆಸರು ಯಾಕೋ? ಅಂದರೆ ಈ ನನ್ನ ಪೀಠ ಹಾಗು ಸಂಸ್ಥಾನ ಸಂಪೂರ್ಣವಾಗಿ ವೈದಿಕರ ಅಡಿಯಾಳು ಎಂಬುದನ್ನೇ ಇದು ಸೂಚ್ಯವಾಗಿ



ತೋರಿಸುತ್ತಿದೆಯಲ್ಲವೇ? ಅದು ಹೌದೂ ಕೂಡ.

-ಆರ್‌ಎಸ್‌ಪಿ,

ವಚನಗಳಲ್ಲಿ ಸಂಸ್ಕೃತ ಸೇರ್ಪಡೆ ಹಾಗೂ ವೀರಶೈವ ಪದದ ಬಳ

ವಚನಗಳ ಕಲಬೆರಕೆ ಎಂದಿನಿಂದ ಆಗಿದೆ
ಸಂಶೋಧಿಸಲು ಸರ್ಕಾರ ಸಮಿತಿಯೊಂದನ್ನು ರಚಿಸಬ
ಸಮಗ್ರ ವಚನಗಳಲ್ಲಿ ಕೆಲ ಸಂಸ್ಕೃತ ಪದಗಳು ಹ
ಅನಗತ್ಯವಾಗಿ ವೀರಶೈವ ಪದ ಬಳಕೆಯಾಗಿದೆ. ಇದ
ಜನರಲ್ಲಿ ಗೊಂದಲಗಳು ಸಾಮಾನ್ಯವಾಗಿದೆ.
ಯಾರೊಬ್ಬರ ಮೇಲೆ ಆಪಾದನೆ ಮಾಡದೇ ಎ
ಕೂಡಿಸಿಕೊಂಡು, ಕನ್ನಡಿಗರು ವಚನಾಸಕ್ತರು ಸಂ
ಮಂಡಳಿಯಲ್ಲಿ ವಿನಂತಿಸಿಕೊಂಡು ಶರಣರ ವ
ವಚನಗಳನ್ನು ಸಂಶೋಧಿಸಿ ಪರಿಷ್ಕರಿಸಿ ಪ್ರಕಟಿಸಲು ಸ
ಒತ್ತಾಯಿಸಬೇಕು.

-ಡಾ. ಶಶಿಕಾಂತ ಪಟ್ಟಣ. ಪು


ಪೊರೆ ಕಳಚುತ್ತಿರುವ 'ಪತ್ರಿಕೆ'

ಇತ್ತೀಚೆಗೆ ನನ್ನ ನೆಚ್ಚಿನ ಗೌರಿ ಲಂಕೇಶ್ ವೈ
ಯಿಂದ ನಳನಳಿಸುತ್ತಿದೆ.

ಬಸವಾಭಿಮಾನಿಗಳೂ, ವಿದ್ವಾಂಸರೂ ತಲೆದೂಗ
ರಂಜಾನ್ ದರ್ಗಾರವರು ಶರಣ ಸಾಹಿತ್ಯವನ್ನು ವಿಶ್ಲೇ
ತ್ತಿದ್ದಾರೆ. ಡಾ. ಚನ್ನೇಶರ ವೈಜ್ಞಾನಿಕ ಲೇಖನಗಳ
ಪತ್ರಿಕೆಯ ಕಿರೀಟಕ್ಕೆ ಎಳೆಯ ಗರಿಯಂತಿವೆ. ಅಂದ
ಈ ಅಂಕಣವನ್ನು ಪ್ರತಿವಾರವೂ ಪ್ರಕಟಿಸಿದರೆ ತು
ಚೆನ್ನಾಗಿರುತ್ತದೆ.

ಯೋಗೇಶ್ ಮಾಸ್ಟರ್‌ರ 'ಪುರಾಣದ ಹೂರಣ'
ರೀತಿಯದ್ದಾಗಿದೆ. ಶಿವಸುಂದರ್ ಅವರ ಕಾವ್ಯ
ವಾಕ್ಯಗಳನ್ನು ಓದುವುದು ಉಲ್ಲಾಸಮಯವಾಗಿತ್ತು.
ಮತ್ತು ಶಿವಸುಂದರ್ ಅವರು alternate
ಬರೆಯಬಾರದೇಕೆ? ಚಂದ್ರೇಗೌಡರು ಕಾಳವ
ಜುಮ್ಮಿಯರನ್ನೆಲ್ಲ ವನವಾಸಕ್ಕೆ ಅಟ್ಟಿ ತಾವೂ ಆ

ಭಾರತೀಯ ಚಿತ್ರರಂಗದ ಭೀಷ್ಮ ದಾದಾ ಸಾಹೇಬ್ ಫಾಲ್ಕೆ



ಭಾರತೀಯ ಚಿತ್ರರಂಗ ತನ್ನ ಶತಮಾನೋತ್ಸವ
ಚರಿಸಿಕೊಳ್ಳುತ್ತಿರುವ ಈ ದಿನಗಳಲ್ಲಿ ನಾವು ನೆನೆಯಲೇ
ಕಾದ ವ್ಯಕ್ತಿ ದಾದಾ ಸಾಹೇಬ್ ಫಾಲ್ಕೆ. ಮಹಾರಾಷ್ಟ್ರದ
ಕ ಸಮೀಪದ ತ್ರ್ಯಂಬಕೇಶ್ವರದಲ್ಲಿ ಹುಟ್ಟಿ (1870)
ಟ್ಟೋಬ್ಬರಿ ಎಪ್ಪತ್ತಮೂರು ವರ್ಷಗಳ ಬದುಕನ್ನು
ಬಲಿಸಿದ ದಾದಾ ಸಾಹೇಬ್ ಫಾಲ್ಕೆ ಬಗ್ಗೆ ಚರ್ಚಿಸಲು
ೇಕ ಕಾರಣಗಳಿವೆ. ಭಾರತೀಯ ಚಿತ್ರರಂಗ
ಟ್ಟಿಕೊಂಡಿದ್ದು ಈ ವ್ಯಕ್ತಿಯ ಮೂಲಕ. ಆತ ಬೆಳ್ಳಿತೆರೆಯ
ಲೆ ಸಿನಿಮಾ ತರುವವರೆಗೆ ಸಿನಿಮಾ ಪರಿಕಲ್ಪನೆಯೇ
ರತೀಯರಿಗಿರಲಿಲ್ಲ. ಚಿತ್ರಕಲೆ, ವಾಸ್ತುಶಿಲ್ಪ, ಫೋಟೋಗ್ರಫಿ
ಭ್ಯಸಿಸಿದ್ದು; ಗೋಧ್ರಾದಲ್ಲಿ ಫೋಟೋಗ್ರಾಫರಾಗಿದ್ದದ್ದು;
ರ್ಮನಿಯ ಮ್ಯಾಜಿಕ್ ಮಾಂತ್ರಿಕ ಕಾರ್ಲ್ ಹರ್ಟ್ಜನನ್ನು
ಟಿಯಾದದ್ದು; ಭಾರತೀಯ ಪುರಾತತ್ವ ಇಲಾಖೆಗೆ ಕೆಲಸ
ಡಿದ್ದು; ಚಿತ್ರಕಾರ ರವಿವರ್ಮನ ಜೊತೆ ಕೆಲಸ ಮಾಡಿದ್ದು;
ತ್ರ ಮುದ್ರಣಾಲಯ ಆರಂಭಿಸಿದ್ದು; ಕಲೆಗೆ ಸಂಬಂಧಿಸಿದ
ನಿಕ ತಂತ್ರಜ್ಞಾನವನ್ನು ಅಧ್ಯಯನಿಸಲು ಜರ್ಮನಿಗೆ
ೇಗಿಬಂದಿದ್ದು; ಮುದ್ರಣ ಕ್ಷೇತ್ರದಲ್ಲಿ ಆಸಕ್ತಿ
ಮಕೊಂಡು ಸಿನಿಮಾದತ್ತ ಗಮನ ಹರಿಸಿದ್ದು; 'ದಿ
ಫ್ ಆಫ್ ಕ್ರೈಸ್ಟ್' ಎಂಬ ಇಂಗ್ಲಿಷ್ ಮೂಕಿಚಿತ್ರ
ೇಡಿ ಪ್ರಭಾವಕ್ಕೊಳಗಾದದ್ದು; ಸ್ವತಃ ಸಿನಿಮಾ ನಿರ್ಮಿಸ
ೊಂದು ಕನಸು ಕಂಡಿದ್ದು; 1913ರಲ್ಲಿ ಪವಾಡವೆಂಬಂತೆ
ಜಾ ಹರಿಶ್ಚಂದ್ರ' ಚಿತ್ರವನ್ನು ಮಾಡಿ ಮುಂಬಯಿಯಲ್ಲಿ
ುಗಡೆ ಮಾಡಿದ್ದು; ಆ ಮೂಲಕ ಭಾರತದ ಚೊಚ್ಚಲ
ಸಿನಿಮಾ ತೆರೆಗೆ ಬಂದಿದ್ದು; ಇವೆಲ್ಲವೂ ಐತಿಹಾಸಿಕ ವಿಷಯಗಳು.

'ರಾಜಾ ಹರಿಶ್ಚಂದ್ರ' ಚಿತ್ರ ತಯಾರಿಸುವಾಗ ಫಾಲ್ಕೆ ಪಟ್ಟ ಪಾಡುಗಳು ಅಷ್ಟಿಷ್ಟಲ್ಲ. ಸಿನಿಮಾ ಮಾಡಬೇಕೆಂಬ ಉತ್ಸಾಹ, ಛಲ ಇದ್ದರೂ ಕೈಯಲ್ಲಿ ದುಗ್ಗಾಣಿಯೂ ಇರಲಿಲ್ಲ. ಯಾರೂ ಹಣ ಹಾಕಲು ಮುಂದೆ ಬರುತ್ತಿರಲಿಲ್ಲ. ನಾಟಕಗಳ ಗುಂಗಿನಲ್ಲಿಯೇ ಮುಳುಗಿದ್ದ ಆ ಕಾಲದ ಭಾರತಕ್ಕೆ ಸಿನಿಮಾ ಎಂಬ ಪದವೇ ಹೊಸದು. ಅಂತಹ ಪರಿಸ್ಥಿತಿಯಲ್ಲಿ ಸ್ವತಃ ಸ್ಕ್ರಿಪ್ಟ್ ಬರೆದು, ನಿರ್ದೇಶನದ ಜೊತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತು ಹೇಗೋ ಕಷ್ಟಪಟ್ಟು ಸಿನಿಮಾ ಮಾಡಿದರೂ ಒಂದೇ ಒಂದು ನರಪಿಳ್ಳೆಯೂ ಥಿಯೇಟರಿನ ಕಡೆ ತಲೆ ಹಾಕುತ್ತಿರಲಿಲ್ಲ. ಆಗ ಫಾಲ್ಕೆ ಅನಿವಾರ್ಯವಾಗಿ ಪಬ್ಲಿಸಿಟಿ ಮಾಡಲೇಬೇಕಿತ್ತು. ಟಿಕೇಟು ಕೊಂಡು ಸಿನಿಮಾ ನೋಡಿದವರಿಗೆ ಬಹುಮಾನ ಕೊಡಲಾಗುವುದೆಂದೂ, ಈ ಚಿತ್ರದಲ್ಲಿ ಪುಟ್ಟಪುಟ್ಟ ಐವತ್ತೆಂಟು ಸಾವಿರ ಚಲಿಸುವ ಚಿತ್ರ(ಫೋಟೋ)ಗಳನ್ನು ಅಳವಡಿಸಲಾಗಿದೆಯೆಂದೂ ಬಸ್ ನಿಲ್ದಾಣ, ಮಾರ್ಕೆಟ್, ರೈಲು ನಿಲ್ದಾಣ ತರಹದ ಜನಜಂಗುಳಿ ಇರುವೆಡೆಯಲ್ಲೆಲ್ಲಾ ಪ್ರಚಾರ ಮಾಡಲಾಯಿತು. ಫಾಲ್ಕೆಯ ಟ್ರಿಕ್ ಕ್ಲಿಕ್ಕಾಗಿ ಕುತೂಹಲಕ್ಕೊಳಗಾದ ಜನ ಒಬ್ಬೊಬ್ಬರಾಗಿ ಥಿಯೇಟರಿನ ಕಡೆ ಬರಲಾರಂಭಿಸಿದರು. ನಾಟಕಗಳಲ್ಲಿ ಕಾಣಸಿಗದ ಕಿಕ್ ಸಿನಿಮಾದಲ್ಲಿದೆ ಎಂಬ ಸತ್ಯ ಪ್ರೇಕ್ಷಕನಿಗೆ ನಿಧಾನವಾಗಿ ಅರ್ಥವಾಗತೊಡಗಿತು. ಕ್ಲೋಸಪ್‌ಗಳು, ಮಿಡ್ ಶಾಟ್‌ಗಳು, . ಲಾಂಗ್‌ಶಾಟ್‌ಗಳು ಪ್ರೇಕ್ಷಕನೆದುರು ಹೊಸಲೋಕವನ್ನೇ ತೆರೆದಿಟ್ಟವು. ಹರಿಶ್ಚಂದ್ರನ ಸತ್ಯಪಾಲನೆ, ಚಂದ್ರಮತಿಯ ಕಷ್ಟ, ವಿಶ್ವಾಮಿತ್ರ ನೀಡುವ ಕಿರುಕುಳಗಳು ರಂಗಕ್ಕಿಂತ ಭಿನ್ನವಾಗಿಯೂ, ಅದ್ಭುತವಾಗಿಯೂ ಪ್ರೇಕ್ಷಕನಿಗೆ ಕಂಡುಬಂದಿದ್ದವು. ಇವೆಲ್ಲದರ ಪರಿಣಾಮವಾಗಿ ಚಿತ್ರವು ಹಾಕಿದ್ದ ಬಂಡವಾಳಕ್ಕೂ ಮೀರಿ ಲಾಭ ಗಳಿಸತೊಡಗಿತು. ಬಂದ ಲಾಭದಲ್ಲಿ ದಾದಾ ಸಾಹೇಬ್ ಫಾಲ್ಕೆ ಪಟಾಪಟ್ ಅಂತ 'ಮೋಹಿನಿ ಭಸ್ಮಾಸುರ್' ಹಾಗೂ 'ಸತ್ಯವಾನ್ ಸಾವಿತ್ರಿ' ಚಿತ್ರಗಳನ್ನು ತೆಗೆದದ್ದು ಅವರಿಗೆ ಸಿನಿಮಾ ನಿರ್ಮಾಣದೆಡೆಗಿದ್ದ ಒಲವನ್ನು ತೋರಿಸುತ್ತದೆ.

'ರಾಜಾ ಹರಿಶ್ಚಂದ್ರ' ಚಿತ್ರ ತಯಾರಿಸಿದ ಆ ಕಾಲಕ್ಕೆಲ್ಲಾ ಸ್ತ್ರೀ ಪಾತ್ರಗಳಲ್ಲಿ ನಟಿಸಲು ಯಾವ ಹೆಂಗಸೂ ಮುಂದೆ ಬರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಏನು ಮಾಡಬೇಕೆಂದು ತೋಚದ ಫಾಲ್ಕೆ ಸೀದಾ ವೇಶ್ಯಾವಾಟಿಕೆ ನಡೆಯುವ ಸ್ಥಳಕ್ಕೆ ಹೋಗಿ ಹೇಗೋ ವೇಶ್ಯೆಯೊಬ್ಬಳ ಮನವೊಲಿಸಿ, ಸಿನಿಮಾದಲ್ಲಿ ನಟಿಸಲು ಒಪ್ಪಿಸಿ ಕರೆತಂದಿದ್ದರೂ ಆಕೆ ಹೆಚ್ಚುಕಾಲ ಉಳಿಯಲಿಲ್ಲ; ಆಕೆಯ ರೆಗ್ಯುಲರ್ ಗಿರಾಕಿ ಸೀದಾ ಸಿನಿಮಾ ಸೆಟ್ಟಿಗೇ ಆಕೆಯನ್ನು ಹುಡುಕಿಕೊಂಡು ಬಂದು ಎತ್ತಾಕಿಕೊಂಡು ಹೋಗಿಬಿಟ್ಟಿದ್ದ. ಫಾಲ್ಕೆ ಮತ್ತೆ ಕಂಗಾಲು. ಕಡೆಗೆ ಛಲಬಿಡದ ಫಾಲ್ಕೆ ಮುಗಿಬಿದ್ದದ್ದು ಟೀ ಅಂಗಡಿಗೆ. ಅಲ್ಲಿ ಕೆಲಸ ಮಾಡುವ ಗಂಡಸರಲ್ಲಿ ಮಾತಾಡುತ್ತಾ ಅಡುಗೆ ಹೆಂಗಸರು ನಿರ್ವಹಿಸುವಂಥ ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು ಇತ್ಯಾದಿ ಬಗೆಯ ಕೆಲಸಗಳನ್ನು ಮಾಡಬಲ್ಲ, ಸ್ತ್ರೀ ಪಾತ್ರದಲ್ಲಿ ನಟಿಸಲು ಆಸಕ್ತಿ ಇರಬಲ್ಲವನು ಬೇಕೆಂಬುದಾಗಿ ಕೇಳಿಕೊಂಡಿದ್ದುಂಟು. ಮೊದಲಿಗೆ ಒಂದು ಸೆಟ್ ನಿರ್ಮಿಸಿ ಅಲ್ಲಿ ನಡೆಸಬೇಕಾದ ದೃಶ್ಯಗಳನ್ನೆಲ್ಲ ಸೆರೆಹಿಡಿದು ಆನಂತರ ಮುಂಬಯಿಯ ಹೊರವಲಯದ ಲೊಕೇಶನ್ನುಗಳಲ್ಲಿ ನದಿ ಹರಿಯುವ, ದಟ್ಟ ಕಾಡಿನ ವಾತಾವರಣದಲ್ಲಿ ಶೂಟಿಂಗ್ ಮಾಡಲಾಗಿತ್ತು. ಹಾಗೆಯೇ ಅದೊಂದು ದಿನ ಫಾಲ್ಕೆ ಇನ್ನೂ ಶೂಟಿಂಗ್ ಸ್ಪಾಟಿಗೆ ಹೋಗುವ ಮುನ್ನ ಪುರಾಣ ಪಾತ್ರಗಳ ವೇಷದಲ್ಲಿ ಆ ಕಾಡು, ನದಿ ಕಿನಾರೆಗಳಲ್ಲೆಲ್ಲ ಸುತ್ತಾಡುತ್ತಿದ್ದ ಕೆಲವು ಪಾತ್ರಧಾರಿಗಳನ್ನು ಕಂಡು ಗಾಬರಿಗೊಂಡ ಪೊಲೀಸರು ಅವರನ್ನೆಲ್ಲ ಬಂಧಿಸಿದ್ದರು. ಆನಂತರ ಕಾರಣ ತಿಳಿದು ಅವರನ್ನು ಬಿಡುಗಡೆ ಮಾಡಿದ್ದು ಆ ಕಾಲಕ್ಕೆ ಸಿನಿಮಾ ಎಂಬುದು ಸಾರ್ವಜನಿಕವಾಗಿ ಎಷ್ಟು ಅಪರಿಚಿತ ಮಾಧ್ಯಮವಾಗಿತ್ತು ಎಂಬುದಕ್ಕೆ ಮತ್ತೊಂದು ಕುತೂಹಲಕರ ಉದಾಹರಣೆ.

ಆಮೇಲೆ ಫಾಲ್ಕೆ ಐವರು ಪಾಲುದಾರರೊಡಗೂಡಿ 'ಹಿಂದೂಸ್ತಾನ್ ಫಿಲಂಸ್' ಎಂಬ ಲಾಂಛನದಡಿಯಲ್ಲಿ ಒಂದು ಚಿತ್ರ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿ ಆ ಮೂಲಕ ಸಿನಿಮಾಗಳನ್ನು ಮಾಡತೊಡಗಿದರು. ಆ ಐದು ಜನರೂ ತಮ್ಮದೇ ಸ್ವಂತ ಬಿಸಿನೆಸ್ ಹೊಂದಿದ್ದವರಾದ್ದರಿಂದ ಸಿನಿಮಾ ನಿರ್ಮಾಣಕ್ಕೆ ಆರ್ಥಿಕ ಬೆಂಬಲ ಸಿಗುತ್ತದೆಂದೂ, ತಾವು ಕ್ರಿಯಾಶೀಲತೆಯೆಡೆಗೆ ಗಮನ ಕೊಡಬಹುದೆಂದೂ ಫಾಲ್ಕೆ ಯೋಚಿಸಿದ್ದರಲ್ಲಿ ಅರ್ಥವಿತ್ತು. ಅದೇ ಉತ್ಸಾಹದಲ್ಲಿ ಒಂದು ಸುಸಜ್ಜಿತ ಸ್ಟುಡಿಯೋ ನಿರ್ಮಾಣ ಮಾಡಿ ಅಲ್ಲಿ ಅನುಭವಿ ಕಲಾವಿದರು, ತಂತ್ರಜ್ಞರನ್ನು ಒಗ್ಗೂಡಿಸಿ ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡುವ ಕನಸು ಕಂಡರು. ಸ್ಟುಡಿಯೋ ಕೂಡ ನಿರ್ಮಾಣವಾಯಿತು. ಆದರೆ ಅದೇಕೋ ಆ ಐವರು ಪಾಲುದಾರರ ಜೊತೆಗಿನ ಸಂಬಂಧ ಸರಿಗಾಣದೆ 'ಹಿಂದುಸ್ತಾನ್ ಫಿಲಂಸ್'ನಿಂದ ಹೊರಬಂದ ಫಾಲ್ಕೆ 1920ರಲ್ಲಿ ತಾವು ಸಿನಿಮಾರಂಗದಿಂದ ನಿವೃತ್ತರಾಗುತ್ತಿರುವುದಾಗಿ ಘೋಷಿಸಿದರು. ಆದರೂ ತದನಂತರದ ದಿನಗಳಲ್ಲಿ ಫಾಲ್ಕೆ ಮತ್ತೆ ಒಂದಿಷ್ಟು ಸಿನಿಮಾಗಳನ್ನು ನಿರ್ದೇಶಿಸಿದ್ದು ಅವರು ಸಿನಿಮಾ ಬಿಟ್ಟು ಬದುಕಿರಲಾರರು ಎಂಬುದಕ್ಕೆ ಸಾಕ್ಷಿ. ಹಾಗೆಯೇ ಫಾಲ್ಕೆಯವರ ಕನಸಿನ ಕೂಸಾಗಿದ್ದ 'ಹಿಂದುಸ್ತಾನ್ ಫಿಲಂಸ್' ಸಂಸ್ಥೆ ಮತ್ತೆಂದೂ ಸುಧಾರಿಸಲಾರದಷ್ಟು ಭಾರೀ ನಷ್ಟವನ್ನನುಭವಿಸಿದ್ದೂ ಒಂದು ದುರಂತ ವಿದ್ಯಮಾನ.


ಇಷ್ಟಕ್ಕೂ ಒಂಬತ್ತು ಮಕ್ಕಳ ತಂದೆಯಾಗಿದ್ದ ದಾದಾ ಸಾಹೇಬ್ ಫಾಲ್ಕೆ ತೀವ್ರವಾದ ಆರ್ಥಿಕ ಸಂಕಟಕ್ಕೆ ಸಿಲುಕಿದ್ದರಾ? ಹೌದು ಎನ್ನುತ್ತದೆ ಒಂದು ಮೂಲ. "ಮಗನೇ, ನನ್ನ ಹತ್ತಿರ ವಿಷ ಕೊಂಡುಕೊಳ್ಳುವಷ್ಟೂ ಹಣವಿಲ್ಲ, ಸಹಕರಿಸು" ಎಂದು 1930ರಲ್ಲಿ ಫಾಲ್ಕೆ ತಮ್ಮ ಮಗ ಬಾಲಚಂದ್ರರಿಗೆ ಬರೆದಿದ್ದ ಪತ್ರದಲ್ಲಿನ ಈ ಸಾಲು ಸಿನಿಮಾವನ್ನು ಪ್ರೀತಿಸುವ, ಆರಾಧಿಸುವ ಎಂಥವರ



ರೆಪ್ಪೆಗಳನ್ನೂ ಒಮ್ಮೆ ತೇವಗೊಳಿಸದಿರವು, ಆತ್ಮವನ್ನು ತಲ್ಲಣಕ್ಕೆ ಗುರಿಯಾಗಿಸದಿರವು. ಅಂದಹಾಗೆ ಫಾಲ್ಕೆ ತಮ್ಮ ಹಿತೈಷಿಗಳ ಸಲಹೆ ಮೇರೆಗೆ ತಮ್ಮ ಕುಟುಂಬದ ವಾಸಕ್ಕೆ ಅಂತ ಒಂದು ಮನೆ ಕಟ್ಟಿಕೊಂಡಿದ್ದು 1938ರ ಸುಮಾರಿಗೆ. ಅದೂ ಭಾರತೀಯ ಸಿನಿಮ ತನ್ನ ಇಪ್ಪತ್ತೈದನೇ ವರ್ಷದ ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿದ್ದ ನೆನಪಿಗಾಗಿ ನಿರ್ದೇಶಕ ವಿ.ಶಾಂತರಾಮ್ ನೀಡಿದ ಉಡುಗೊರೆಯಾದ ಐದು ಸಾವಿರ ರೂಪಾಯಿಗಳಲ್ಲಿ; ಆ ಬೆಳ್ಳಿಹಬ್ಬದ ಸಂಭ್ರಮೋತ್ಸವದಲ್ಲಿ ಸಭಾಂಗಣದ ಮೂಲೆಯೊಂದರಲ್ಲಿ ಮಾಮೂಲಿ ವ್ಯಕ್ತಿಯಂತೆ ಕುಳಿತು ಕಾರ್ಯಕ್ರಮ ವೀಕ್ಷಿಸುತ್ತಿದ್ದ ಈ 'ಭಾರತೀಯ ಸಿನಿಮಾದ ಪಿತಾಮಹ'ನನ್ನು ವಿ.ಶಾಂತರಾಮ್ ಗುರುತಿಸಿ ವೇದಿಕೆಗೆ ಕರೆಯುವವರೆಗೂ ಯಾರೂ ಗಮನಿಸಿರಲೇ ಇಲ್ಲ!

ದಾದಾ ಸಾಹೇಬ್ ಫಾಲ್ಕೆಯವರ ಬದುಕಿನ ಕಥೆಯಲ್ಲಿ ವಿಶೇಷವಾಗಿ ಕಾಡುವ ಪಾತ್ರವೆಂದರೆ ಅವರ ಪತ್ನಿ ಸರಸ್ವತಿ. ಫಾಲ್ಕೆಯವರ ಸಾಧನೆಯ ಹಿಂದೆ ಆಕೆಯ ತ್ಯಾಗ ಮಹತ್ವದ್ದು; ಒಂಭತ್ತು ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಸಂಸಾರದ ಬಂಡಿ ನಡೆಸುತ್ತಿದ್ದದ್ದು, ಬಿಳಿಯ ಬೆಡ್‌ಶೀಟುಗಳನ್ನು ಲೈಟ್ ರಿಫ್ಲೆಕ್ಟರಿನಂತೆ ಸೂರ್ಯನ ಬೆಳಕಿಗೆ ಅಡ್ಡಲಾಗಿ ಹಿಡಿದು ಗಂಟೆಗಟ್ಟಲೆ ಶೂಟಿಂಗಿಗೆ ಸಹಕರಿಸುತ್ತಿದ್ದದ್ದು, ಫಿಲಂ ಡೆವಲಪಿಂಗ್ ಕೆಮಿಕಲ್ಸ್ ಅನ್ನು ಮಿಕ್ಸ್ ಮಾಡುತ್ತಿದ್ದದ್ದು; ಕಚ್ಚಾ ಫಿಲಂ ಶೀಟ್‌ಗಳನ್ನು ಇರುಳೆಲ್ಲಾ ಮೋಂಬತ್ತಿ ಬೆಳಕಿನಲ್ಲಿ **perforate** ಮಾಡುವುದು, ಅರವತ್ತರಿಂದ ಎಪ್ಪತ್ತಕ್ಕೂ ಹೆಚ್ಚು ಜನರಿದ್ದ ಇಡೀ ಯುನಿಟ್‌ಗೆ ಅಡುಗೆ ಮಾಡಿ ಬಡಿಸುತ್ತಿದ್ದದ್ದು- ಇವೆಲ್ಲವನ್ನೂ ಗಮನಿಸಬೇಕು. ಇದರರ್ಥ ಫಾಲ್ಕೆಯವರ ಮೂಕಿಚಿತ್ರಗಳ ಹಿಂದೆ ಈ ಅಸಾಧಾರಣ ಸ್ತ್ರೀ ಗಟ್ಟಿಧ್ವನಿಯಾಗಿ ನಿಂತಿದ್ದರು.

ಹೀಗೆ ಮೊದಮೊದಲಿಗೆ ಮೂಕಿಚಿತ್ರಗಳನ್ನಷ್ಟೇ ಮಾಡಿಕೊಂಡು ಬರುತ್ತಿದ್ದ ಫಾಲ್ಕೆ ನಂತರದ ದಿನಗಳಲ್ಲಿ ಸೌಂಡ್ ಕಡೆ ಚಿತ್ತ ಹರಿಸಿದರು. ಅದರ ಪರಿಣಾಮವಾಗಿ 1932ರಲ್ಲಿ ಬಿಡುಗಡೆ ಮಾಡಿದ್ದ ತಮ್ಮ 'ಸೇತುಬಂಧನ್' ಎಂಬ ಮೂಕಿಚಿತ್ರಕ್ಕೆ ಧ್ವನಿಯನ್ನು ಅಳವಡಿಸಿ ಅಂದರೆ ಮಾತುಗಳ ಡಬ್ ಮಾಡಿ ಮತ್ತೆ ಬಿಡುಗಡೆ ಮಾಡಿ ಭಾರತೀಯ ಪ್ರೇಕ್ಷಕ ಮತ್ತೊಮ್ಮೆ ಬೆಚ್ಚಿ ಬೀಳುವಂತೆ ಮಾಡಿದರು. ಆವರೆಗೆ ಬರೀ ಕೈ ಸನ್ನೆ, ಬಾಯಿ ಸನ್ನೆ, ಹಾವಭಾವ, ಭಂಗಿಗಳಲ್ಲೇ, ಮುಖದಲ್ಲಿ ಬದಲಾಗುವ ಗೆರೆಗಳಿಂದಲೇ ಪಾತ್ರಗಳ ಅಂತರಂಗದ ಭಾವನೆಗಳನ್ನು ಗ್ರಹಿಸಿ ಆನಂದಿಸುತ್ತಿದ್ದ ಪ್ರೇಕ್ಷಕ 'ಸೇತುಬಂಧನ್' ಚಿತ್ರದಾಚೆಗೆ ಬೆಳ್ಳಿಪರದೆಯ ಮೇಲೆ ಪಾತ್ರಗಳು ಪರಸ್ಪರ ಮಾತಾಡುವುದನ್ನು ನೋಡಿ, ಕೇಳಿ ಚಕಿತಗೊಂಡ. ತನ್ನ ಕಣ್ಣು, ಕಿವಿಗಳನ್ನು ತಾನೇ ನಂಬದಾದ.



ಪ್ರಯೋಗ, ಶ್ರದ್ಧೆ, ಪರಿಶ್ರಮಗಳಿಗೆ ಹೆಸರಾಗಿದ್ದ ದಾದಾ ಸಾಹೇಬ್ ಫಾಲ್ಕೆ ತಮ್ಮ ಸಿನಿಮಾ ಮೂಲಕ ಭಾರತೀಯರಿಗೆ ಏನನ್ನೋ ಹೇಳಬೇಕು ಎಂದು ಭಾವಿಸಿದ್ದವರು. "ನನ್ನ ದೇಶಕ್ಕಾಗಿ ಸಿನಿಮ ಮಾಡುತ್ತಾ ನಮ್ಮದೇ ಒಂದು ಇಂಡಸ್ಟ್ರಿ ಕಟ್ಟಬೇಕು" ಎಂದು ಸದಾ ಹೇಳುತ್ತಿದ್ದ ಫಾಲ್ಕೆ "ಭಾರತದ ಮಕ್ಕಳಾದ ನಾವು ಭಾರತೀಯತೆಯನ್ನು, ಭಾರತದ ಪ್ರತಿಮೆಗಳನ್ನು ಪರದೆಯ ಮೇಲೆ ಮೂಡಿಸಬೇಕು. ಇದು 'ಸ್ವದೇಶಿ ಚಳವಳಿ'ಯ ಸಂದರ್ಭ. ಈ ಸಂದರ್ಭದಲ್ಲಿ ಸರ್ಕಾರಿ ಹುದ್ದೆ ಅಥವಾ ಸ್ವತಂತ್ರ ಉದ್ಯೋಗಕ್ಕಿಂತ ನಾನು ಆಯ್ಕೆ ಮಾಡಿಕೊಂಡಿರುವ ಸಿನಿಮಾ ಕ್ಷೇತ್ರವೇ ನನಗೆ ಮುಖ್ಯ. ಈ ಮಾಧ್ಯಮದ ಮೂಲಕ ನನ್ನ ದೇಶದ ಜನತೆಗೆ ಮತ್ತು ಈ ಚಳವಳಿಯಲ್ಲಿ ಕಂಕಣತೊಟ್ಟು ನಿಂತಿರುವ ನಾಯಕರಿಗೆ ನಾನು ಹೇಳಬೇಕಾದ್ದನ್ನು ಹೇಳುವ ಅವಕಾಶ ಸಿಕ್ಕಿದೆ" ಎಂಬ ಬದ್ಧತೆ ಹೊಂದಿದ್ದ ಫಾಲ್ಕೆ ಲಂಡನ್ನಿಗೆ ಹೋಗಿ ಸಿನಿಮ ಮಾಡಲು ನಿರಾಕರಿಸುವುದರ ಜೊತೆಗೆ ಭಾರತಕ್ಕೆ ಸ್ವಂತದ್ದೊಂದು ಫಿಲಂ ಇಂಡಸ್ಟ್ರಿಯ ಕನಸು ಕಂಡಿದ್ದರು.

ಸಿನಿಮಾವನ್ನೇ ಉಸಿರಾಡುತ್ತಾ, ಸಿನಿಮಾವನ್ನೇ ಬದುಕಾಗಿಸಿಕೊಂಡಿದ್ದ ದಾದಾ ಸಾಹೇಬ್ ಫಾಲ್ಕೆಯವರ ಹೆಸರಿನಲ್ಲಿ ಭಾರತ ಸರ್ಕಾರ 1969ರಿಂದೀಚೆಗೆ ಒಂದು ಪ್ರತಿಷ್ಠಿತ ಪ್ರಶಸ್ತಿಯನ್ನು ರೂಪಿಸಿ ಭಾರತೀಯ ಚಿತ್ರರಂಗಕ್ಕೆ ಗಮನೀಯ ಸೇವೆ ಸಲ್ಲಿಸಿದ ಕಲಾವಿದ, ತಂತ್ರಜ್ಞರಿಗೆ ನೀಡುತ್ತಾ ಬಂದಿದೆ. 1969ರಲ್ಲಿ ಈ ಪ್ರಶಸ್ತಿಯನ್ನು ಮೊಟ್ಟಮೊದಲಬಾರಿಗೆ ಭಾರತದ ಪ್ರಥಮ ಮಹಿಳಾನಟಿ ದೇವಿಕಾರಾಣಿಯವರಿಗೆ ನೀಡಲಾಗಿದ್ದು ಆನಂತರ ನಮ್ಮ ರಾಜ್‌ಕುಮಾರ್, ವಿ.ಕೆ.ಮೂರ್ತಿ ಸೇರಿದಂತೆ ಪೃಥ್ವಿರಾಜ್ ಕಪೂರ್, ಧೀರೇಂದ್ರನಾಥ್ ಗಂಗೂಲಿ, ನೌಶಾದ್, ಸತ್ಯಜಿತ್ ರೇ, ರಾಜ್‌ಕಪೂರ್, ಲತಾ ಮಂಗೇಶ್ಕರ್, ಅಕ್ಕಿನೇನಿ ನಾಗೇಶ್ವರ ರಾವ್, ಶಿವಾಜಿ ಗಣೇಶನ್, ಆಶಾ ಭೋಂಸ್ಲೆ, ಯಶ್ ಚೋಪ್ರ, ದೇವಾನಂದ್, ಕೆ.ಬಾಲಚಂದರ್, ಸೌಮಿತ್ರ ಚಟರ್ಜಿ ಒಳಗೊಂಡಂತೆ ಅನೇಕರಿಗೆ ನೀಡಲಾಗಿದೆ. ಇತ್ತೀಚೆಗಷ್ಟೇ ಕವಿ, ಚಿತ್ರಸಾಹಿತಿ, ನಿರ್ದೇಶಕ ಗುಲ್ಜಾರ್ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಅಷ್ಟು ಮಾತ್ರವಲ್ಲದೆ ದಾದಾ ಸಾಹೇಬ್ ಫಾಲ್ಕೆಯವರ ಭಾವಚಿತ್ರವಿರುವ ಸ್ಟ್ಯಾಂಪ್ ಅನ್ನು 1971ನೇ ಇಸವಿಯಲ್ಲೇ ಭಾರತ ಸರ್ಕಾರ ಬಿಡುಗಡೆಗೊಳಿಸಿದೆ. ಹಾಗೆಯೇ ಇವರ ಹೆಸರನ್ನು ಕೆಲವೊಂದು ರಸ್ತೆಗಳಿಗಿಟ್ಟಿರುವುದಲ್ಲದೆ, ಮುಂಬಯಿ, ನಾಸಿಕ್ ಮುಂತಾದ ಕಡೆ ಇವರ ಪುತ್ಥಳಿಗಳೂ ಅನಾವರಣಗೊಂಡಿವೆ. ಜೊತೆಗೆ ಮುಂಬಯಿ ಫಿಲಂ ಸಿಟಿಯನ್ನು ಇವರಿಗೆ ಅರ್ಪಿಸಿರುವುದೂ ಉಂಟು. ಇಂತಹ ದಾದಾ ಸಾಹೇಬ್ ಫಾಲ್ಕೆಯವರಿಗೆ ದೇಶದ ಅತ್ಯುನ್ನತ ಗೌರವವಾದ 'ಭಾರತ ರತ್ನ'ವನ್ನು ನೀಡಬೇಕೆಂಬುದು ಈಗ ಮುಂಬಯಿಯಲ್ಲಿ ವಾಸವಿರುವ ಅವರ ಮೊಮ್ಮಕ್ಕಳ ಆಶಯ. ಹಾಗೆಯೇ ಅವರ ಜನ್ಮಸ್ಥಳದಲ್ಲಿ ಒಂದು ಫಿಲಂ ಇನ್‌ಸ್ಟಿಟ್ಯೂಟ್ ಆರಂಭಿಸುವ ಬಗ್ಗೆ ಸರ್ಕಾರ ಯೋಚಿಸಬೇಕೆಂಬುದು ಕೂಡ ಅವರ ಬೇಡಿಕೆಗಳಲ್ಲೊಂದು.


ಹೀಗೆ ದೇಶ ಕಂಡ ವಿಶಿಷ್ಟ ಪ್ರತಿಭೆಯಾಗಿ, ಅಪರೂಪದ ಆಸ್ತಿಯಾಗಿ ಪರಿಣಮಿಸಿದ ದಾದಾ ಸಾಹೇಬ್ ಫಾಲ್ಕೆಯವರು 1944ರಲ್ಲಿ ನಿಧನರಾಗುವ ಮುನ್ನ ಭಾರತೀಯರಿಗೆ ಹಲವಾರು ಚಿತ್ರಗಳನ್ನು ನೀಡುವುದರ ಜೊತೆಗೆ ಚಿತ್ರರಂಗದಲ್ಲಿ ಏನಾದರೂ ಸಾಧಿಸಬೇಕೆಂದು ಹಾತೊರೆಯುವ ಕನಸುಗಣ್ಣುಗಳಿಗೆ ಸಾವಿರಾರು ಕನಸುಗಳನ್ನು ಮೊಗೆದು ಕೊಟ್ಟು, ಒಂದು ಚರಿತ್ರೆಗೆ ನಾಂದಿ ಹಾಡಿ ಹೊರಟವರು. ಅವರು ರೂಪಿಸಿದ ಕನಸಿನ ಹಾದಿಯಲ್ಲಿ ಭಾರತೀಯ ಚಿತ್ರರಂಗ ಯಶಸ್ವಿಯಾಗಿ ಸಾಗಿದರೆ ಅದೇ ಆ ಮಹಾನ್ ಚೇತನಕ್ಕೆ ಸಲ್ಲುವ ಗೌರವ ಅಲ್ಲವೇ?

● ಹೃದಯಶಿವ

ಮ್ಮೆ ಪ್ರತ್ಯಕ್ಷರಾಗುತ್ತಿದ್ದಾರೆ. ಏಕತಾನದ ಇಂದಿನ ದಿನಗಳಲ್ಲಿ
ಬದುಕನ್ನು ಸಹ್ಯ ಮಾಡಿರುವುದು 'ಲಂಕೇಶ್' ಮತ್ತು
ಹಿಂದೂ' ಪತ್ರಿಕೆಗಳು.

-ಪ್ರಕಾಶ ಬಿಸ್ನಾಗರ

'ಹೀನಾತಿಹೀನರ ಜೊತೆ ಹೀಗೊಂದು ಅನಂತ ಕತೆ'.
ಜನವ್ರು ಅನಂತಮೂರ್ತಿಯವರಿಗೆ ಸಲ್ಲಿಸಿದ ನಿಜವಾದ
ರನಮನ. ಹೂತುಹೋಗಬಹುದಾಗಿದ್ದ ಆ ಸತ್ಯವನ್ನು
ಜೊತೆ ಹಂಚಿಕೊಂಡ ರಾ. ಸೋಮನಾಥ್ ಅವರಿಗೆ
ಜ್ಞತೆ. ಯು.ಆರ್.ಅನಂತಮೂರ್ತಿಯವರ ಜೀವಪರ
ಜಿ ಹಾಗು ನಾಯಿಗಳ ತುತ್ತು ಕಸಿವ ನಮ್ಮೆಲ್ಲರ
ಟ ಗುಣಕ್ಕೆ ಲೇಖನ ಕನ್ನಡಿ ಹಿಡಿದಿದೆ.



ನಾಜಿ ಪಡೆ ಎಂಬುದು ನಾಯಿ ಪಡೆ ಎಂದು ತಪ್ಪಾಗಿ
ಟವಾಗಿದೆ. ದಯಮಾಡಿ ಇನ್ನೊಮ್ಮೆ ಪ್ರಕಟಿಸಿ.

-ಓದುಗ, ಎಸ್‌ಎಂಎಸ್‌ಮೂಲಕ

'ನಾವು ಎಂತಹ ಕೆಟ್ಟ ಕಾಲದಲ್ಲಿ ಎಂತಹ ನೀಚ
ನುಷ್ಯರ ನಡುವೆ ಬದುಕುತ್ತಿದ್ದೇವೆ' ... ಗೌರಿಯವರ
ಮಾತುಗಳು ಪ್ರತಿದಿನ ನನ್ನ ಮನಸ್ಸಿನಲ್ಲಿ ಮೂಡುವ
ನೆಯೇ ಆಗಿದೆ. ನನ್ನ ಊರಿನ ಕೆಲವು ಅಜ್ಞಾನಿಗಳು
ಯ ಸಾಹಿತಿ ಅನಂತಮೂರ್ತಿಯವರನ್ನು ಕಳೆದುಕೊಂಡ
ದರ್ಭದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದ್ದನ್ನು ಖಂಡಿಸುವ
ಮರ್ಥ್ಯ ನಮ್ಮಲ್ಲಿ ಇಲ್ಲವೆ? ಮುಂದಿನ ದಿನಗಳು ಇನ್ನೂ
ಗಿರಬಹುದು?

-ಓದುಗ, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
nkesh70@rediffmail.com ಗೆ ನುಡಿ
ಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ
ನಿಸಿಕೆಗಳನ್ನು 9980331427 ನಂಬರ್‌ಗೂ
ವಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly

ಸ್ಫೂರ್ತಿ ಮ್ಯಾರೇಜ್ ಸ್ಟೋರಿ




'ಜಾಲಿ ಡೇಸ್' ಸಿನಿಮಾದಲ್ಲಿ ಜಾಲಿಯಾಗಿದ್ದ ಸ್ಫೂರ್ತಿ–ವಿಶ್ವಾಸ್ ಜೋಡಿ ಈಗ ಗಂಡಹೆಂಡತಿ ಆಗುತ್ತಿದ್ದಾರೆ. ಈ ಸುದ್ದಿಯಲ್ಲಿ ಸಂದೇಹವಿದ್ದವರು ಅಕ್ಟೋಬರ್ ಮೂವತ್ತನೇ ತಾರೀಕು ತಿರುಪತಿಗೆ ಹೋಗಿ ಖಚಿತ ಪಡಿಸಿಕೊಳ್ಳಬಹುದು. ಇವರ ಮದುವೆ ತಿರುಪತಿಯಲ್ಲಿ ನಡೆಯಲಿದೆ. ಇಷ್ಟಕ್ಕೂ ಇವರಿಬ್ಬರೂ 'ಜಾಲಿ ಡೇಸ್' ಸಿನಿಮಾದಲ್ಲಿ ಒಟ್ಟಿಗೆ ನಟಿಸಿದ್ದು ಆನಂತರ ಬರೋಬ್ಬರಿ ಏಳು ವರ್ಷಗಳ ಕಾಲ ಸೀರಿಯಸ್ಸಾಗಿ ಲವ್ ಮಾಡಿದ್ದಾರೆ. ಆಗಾಗ ಡೇಟಿಂಗ್ ಗೀಟಿಂಗ್ ಅಂತ ಸುತ್ತಿದ್ದಾರೆ. ಈಗ 'ಮದುವೆ ಆಗೋಣ ಬಾ' ಅಂತ ಒಬ್ಬರಿಗೊಬ್ಬರು ಹೇಳಿಕೊಂಡು ಈ ತೀರ್ಮಾನಕ್ಕೆ ಬಂದಿದ್ದಾರೆ. ಈ ಸ್ಫೂರ್ತಿ ಉಂಟಲ್ಲಾ ಈಕೆ ಅಲ್ಲೊಂದು ಇಲ್ಲೊಂದು ಸಿನಿಮಾ, ಇತ್ತೀಚಿನ ಕೆಲವು ಧಾರಾವಾಹಿಗಳಲ್ಲಿ ಕಾಣಿಸಿಕೊಂಡಿದ್ದು ಬಿಟ್ಟರೆ ಅಷ್ಟಾಗಿ ಬ್ಯುಸಿ ನಟಿ ಅನ್ನಿಸಿಕೊಂಡಿರಲಿಲ್ಲ. ಈಗ ಮದುವೆಯಾಗುತ್ತಿದ್ದಾರೆ. ಒಂದು ಮೂಲದ ಪ್ರಕಾರ ಸ್ಫೂರ್ತಿಯ ಕೊನೆಯ ಸಿನಿಮಾ 'ಪಂದ್ಯ'. ಒಂದೆರಡು ಚಿತ್ರಗಳಲ್ಲಿ ನಟಿಸಿ ಇಲ್ಲವಾಗಿ ಬಿಡುವ ಇಂಥ ಕನ್ನಡ ನಟ/ನಟಿಯರ ನೆನೆದರೆ ಬೇಜಾರಾಗುತ್ತೆ ಅಲ್ವಾ?




ರಿಂಗ್ ಮಾಸ್ಟರ್ ಈಗ ಭಂಗಿರಂಗ

ಟೈಟಲ್ ಬದಲಾಯಿಸಿಕೊಳ್ಳುವ ಸರದಿ ಈ ಬಾರಿ 'ರಿಂಗ್ ಮಾಸ್ಟರ್'ದು. ಅರೆ ! ಈ ಟೈಟಲನ್ನು ಎಲ್ಲೋ ಕೇಳಿದ್ದೀವಲ್ಲ ಅಂತ ನಿಮಗೆ ಅನ್ನಿಸಬಹುದು. ಹೌದು, ಇದು ಉದ್ದ ಕೂದಲಿನ, ವಿಚಿತ್ರ ಅಭಿನಯದ ಆರ್ಟ್ ಡೈರೆಕ್ಟರ್ ಕಂ ಆಕ್ಟರ್ ಅರುಣ್ ಸಾಗರ್ ಮತ್ತು ಅರಳುಗೆನ್ನೆಯ ಆವರೇಜ್ ಎತ್ತರ ಕೂಡ ಇಲ್ಲದ ಆ್ಯಂಕರ್ ಅನುಶ್ರೀ ಜೋಡಿ ನಟಿಸುತ್ತಿದ್ದ ಚಿತ್ರದ ಟೈಟಲ್. ಈಗ ಇವರಿಬ್ಬರೂ 'ರಿಂಗ್ ಮಾಸ್ಟರ್' ಚಿತ್ರದಲ್ಲಿ ನಟಿಸುತ್ತಿಲ್ಲ! ಇದೇನು ಸಿನಿಮಾ ಡ್ರಾಪ್ ಆಯ್ತಾ? ಅಂತ ಕೇಳಬೇಡಿ. ಬದಲಿಗೆ ಇವರಿಬ್ಬರೂ ಈಗ ನಟಿಸುತ್ತಿರೋದು 'ಭಂಗಿರಂಗ' ಚಿತ್ರದಲ್ಲಿ. ಈ 'ಭಂಗಿರಂಗ'ನೇ ಆ 'ರಿಂಗ್ ಮಾಸ್ಟರ್'. ಹೆಸರು ಬದಲಾಯಿಸಿಕೊಂಡಿದ್ದಾರಷ್ಟೇ. ಇಷ್ಟಕ್ಕೂ ಈ ಚಿತ್ರದಲ್ಲಿ ಭಂಗಿ ಸೇದುವ ಒಂದು ಹಾಡು ಇದೆಯಂತೆ. ಅದಕ್ಕೇ ಈ 'ಟೈಟಲ್ ಬದಲಾವಣೆಯ ಕೈಂಕರ್ಯ ಅನ್ನಿಸುತ್ತೆ. ಅಂದಹಾಗೆ ಭಂಗಿರಂಗ ಅಂತ ಒಬ್ಬರು ಚಿತ್ರಸಾಹಿತಿ ಇದ್ದಾರೆ ಅಂತ ನಿಮಗೆ ಗೊತ್ತಿರಲೇಬೇಕು. ಅದೇ 'ಒಳಗೆ ಸೇರಿದರೆ ಗುಂಡು ಹುಡುಗಿ ಆಗುವಳು ಗಂಡು' ಹಾಡು ಬರೆದಿದ್ದರಲ್ಲಾ... ಅದೇ ಭಂಗಿರಂಗ. ಅವರಿಗೂ ಈ ಸಿನಿಮಾಗೂ ಏನಾದರೂ ಕನೆಕ್ಷನ್ ಇದೆಯಾ ಅಂತ ಯೋಚಿಸಬೇಕಾ, ಬೇಡವಾ, ಗೊತ್ತಿಲ್ಲ.




ತಿಪ್ಪಜ್ಜಿ ಸರ್ಕಲ್
ಧ್ರುವ ಶರ್ಮಾ
ನೇಹಾ ಪಾಟೀಲ್

ಸುನಿ ಟು ಸರ್ಜಾ




ಡಬಲ್ ಮೀನಿಂಗ್ ಡೈಲಾಗ್‌ಗಳ ಗಿಮಿಕ್‌ನಿಂದ ತಮ್ಮ ಮೊದಲ ಸಿನಿಮಾ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ'ಯನ್ನು ಗೆಲ್ಲಿಸಿದ್ದ ನಿರ್ದೇಶಕ ಸುನಿ ಆಮೇಲೆ 'ಬಹುಪರಾಕ್' ಮಾಡಿ ಸದ್ದಿಲ್ಲದಂತೆ ಸೋಲೊಪ್ಪಿಕೊಳ್ಳಬೇಕಾಯಿತು. ಆ ಸೋಲಿನ ಮೂಲಕ ತಮ್ಮ ಬಗ್ಗೆ ತಮಗೇ ಇದ್ದ ಒಂದಿಷ್ಟು ಭ್ರಮೆಗಳು 'ಸುಳ್ಳು' ಎಂಬುದಾಗಿ ಅರ್ಥಮಾಡಿಕೊ ಅವಕಾಶ ಸಿಕ್ಕಿತು. ಇಂತಹ ಸುನಿ ಎಂಬ ಎರಡಕ್ಷರದ ಹುಡುಗ ಈಗ ಸರ್ಜಾ ಹಾಕಿಕೊಂಡು ಒಂದು ಸಿನಿಮಾ ಮಾಡುವ ಯೋಜನೆಯಲ್ಲಿ ಈ ಚಿತ್ರಕ್ಕೆ ಶಶಾಂಕ್ ಶಿಷ್ಯ ಅಂದರೆ ಶಶಾಂಕ್ ನಿರ್ದೇಶನದ 'ಸಿಕ್ಸರ್' 'ಬಚ್ಚನ್' ಚಿತ್ರಗಳಿಗೆ ಸಂಭಾಷಣೆ ಬರೆದಿದ್ದ ಪ್ರಸನ್ನ ಎಂಬ ಹುಡುಗ ಚಿತ್ರಕಥೆ, ಸಂಭಾಷಣೆ ಬರೆದರೆ ಸುನಿ ಬರೀ ಆಕ್ಷನ್, ಕಟ್ ಮಾತ್ರ ಹೇಳ ಶಿವರಾಜಕುಮಾರ್ ಭಕ್ತ ಕೆ.ಪಿ.ಶ್ರೀಕಾಂತ್ ಹಣ ಹಾಕುತ್ತಿರುವ ಈ ಸಿನಿ ಅಕ್ಟೋಬರ್ ತಿಂಗಳಿನಲ್ಲಿ ಮುಹೂರ್ತ ನಡೆಯುತ್ತಂತೆ. ಸುನಿ ಈ ಗೆದ್ದರೆ ಉಳಿಯುತ್ತಾರೆ.


ಸುನಿಲ್ ಶೆಟ್ಟಿ ಬರುತ್ತಿದ್ದಾ



ಜೆ.ಕೆ. ಎಂಬ ಸೀನಿಯರ್ ಅಸೋಸಿಯೇಟ್ ಡೈರೆಕ್ಟರ್ 'ಶತ್ರು' ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಲು ಹೋಗಿ ಸೋಲು ಕಂಡವರು. ನೆನಪಿರಲಿ ಪ್ರೇಮ್ ಕಷ್ಟಪಟ್ಟು ಬಾಡಿ ಬೆಳೆಸಿಕೊಂಡರೂ 'ಶತ್ರು' ಮೂಲಕ ಆಕ್ಷನ್ ಹೀರೋ ಆಗುವ ಅವರ ಕನಸು ನನಸಾಗಲೇ ಇಲ್ಲ. ಅದೇಕೋ ಜನ 'ಶತ್ರು'ವನ್ನು ಮಿತ್ರನಾಗಿ ನೋಡಲೇ ಇಲ್ಲ. ಆಮೇಲೆ ಈ ಜೆ.ಕೆ. ಶ್ರೀನಗರ ಕಿಟ್ಟಿ ಹಾಕಿಕೊಂಡು 'ಸುಬ್ರಮಣಿ' ಎಂಬ ಸಿನಿಮ ಮಾಡಲು ಮುಂದಾದರು. ಅದೂ ನಡೆಯುತ್ತಿದೆ ಒಂದು ಕಡೆ. ಇನ್ನೊಂದು ಕಡೆ ಈ ಜೆ.ಕೆ. ಏನು ಮಾಡುತ್ತಿದ್ದಾರೆ ಅಂದರೆ ಬಾಲಿವುಡ್‌ನಲ್ಲಿ ಭಯಂಕರವಾಗಿ ಹೆಸರು ಮಾಡಿರುವ ಸುನಿಲ್ ಶೆಟ್ಟಿ ಎಂಬ ಕುಡ್ಲದ ವ್ಯಕ್ತಿ ಹಾಕಿಕೊಂಡು 'ಅಲೋನ್' ಎನ್ನುವ ದೆವ್ವದ ಕಥೆ ಹೇಳಲು ತಂಡ ಕಟ್ಟಿಕೊಂಡಿ ಜೆ.ಕೆ. ಪ್ರಕಾರ ಈ ಕಥೆಯನ್ನು ಕನ್ನಡಿಗರು, ತೆಲುಗಿಗರು ಹಾಗೂ ಭಾಷಿಕರು ಕೇಳಬೇಕಂತೆ. ಅಂದರೆ 'ಅಲೋನ್' ಮೂರು ಭಾಷೆಯ ಸಿ ಅನುತು ಅನ್ನೋರು ಕಾಸು ಹಾಕುತ್ತಿರುವ ಈ ಚಿತ್ರಕ್ಕೆ ಒಟ್ಟು ನ ದಿನಗಳ ಕಾಲ ಶೂಟಿಂಗ್ ನಡೆಯಲಿದ್ದು ಮಂಗಳೂರಿನ ಬೀಚಿನಲ್ಲಿ ದ ಸೆಟ್ ಹಾಕ್ತಾರಂತೆ. ಇದೇ ಜೆ.ಕೆ.ಯು 'ಶತ್ರು'ಗೆ ಫ್ಲಾಪ್ ಹಾಡುಗಳನ್ನು ಕ ಬಾಂಬೆಯಲ್ಲಿ ವಾಸಿಸುತ್ತಿರುವ ಮಂಗಳೂರಿನ ಮ್ಯೂಸಿಕ್ ಡೈರೆಕ್ಟರ್ ಸ ಶೆಟ್ಟಿ ಟ್ಯೂನ್ ಹಾಕ್ತಾರಂತೆ.

ಕಿಟ್ಟಪ್ಪ-ಸುದೀಪ್ ಸಾಥ್ ಸಾ





'ಮುಂಗಾರು ಮಳೆ' ಚಿತ್ರಕ್ಕೆ ಕ್ಯಾಮೆರಾ ಹಿಡಿದು ಫೇಮಸ್ಸಾದ ಎಸ್.ಕೃಷ್ಣ ಎಂಬ ಛಾಯಾಗ್ರಾಹಕ ಆಮೇಲೆ 'ಗಜಕೇಸರಿ' ಮೂಲಕ ಡೈರೆಕ್ಟರ್ ಆಗಿ ತಮ್ಮ ಹೆಸರನ್ನು ಮತ್ತಷ್ಟು ಫೇಮಸ್ ಮಾಡಿಕೊಂಡರು. ಈ ಕೃಷ್ಣ ಅಲಿಯಾಸ್ ಕಿಟ್ಟಪ್ಪ ಈಗ ಸುದೀಪ್ ಜೊತೆ ಒಂದು ಸಿನಿಮ ಮಾಡಲು ಹೊರಟಿದ್ದಾರೆ. ಎಂ.ಎನ್.ಕುಮಾರ್ ಈ ಚಿತ್ರಕ್ಕೆ ಬಂಡವಾಳ ಹಾಕುತ್ತಿರೋರು. ಈ ಕುಮಾರ್ ಇತ್ತೀಚೆಗಷ್ಟೇ ಹಿಟ್ ಆದ 'ಮಾಣಿಕ್ಯ'ಕ್ಕೆ ಹಣ ಹಾಕಿದ್ದರು. ಕೃಷ್ಣ ಈ ಮೊದಲೇ ಸುದೀಪ್ ಕಾಲ್‌ಶೀಟ್ ಪಡೆದುಕೊಂಡು ನಿರ್ಮಾಪಕರ ತಲಾಷೆಯಲ್ಲಿದ್ದರು. ಈಗ ಕುಮಾರ್ ಸಿಕ್ಕಿದ್ದಾರೆ. ಅಂದಹಾಗೆ ಚಿತ್ರದ ಹೆಸರು 'ಹೆಬ್ಬುಲಿ'.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Ba
Fax : 2660